# ಸಮಾಜ ವಿಜ್ಞಾನ

## ಭಾಗ -1

## ತರಗತಿ V

**Social Science**
**Std V**
**Part I**
**Kannada Medium**




ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ಕೇರಳ

**2024**

ST-537-1-SOC. SCI. (K)-5-VOL-1

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ. ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ. ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**5**

**ಸಮಾಜ ವಿಜ್ಞಾನ**

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First edition: 2024
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಇದು ಐದನೇ ತರಗತಿಯ ಸಮಾಜ ವಿಜ್ಞಾನ ಪಾಠ ಪುಸ್ತಕವಾಗಿದೆ. ಹಿಂದಿನ ತರಗತಿಗಳಲ್ಲಿನಾವು ಪರಿಸರ ಅಧ್ಯಯನದ ಭಾಗವಾಗಿ ವಿಜ್ಞಾನ ಮತ್ತು ಸಮಾಜ ವಿಜ್ಞಾನವನ್ನು ಕಲಿತಿದ್ದೇವೆ. ಇನ್ನು ಮುಂದೆ ನಾವು ಅದರಿಂದ ವಿಭಿನ್ನವಾಗಿ ಸಮಾಜ ವಿಜ್ಞಾನವನ್ನು ಪ್ರತ್ಯೇಕ ಒಂದು ವಿಷಯವಾಗಿ ಕಲಿಯಲಿದ್ದೇವೆ. ನಿತ್ಯಜೀವನದಲ್ಲಿನಾವು ಕಾಣುವ, ಪಾಲ್ಗೊಳ್ಳುವ ವಿವಿಧ ಸಾಮಾಜಿಕ- ಆರ್ಥಿಕ - ಸಾಂಸ್ಕೃತಿಕ - ರಾಜಕೀಯ ವ್ಯವಸ್ಥೆಗಳ ಕುರಿತು ತಿಳಿಯಲು ಹಾಗೂ ನಾವು ಬದುಕುವ ಪ್ರಪಂಚದ ಸಾಮಾಜಿಕ ವಿದ್ಯಮಾನಗಳನ್ನು ವಿವರಿಸಲು ಸಾಧ್ಯವಾಗುವ ರೀತಿಯಲ್ಲಿ ಈ ಪುಸ್ತಕವನ್ನು ವಿನ್ಯಾಸಗೊಳಿಸಲಾಗಿದೆ.

ಪರಿಸರ ಅಧ್ಯಯನದಿಂದ ಸಮಾಜವಿಜ್ಞಾನಕ್ಕೆ ಪ್ರವೇಶ ಪಾಠವಾಗಿ 'ಪೀಲಿಯ ಗ್ರಾಮ' ಎಂಬ ಪಾಠಭಾಗವನ್ನು ಚಿತ್ರಕಥೆಯ ರೂಪದಲ್ಲಿ ನೀಡಲಾಗಿದೆ. ಸಾಮಾಜಿಕ ಜೀವನಕ್ಕೆ ಅಗತ್ಯವಾದ ಅರಿವನ್ನು ತಿಳಿದುಕೊಳ್ಳಲು ಮತ್ತು ಅದನ್ನು ಜೀವನದಲ್ಲಿ ಅಳವಡಿಸಲು ಈ ಪಾಠಭಾಗ ಸಹಾಯಕವಾಗಬಹುದು.

'ಆಹಾರ ಮತ್ತು ಮಾನವರು' ಎಂಬ ಪಾಠ ಭಾಗದಲ್ಲಿ ಆಹಾರ ಅಭ್ಯಾಸದ ಉಗಮ - ವಿಕಾಸ ಮತ್ತು ಪರಿಣಾಮಗಳನ್ನು ತಿಳಿಸಲಾಗಿದೆ. 'ವೃತ್ತಿ ವೈವಿಧ್ಯಗಳು' ಎಂಬ ಪಾಠ ಭಾಗವು ಜೀವನೋಪಾಯಕ್ಕೆ ಮತ್ತು ಉಳಿವಿಗಾಗಿ ಜನರು ತೊಡಗುವ ವಿವಿಧ ಉದ್ಯೋಗಗಳು ಮತ್ತು ಕಸುಬುಗಳ ಮಹತ್ವವನ್ನು ತಿಳಿಯಲು ಸಹಾಯಕವಾಗಿದೆ.

ಬಟ್ಟೆಯ ಉಗಮ, ಹವಾಗುಣ ಮತ್ತು ಸಂಸ್ಕೃತಿಯು ವಸ್ತ್ರಧಾರಣೆಯ ಮೇಲೆ ಬೀರಿದ ಪ್ರಭಾವವನ್ನು 'ವಸ್ತ್ರಗಳು ವಿವಿಧ ಕಾಲಘಟ್ಟಗಳಲ್ಲಿ' ಎಂಬ ಪಾಠ ಭಾಗದಲ್ಲಿ ಚರ್ಚಿಸಲಾಗಿದೆ.

ಭೂಪಟ ಓದಿನ ಮಹತ್ವ ಮತ್ತು ನಿತ್ಯಜೀವನದಲ್ಲಿ ಅವುಗಳ ಬಳಕೆಯ ಬಗ್ಗೆ ವಿವರಿಸಲು 'ರಚಿಸುವ ಓದುವ ' ಪಾಠ ಸೂಕ್ತವಾಗಿದೆ. ನಮ್ಮ ಸಮಾಜದ ಆಡಳಿತ ವ್ಯವಸ್ಥೆ ಮತ್ತು ಚುನಾವಣಾ ಪ್ರಕ್ರಿಯೆಗಳ ಪ್ರಾಥಮಿಕ ತಿಳುವಳಿಕೆಗಾಗಿ 'ಜನರು ಜನರಿಂದ ' ಎಂಬ ಪಾಠಭಾಗವು ಉಪಯುಕ್ತವಾಗಿದೆ.

ಪರಿಷ್ಕೃತ ಕೇರಳ ಪಠ್ಯಕ್ರಮ ಚೌಕಟ್ಟು 2023 ಮುಂದಿಡುವ ಸಮಾಜ ವಿಜ್ಞಾನ ಕಲಿಕಾ ಸಮೀಪನದ ಅಧಾರದಲ್ಲಿ ತಯಾರಿಸಿದ ಐದನೇ ತರಗತಿಯ ಸಮಾಜ ವಿಜ್ಞಾನ ಭಾಗ 1 ಪುಸ್ತಕವು ನಿಮ್ಮ ಭವಿಷ್ಯಕ್ಕೆ ಜ್ಞಾನದ ಸಂಪತ್ತಾಗುವುದು ಎಂದು ಭಾವಿಸುತ್ತೇನೆ. ಸಮಾಜವನ್ನು ಆಳವಾಗಿ ತಿಳಿಯಲು ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಈ ಪುಸ್ತಕ ಉಪಯುಕ್ತವಾಗಿದೆ ಎಂಬುದು ಖಚಿತ.


ಡಾ .ಜಯಪ್ರಕಾಶ್ ಆರ್.ಕೆ

ನಿರ್ದೇಶಕರು

ಎಸ್.ಸಿ. ಇ.ಆರ್. ಟಿ

# WORKSHOP PARTICIPANTS

## Advisor

**Dr. K.N. Ganesh**
Chairman
Kerala Council for Historical Research

## Chairperson

**Dr. Abhilash Kumar K.G**
Assistant. Professor
Department of Political Science,
B.J.M. Govt. College, Chavara

## Experts

**Dr. Nandakumar B. V.**
Assistant Professor
Department of History
Sree Narayana College,Varkala

**Dr. Suresh Babu G.S.**
Professor in Sociology of Education,
Zakir Hussain Center for Educational Studies
Jawaharlal Nehru University, New Delhi

## Participants

**Achuthankutty K.**
UPST (Retd.)
AUP School Irumpalassery,
Palakkad

**Pavithan C.K.**
HST (Retd.)
GHSS, Kaniyampatta,
Wayanad

**Nisha T. S.**
UPST
S.N.V. UPS,
Marutamanpally, Kollam

**Venugopalan K.**
BPC (Retd.)
Pattambi, Palakkad

**Santosh Veliyannoor**
Artist, Kottayam

**Beena. T.Chandapilla**
UPST,
Govt. UPS, Kozhancherry,
Pathanamthitta

**Pushpangadan U.**
UPST
GHSS Anchal,
Punalur, Kollam

**Radhakrishnan P.**
UPST (Retd.)
GLP School Alur, Palakkad

**Anas N. S.**
Research Scholar
NSS College, Nilamel,
Kollam

**Vishnu P.S.**
Artist, Nemom,
Thiruvananthapuram

**Benoy V.**
Principal
GHSS, Payambra,
Kozhikode

**Margaret Lini V.P.**
HST
Govt.V&HSS, Vellanadu,
Thiruvananthapuram

**Valsala Kumari K.R.**
HST (Retd.)
PBMHSS, Kodungallur,
Thrissur

**Niketan M.**
Student (+1), GHSS
Medical College Campus,
Kozhikode

## Kannada Version

**Expert**

**Sanjeeva. M**
Head Master, G.V.H.S.S
Karadka

**Language Expert**

**Vishalaksha. M**
H.S.T Kannada (Rtd)
S.G.K.H.S Kudlu

**Participants**

**Vijaya Kumar P**
H.M, GSBS Kumble

**Sunil Kumar. M**
H.S.T, G.V.H.S.S Delampady

**Rajani C.K**
U.P.S.T, V.A.U.P.S
Miyapadavu

**Nayana Prasad H.T**
U.P.S.T, GHS Kadambar

**Shakila V**
U.P.S.T, Bakrabail
A.U.P.S Pathur

## Academic Coordinator

**Dr. Anjana V. R. Chandran**
Research Officer, SCERT KERALA

State Council For Educational Research And Training (SCERT)
Vidya Bhavan, Pujappura, Thiruvananthapuram 695 012

# ಅನುಕ್ರಮಣಿಕೆ


1. ಪೀಲಿಯ ಗ್ರಾಮ . . . . . . . . . . . . . . . . . . . . . . . . 7 - 26
2. ಆಹಾರ ಮತ್ತು ಮನುಷ್ಯರು . . . . . . . . . . . . . . . . . . 27 - 39
3. ವೃತ್ತಿ ವೈವಿಧ್ಯಗಳು . . . . . . . . . . . . . . . . . . . . . . 40 - 49
4. ವಸ್ತ್ರಗಳು ವಿವಿಧ ಕಾಲಘಟ್ಟಗಳಲ್ಲಿ . . . . . . . . . . . . . . 50 - 65
5. ರಚಿಸುವ ಓದುವ . . . . . . . . . . . . . . . . . . . . . . . 66 - 83
6. ಜನರು ಜನರಿಂದ . . . . . . . . . . . . . . . . . . . . . . . 84 - 96


| ಈ ಪಾಠಪುಸ್ತಕದಲ್ಲಿ ಕಲಿಕಾ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ. | |
|---|---|
| ಹೆಚ್ಚಿನ ಓದಿಗೆ *(ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ)* | ಪ್ರಶ್ನೆ |
| ಚಟುವಟಿಕೆ | ಮುಂದುವರಿದ ಚಟುವಟಿಕೆಗಳು |
| ಚರ್ಚಿಸೋಣ | ಬಣ್ಣ ಹಚ್ಚೋಣ |
| ಚಿತ್ರ ಸಂಗ್ರಹ | ಹಾಡು ಹಾಡೋಣ |
| ಕೊಲಾಜ್ | ಆಡೋಣ |
| ಓದೋಣ | ಬರೆಯೋಣ |
| ನಿರ್ಮಿಸೋಣ | ಪ್ಲ ಕಾರ್ಡ್ ನಿರ್ಮಾಣ |
| ರೋಲ್ ಪ್ಲೇ | ರಚಿಸೋಣ |
| ಐ.ಸಿ.ಟಿ | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;


**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

1


# ಪೀಲಿಯ ಗ್ರಾಮ



ಗೆಳೆಯರೇ,

ರಜಾಕಾಲ ಕೊನೆಗೊಳ್ಳುತ್ತಾ ಬಂತು. ಅದರ ಮೊದಲು ಪೀಲಿ ತನ್ನ ಸಹಪಾಠಿಗಳನ್ನು ತನ್ನ ಗ್ರಾಮಕ್ಕೆ ಆಹ್ವಾನಿಸಿದಳು. ಪೀಲಿಯ ನಾಲ್ಕು ಮಂದಿ ಗೆಳೆಯರು ಗ್ರಾಮವನ್ನು ಸಂದರ್ಶಿಸುವ ಸಿದ್ಧತೆಯಲ್ಲಿದ್ದಾರೆ. ನಿಮಗೂ ಯಾತ್ರೆಗಳು ಇಷ್ಟವಲ್ಲವೇ? ನಾವೂ ಸಹ ಅವರೊಂದಿಗೆ ಪೀಲಿಯ ಗ್ರಾಮಕ್ಕೆ ಒಮ್ಮೆ ಹೋಗಿ ಬರೋಣವೇ?

## ಯಾತ್ರೆಯ ಮೊದಲು ನಾವು ಪರಸ್ಪರ ಪರಿಚಯ ಮಾಡೋಣ.




ಗುಂಪಿನಲ್ಲಿ ಐದನೆಯವರಾಗಿ ನಿಮ್ಮ ಚಿತ್ರವನ್ನು ಬಿಡಿಸಿ ಸ್ವತಃ ಪರಿಚಯಿಸಿರಿ.

(ಇಲ್ಲಿ ನಿಮ್ಮ ಚಿತ್ರವನ್ನು ಬಿಡಿಸಿರಿ.)

ನನ್ನ ಹೆಸರು ..........................................................

..........................................................

..........................................................

..........................................................

..........................................................

..........................................................

ಇತರ ರಾಜ್ಯಗಳಿಂದ ಕೇರಳಕ್ಕೆ ಅತಿಥಿ ಕಾರ್ಮಿಕರು ಆಗಮಿಸುವರು. ಅಸ್ಸಾಂ, ಬಿಹಾರ, ಪಶ್ಚಿಮಬಂಗಾಳ, ಜಾರ್ಖಂಡ್ ಎಂಬೀ ರಾಜ್ಯಗಳಿಂದ ಹೆಚ್ಚಿನವರು ಕುಟುಂಬ ಸಹಿತ ಇಲ್ಲಿಗೆ ಆಗಮಿಸುವರು. ಅವರ ಮಕ್ಕಳನ್ನು ಕೇರಳದ ಸಾರ್ವಜನಿಕ ಶಾಲೆಗಳಲ್ಲಿ ಕಲಿಸುತ್ತಿರುವರು. ಹಾಗೆ ಚಮೇಲಿಯೂ ಕೇರಳದಲ್ಲಿ ಕಲಿಯುತ್ತಿರುವಳು. ಚಮೇಲಿ ತನ್ನ ತಾಯಿ ಮತ್ತು ತಂದೆಯನ್ನು 'ಮಾ' ಮತ್ತು 'ಪಾಪ್ಪಾ' ಎಂದು ಕರೆಯುವಳು.

ನೀವು ಸ್ವತಃ ಪರಿಚಯ ಮಾಡಿಕೊಂಡಿರಲ್ಲವೇ? ನೀವು ಹೇಳಿದ ಮಾಹಿತಿಗಳೊಂದಿಗೆ ನಿಮ್ಮ ಹವ್ಯಾಸ, ಬಿಡುವಿನ ಸಮಯವನ್ನು ಕಳೆಯುವ ರೀತಿ, ಆಸೆಗಳು, ಕನಸುಗಳು ಎಂಬಿವುಗಳನ್ನೆಲ್ಲ ಸೇರಿಸಿ ವೈಯಕ್ತಿಕ ಪ್ರೊಫೈಲನ್ನು (ವೈಯಕ್ತಿಕ ಮಾಹಿತಿಗಳು)ವಿಸ್ತರಿಸಿ ಬರೆಯಲು ಪ್ರಯತ್ನಿಸಿರಿ. ಟೀಚರ್ ಸಹ ಇದಕ್ಕೆ ಸಹಾಯ ಮಾಡುವರು.

## ಪ್ರವಾಸಕ್ಕೆ ತಯಾರಾಗೋಣ











ST-537-2-SOC. SCI. (K)-5-VOL-1




ನೀವೂ ಕೂಡಾ ಇವರೊಂದಿಗೆ ಪ್ರಯಾಣ ಮಾಡಲು ಸಿದ್ಧರಾಗಿರುವಿರಲ್ಲವೇ? ನಿಮಗೂ ಕೆಲವು ಆತಂಕಗಳು ಇರಬಹುದಲ್ಲವೇ? ನಿಮ್ಮ ಚಿತ್ರವನ್ನು ಕೆಳಗೆ ರಚಿಸಿ, ನಿಮ್ಮ ಆಲೋಚನೆಗಳನ್ನು ಬರೆಯಿರಿ.

ವಿಭಿನ್ನ ಜೀವನ ಹಿನ್ನೆಲೆಗಳಿಂದ ಬಂದ ಇವರು ಹೇಗೆ ಇಷ್ಟೊಂದು ಆಪ್ತ ಗೆಳೆಯರಾದರು? ಇವರು ಗೆಳೆಯರಾಗಲು ಕಾರಣವಾದ ಸಂದರ್ಭವನ್ನು ಊಹಿಸಿ ತರಗತಿಯಲ್ಲಿ ಒಂದು ರೋಲ್ ಪ್ಲೇ ಪ್ರದರ್ಶಿಸಿರಿ.



ಪ್ರವಾಸದ ಮೊದಲು ನಾವು ಕೆಲವು ತಯಾರಿಗಳನ್ನು ಮಾಡಬೇಕಲ್ಲವೇ? ಪ್ರವಾಸ ಹೋಗುವುದು ಎಲ್ಲಿಗೆ? ಯಾಕೆ? ಹೇಗೆ? ಎಂಬುವುದಕ್ಕೆ ಅನುಸರಿಸಿ ಮಾನಸಿಕವಾಗಿ ತಯಾರಿಗಳನ್ನು ನಾವು ಮಾಡಬೇಕು.

ನಾವು ಪ್ರವಾಸಕ್ಕೆ ಸಿದ್ಧರಾಗುವಾಗ ಚೀಲದಲ್ಲಿರುವ ವಸ್ತುಗಳ ಜೊತೆಗೆ ನಮಗೆ ಕೆಲವು ಆಲೋಚನೆಗಳೂ ಹಾದು ಬರುವುದಲ್ಲವೇ? ಇವರು ಕೊಂಡೊಯ್ಯುವ ಚೀಲದಲ್ಲಿ ಏನೆಲ್ಲಾ ಇವೆ ಎಂಬುದನ್ನು ನೋಡೋಣ.






ನೀವು ಪ್ರವಾಸಕ್ಕಾಗಿ ಯಾವೆಲ್ಲ ವಸ್ತುಗಳನ್ನು ತೆಗೆದಿರಿಸುವಿರಿ? ಯಾವೆಲ್ಲಾ ವಿಷಯಗಳನ್ನು ಆಲೋಚನೆ ಮಾಡುವಿರಿ? ನಿಮ್ಮ ಚೀಲದಲ್ಲಿ ತುಂಬಿಸುವ ವಸ್ತುಗಳ ಚಿತ್ರ ಬಿಡಿಸಿ, ನಿಮ್ಮ ಆಲೋಚನೆಯನ್ನು ಬರೆದು ಮಂಡಿಸಿರಿ.





## ಪೀಲಿಯ ಗ್ರಾಮದೆಡೆಗೆ




ಪ್ರವಾಸ ಹಾಡುಗಳ ಕುರಿತು ತಿಳಿದಿದೆಯೇ? ಅವುಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಗುಂಪಾಗಿ ಹಾಡಿರಿ. ನಿಮಗೆ ಇಷ್ಟವಾದ ಒಂದು ಪ್ರವಾಸದ ಹಾಡನ್ನು ಇಲ್ಲಿ ಬರೆಯಿರಿ.


## ಪೀಲಿಯ ಗ್ರಾಮ







ಪೀಲಿಗಿರುವ ಪ್ರತಿಕ್ರಿಯೆಯನ್ನು ಬರೆಯಿರಿ.




ಪೀಲಿಯ ಗ್ರಾಮದ ಕುರಿತು ನಿಮ್ಮ ನಿರೀಕ್ಷೆಗಳು ಏನೆಲ್ಲಾ?

. . . . . . . . . . . . . . . . . . . . . .
. . . . . . . . . . . . . . . . . . . . . .
. . . . . . . . . . . . . . . . . . . . . .
. . . . . . . . . . . . . . . . . . . . . .
. . . . . . . . . . . . . . . . . . . . . .
. . . . . . . . . . . . . . . . . . . . . .


ಪೀಲಿಯ ಗ್ರಾಮದ ಒಂದು ಕಾಲ್ಪನಿಕ ಚಿತ್ರವನ್ನು ನಿಮ್ಮ ನೋಟು ಪುಸ್ತಕದಲ್ಲಿ ರಚಿಸಿರಿ. ಟೀಚರ ಸಹಾಯವನ್ನು ಪಡೆಯಿರಿ.









ನನಗೆ ತಿನ್ನಲಿರುವುದನ್ನು ಮನೆಯಿಂದ ಕೊಟ್ಟು ಕಳುಹಿಸಿದ್ದಾರೆ. ನಾನು ಅದನ್ನು ತಿನ್ನುತ್ತೇನೆ.
ಹೋ..... ಅವನ ಅಹಂಕಾರವೇ
ಮಗನೇ, ಅದೆಲ್ಲ ಯಾವಾಗಲೂ ತಿನ್ನುವವುಗಳಲ್ಲವೇ? ಇದನ್ನು ತಿಂದು ನೋಡು. ಇಲ್ಲಿನ ಬಯಲಿನಲ್ಲಿ ಬೆಳೆದ ಭತ್ತವನ್ನು ಕುಟ್ಟಿ ಮಾಡಿದ ಅಕ್ಕಿಯಿಂದ ತಯಾರಿಸಿದ ಊಟವಾಗಿದೆ. ಜೊತೆಗೆ ಮರಗೆಣಸು ಸಹ ಇದೆ. ಪೀಲಿಯ ಅಪ್ಪ ಹೊಳೆಯಿಂದ ಹಿಡಿದ ಮೀನಿನ ಪದಾರ್ಥವೂ ಇದೆ. ಅವಳ ಅಪ್ಪ ಮೀನಿನ ಪದಾರ್ಥ ತಯಾರಿಸಿದ್ದಾರೆ.
ನಾನು ಇಷ್ಟು ರುಚಿಕರವಾದ ಆಹಾರವನ್ನು ಸೇವಿಸುವುದು ಇದೇ ಮೊದಲು. ನನ್ನ ಮನೆಯಲ್ಲಿ ಇಂತವುಗಳು ಇಲ್ಲ.
ಪೀಲಿ.... ತುಂಬಾ ಚೆನ್ನಾಗಿದೆ. ಎಂತಹ ಒಳ್ಳೆಯ ರುಚಿ! ಇದನ್ನು ಹೇಗೆ ತಯಾರಿಸುವುದೆಂದು ಹೇಳಿ ಕೊಡಬೇಕು.





ನಾವು ಪೀಲಿಯ ಅಪ್ಪನ ಸಂದರ್ಶನವನ್ನು ನಡೆಸೋಣವೇ? ಅದಕ್ಕಿರುವ ಪ್ರಶ್ನೆಗಳನ್ನು ತಯಾರಿಸಿ. ಟೀಚರ್ ಅಗತ್ಯವಾದ ಸಹಾಯ ಮಾಡುವರು.









ಗೆಳೆಯರಿಗಾಗಿ ಒಂದು ತಿನಿಸು ತಯಾರಿಸೋಣವೇ? ನಿಮ್ಮ ಪರಿಸರದಲ್ಲಿ ಲಭಿಸುವ ಆಹಾರ ವಸ್ತುಗಳನ್ನು ಉಪಯೋಗಿಸಿ ಹಿರಿಯರ ಸಹಾಯದಿಂದ ತಿನಿಸುಗಳನ್ನು ತಯಾರಿಸಿ ತರಗತಿಗೆ ತನ್ನಿರಿ. ತಂದಂತಹ ತಿನಿಸುಗಳನ್ನು ಎಲ್ಲರೂ ಒಟ್ಟಾಗಿ ಹಂಚಿ ತಿನ್ನುವಿರಲ್ಲವೇ?



ವಿಕ್ಕಿ ಮತ್ತು ಅಪ್ಪು ಒಂದೇ ನಗರದ ಬಗ್ಗೆ ಎರಡು ರೀತಿಯ ಅಭಿಪ್ರಾಯಗಳನ್ನು ಹೇಳಿದುದು ಯಾಕಾಗಿರಬಹುದು?





ಪೀಲಿಯ ಅಪ್ಪನ ಜೊತೆ ಈ ಗ್ರಾಮದ ವಿನೋದಗಳನ್ನು ನಾವು ನೋಡಿ ಬರೋಣ.

ನೀವೂ ಜೀವನದಲ್ಲಿ ಸಂತೋಷಕರವಾದ ಕ್ಷಣಗಳನ್ನು ಅನುಭವಿಸಿರಬಹುದಲ್ಲವೇ? ಯಾವೆಲ್ಲ ಸಂದರ್ಭಗಳಲ್ಲಿ, ಏನೆಲ್ಲಾ ಲಭಿಸಿದರೆ ನಿಮಗೆ ಸಂತೋಷವಾಗುವುದು? ಶಾಲೆಯ ಡಿಜಿಟಲ್ ಉಪಕರಣಗಳ ಸಹಾಯದಿಂದ ಟೀಚರ ಮೇಲ್ವಿಚಾರಣೆಯಲ್ಲಿ 'ನನ್ನ ಸಂತೋಷಗಳು' ಎಂಬ ಹೆಸರಿನಲ್ಲಿ ಒಂದು ಸೆಲ್ಫಿ ವೀಡಿಯೋ ತಯಾರಿಸಿರಿ.

## ಗ್ರಾಮ ಸೌಂದರ್ಯ

ಪೀಲಿಯ ಗ್ರಾಮದಲ್ಲಿ ನಡೆದು ಆ ಗ್ರಾಮ ಎಷ್ಟು ಸರಳವಾಗಿದೆ ಮತ್ತು ಸುಂದರವಾಗಿದೆ ಎಂದು ನೋಡಿ ತಿಳಿಯಿರಿ.





ನಿಮ್ಮ ಊರಿನಲ್ಲಿ ವಾರದ ಸಂತೆಗಳು, ಸ್ಥಿರ ಸಂತೆಗಳು, ಸಂಜೆ ಸಂತೆಗಳು ಎಂಬಿವುಗಳು ಇರಬಹುದಲ್ಲವೇ? ಹಿರಿಯರೊಂದಿಗೆ ಸಂದರ್ಶಿಸಿ ಅಲ್ಲಿನ ವ್ಯವಹಾರಗಳನ್ನು ನಿರೀಕ್ಷಿಸಿ ಟಿಪ್ಪಣಿ ಬರೆಯಿರಿ.


ಪೀಲಿಯ ಅಪ್ಪ ಗೆಳೆಯರಿಗೆ ಮಡಲಿನ ಟೋಪಿ, ಬುಟ್ಟಿ ಮತ್ತು ಬಟ್ಟೆಗಳನ್ನು ಉಡುಗೊರೆಯಾಗಿ ನೀಡಿದರು.


ಮಡಲು, ಕಾಗದ ಮುಂತಾದವುಗಳಿಂದ ನಿಮಗೆ ಯಾವ ಯಾವ ವಸ್ತುಗಳನ್ನು ತಯಾರಿಸಲು ಸಾಧ್ಯ? ನೀವು ತಯಾರಿಸಿದವುಗಳನ್ನು ತರಗತಿಯಲ್ಲಿ ಪ್ರದರ್ಶಿಸಿರಿ.









ಈ ಗ್ರಾಮದಲ್ಲಿ ಅನೇಕ ಕೆರೆಗಳಿವೆ. ನಾನು ಮತ್ತು ಗೆಳೆಯರೆಲ್ಲ ಈಜಲು ಕಲಿತದ್ದು ಈ ಕೆರೆಯಲ್ಲಾಗಿದೆ.


ಇವರೆಲ್ಲ ಸಂತೋಷಪಡುವುದನ್ನು ಕಾಣುವಾಗ ನನಗೂ ಸಂತೋಷವಾಗುತ್ತಿದೆ.!


ಮೊದಲ ಬೆಳೆಯ ಕಟಾವಿನ ನಂತರ, ಎರಡನೇ ಬೆಳೆಯನ್ನು ಮಾಡುವುದಕ್ಕಾಗಿ ಉಳುಮೆ ಮಾಡಿ ಹದಗೊಳಿಸಿದ ಗದ್ದೆಯಲ್ಲಿ ಕಂಬಳವನ್ನು ನಡೆಸುತ್ತಾರೆ.




ನಿಮ್ಮ ಊರಿನಲ್ಲೂ ವಿವಿಧ ರೀತಿಯ ಉತ್ಸವಗಳು ನಡೆಯುವುದಲ್ಲವೇ? ಉತ್ಸವಗಳು, ಹಬ್ಬಗಳು, ತೆನೆ ಹಬ್ಬ, ಉರೂಸ್, ಜಾತ್ರೆಗಳು, ಕ್ರೀಡೋತ್ಸವಗಳು ಮೊದಲಾದ ಆಚರಣೆಗಳ ಬಗ್ಗೆ ಹಿರಿಯರಲ್ಲಿ ಕೇಳಿ ಒಂದು ವಿವರಣೆ ತಯಾರಿಸಿರಿ. ಹಿರಿಯರೊಂದಿಗೆ ಅದನ್ನು ನೋಡಲು ಹೋದ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿರಿ.





ಪೀಲಿ, ಗೆಳೆಯರು ಮತ್ತು ನೀವು ಗ್ರಾಮದ ದೃಶ್ಯಗಳನ್ನೆಲ್ಲ ನೋಡಿ ರಾತ್ರಿ ಹಿಂತಿರುಗಿ ಬರುತ್ತಿದ್ದೀರಿ. ಈ ಸಮಯದಲ್ಲಿ ನಾವೊಂದು ಹಾಡನ್ನು ರಚಿಸಿ ಹಾಡಿದರೋ? 'ನನ್ನ ಗ್ರಾಮ' ಎಂಬ ಶೀರ್ಷಿಕೆಯಲ್ಲಿ ಹಾಡು ತಯಾರಿಸೋಣ. ನೀವು ನೋಡಿರುವ ಗ್ರಾಮಗಳು, ಪೀಲಿಯ ಗ್ರಾಮ ಒಳಗೊಳ್ಳುವ ರೀತಿಯಲ್ಲಿ ಹಾಡನ್ನು ಬರೆದು ತರಗತಿಯಲ್ಲಿ ಸ್ವಂತ ತಾಳದಲ್ಲಿ ರಾಗವಾಗಿ ಹಾಡಿ ಪ್ರಸ್ತುತಪಡಿಸಿರಿ.






ನೀವು ವಾಸಿಸುವ ಸ್ಥಳದ ಹೊರಗೆ ನೋಡಿದಾಗ ರಾತ್ರಿಯ ದೃಶ್ಯಗಳು ಕಾಣುವ ಒಂದು ಸ್ಥಳವನ್ನು ವೀಕ್ಷಿಸಿರಿ. ನಮಗೆ ಯಾವ ಯಾವ ದೃಶ್ಯಗಳು ಕಾಣುತ್ತವೆ? ನಾವು ಅದನ್ನು ಚಿತ್ರ ಬಿಡಿಸಿ ನೋಡೋಣವೇ. ' ನನ್ನ ರಾತ್ರಿ ಮತ್ತು ಆಕಾಶ ' ಎಂಬ ಶೀರ್ಷಿಕೆಯಲ್ಲಿ ಗೆಳೆಯರು ಬರೆದ ಎಲ್ಲಾ ಚಿತ್ರಗಳನ್ನು ಸೇರಿಸಿ ತರಗತಿಯಲ್ಲಿ ಒಂದು ಚಿತ್ರ ಪ್ರದರ್ಶನವನ್ನು ಆಯೋಜಿಸಿರಿ.






ನಿಮ್ಮೊಂದಿಗೆ ಪೀಲಿಯ ಗ್ರಾಮಕ್ಕೆ ಬಂದ ಗೆಳೆಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರಲ್ಲವೇ. ನಿಮಗೂ ಪೀಲಿಯ ಗ್ರಾಮದ ಕುರಿತು ಹೇಳಲು ವಿಷಯಗಳಿರಬಹುದಲ್ಲವೇ? ಗ್ರಾಮದ ದೃಶ್ಯಗಳು ನಿಮ್ಮ ಮೇಲೆ ಯಾವ ರೀತಿ ಪ್ರಭಾವ ಬೀರಿದುವು ಎಂಬುದನ್ನು ಇಲ್ಲಿ ಬರೆಯಿರಿ.

ಪೀಲಿಯ ಗ್ರಾಮಕ್ಕೆ ಹೊರಡುವ ಮೊದಲು, ನಿಮಗೆ ಹಾಗೂ ಪೀಲಿಯ ಗೆಳೆಯರಿಗೆ ಪೀಲಿಯ ಗ್ರಾಮದ ಜನರ ಆನಂದಮಯ ಸಂದರ್ಭಗಳ ಕುರಿತು, ಪೀಲಿಯ ಗ್ರಾಮದ ಕುರಿತು, ಇತರರ ಜೀವನ ಶೈಲಿಯ ಬಗ್ಗೆ ಅನೇಕ ತಪ್ಪು ತಿಳುವಳಿಕೆಗಳಿದ್ದಿರಬಹುದಲ್ಲವೇ? ಅಂತಹ ಆಲೋಚನೆಗಳ ಮೂಲಕ ನೀವು ಜಗತ್ತನ್ನು ನೋಡಿರಬಹುದು. ಈ ಪ್ರವಾಸದ ಮಧ್ಯೆ ನೀವು ಅನೇಕ ತಪ್ಪು ತಿಳುವಳಿಕೆಗಳನ್ನು ಬಿಡುವಿರಲ್ಲವೇ? ಕೆಲವು ಹೊಸ ಅನುಭವಗಳು ಮತ್ತು ಜ್ಞಾನವನ್ನು ಪಡೆದಿರಲ್ಲವೇ? ಪೀಲಿಯ ಗೆಳೆಯರು ಹೇಳುವುದನ್ನು ಕೇಳಿ ನೋಡಿರಿ.




ನಾಲ್ವರೂ ತಮ್ಮ ತಪ್ಪು ತಿಳುವಳಿಕೆಯನ್ನು ತಿದ್ದಿ ಹೇಳಿದುದನ್ನು ಕೇಳಿದಿರಲ್ಲವೇ? ಪೀಲಿಯ ಗ್ರಾಮದಲ್ಲಿ ನೀವೂ ಸಂಚರಿಸಿದಿರಲ್ಲವೇ.ಈ ಪ್ರವಾಸದ ಮಧ್ಯೆ ನಿಮಗೆ ಯಾವೆಲ್ಲ ಹೊಸ ತಿಳುವಳಿಕೆಗಳು ಲಭಿಸಿದವು? ನಿಮ್ಮ ಅನುಭವವನ್ನು ಗೆಳೆಯರೊಂದಿಗೆ ಹಂಚಿಕೊಳ್ಳಿರಿ.


## ಮುಂದುವರಿದ ಚಟುವಟಿಕೆಗಳು

1. ಗ್ರಾಮ - ನಗರ ಪ್ರದೇಶಗಳ ವಿಶೇಷತೆಗಳನ್ನು ಕಂಡುಕೊಂಡು ಟಿಪ್ಪಣಿ ತಯಾರಿಸಿರಿ.
2. ನೀವು ವಾಸಿಸುವ ಪ್ರದೇಶದ ಸಾಮಾಜಿಕ ವಿಶೇಷತೆಗಳನ್ನು ಒಳಗೊಳ್ಳುವ ವೀಡಿಯೋ ಡಾಕ್ಯುಮೆಂಟನ್ನು ಟೀಚರ ಸಹಾಯದಿಂದ ತಯಾರಿಸಿರಿ.
3. 'ನನ್ನ ಊರಿನ ಆನಂದಮಯ ಸಂದರ್ಭಗಳು' ಎಂಬ ವಿಷಯದಲ್ಲಿ ಸೆಮಿನಾರ್ ಆಯೋಜಿಸಿರಿ.

   ಸೆಮಿನಾರ್ ನಲ್ಲಿ ಒಳಗೊಳ್ಳಬೇಕಾದವುಗಳು:

   - ಪರಿಸರ
   - ಆಹಾರ ಕ್ರಮಗಳು
   - ಕೃಷಿ
   - ಮಾರುಕಟ್ಟೆ
   - ಆಟಗಳು, ಆಟದ ಸ್ಥಳಗಳು
   - ಆಚರಣೆಗಳು
   - ರಾತ್ರಿಕಾಲದ ದೃಶ್ಯಗಳು

# 2 ಆಹಾರ ಮತ್ತು ಮಾನವರು



ಅಕ್ಟೋಬರ್ 16

ವಿಶ್ವ ಆಹಾರ ದಿನಕ್ಕೆ ಸಂಬಂಧಿಸಿ ಇಂದು ಶಾಲೆಯಲ್ಲಿ ಆಹಾರ ಮೇಳವಿತ್ತು. ಎಷ್ಟು ರಸವತ್ತಾಗಿತ್ತು ಗೊತ್ತೇ!

ಟೀಚರ್ ಹೇಳಿದಂತೆ ತರಗತಿಯ ಎಲ್ಲಾ ಮಕ್ಕಳು ಒಂದೊಂದು ತಿನಿಸುಗಳನ್ನು ತಂದಿದ್ದರು. ನಾನು ಮತ್ತು ಸಹಪಾಠಿಗಳು ಪ್ರತಿ ಸ್ಟಾಲ್ ಗಳನ್ನು ನೋಡುತ್ತಾ ನಡೆದೆವು. ಎಷ್ಟೊಂದು ಬಗೆಬಗೆಯ ಖಾದ್ಯಗಳು….! ಮರಗೆಣಸು, ಹಲಸು, ದ್ವಿದಳ ಧಾನ್ಯಗಳು, ಗೆಣಸುವರ್ಗಗಳು,ಹಣ್ಣುಗಳು ಇತ್ಯಾದಿಗಳನ್ನು ಒಳಗೊಂಡ ವಿವಿಧ ರೀತಿಯ ಆಹಾರ ತಿನಿಸುಗಳು... ಪಾಯಸ, ಲಡ್ಡು, ಹಲ್ವಾ, ಕೇಕ್, ಮಿಠಾಯಿಗಳು, ಉಪ್ಪಿನಲ್ಲಿ ಹಾಕಿದವುಗಳು ಹೀಗೆ ಎಷ್ಟೊಂದು ತಿನಿಸುಗಳಿದ್ದವು! ಇದೆಲ್ಲ ನೋಡಿ ನನ್ನ ಬಾಯಿಯಲ್ಲಿ ನೀರೂರಿತು. ಅಷ್ಟೊತ್ತಿಗಾಗಲೇ ಕ್ಲಾಸ್ ಟೀಚರ್ ನಮ್ಮ ಜೊತೆ ಸೇರಿಕೊಂಡರು. ಟೀಚರ್ ನಮಗೆ ಮಿಠಾಯಿಗಳು, ಪಾಯಸಗಳನ್ನೆಲ್ಲ ತೆಗೆದು ಕೊಟ್ಟರು. ಏನು ರುಚಿಯಾಗಿತ್ತು ಗೊತ್ತೇ...! ಈಗಲೂ ಅವುಗಳ ರುಚಿ ನಾಲಿಗೆಯಲ್ಲಿ ಉಳಿದಿದೆ.

ಸಿಬಿ ಎಂಬ ವಿದ್ಯಾರ್ಥಿ ಬರೆದ ದಿನಚರಿಯನ್ನು ಓದಿದಿರಲ್ಲವೇ? ಈ ಟಿಪ್ಪಣಿಯಲ್ಲಿ ಯಾವ ಯಾವ ಆಹಾರ ವಸ್ತುಗಳ ಕುರಿತು ಸೂಚಿಸಲಾಗಿದೆ?

- 
- 
- 

ಇವುಗಳಲ್ಲದೆ ಇತರ ಯಾವ ಖಾದ್ಯಗಳನ್ನು ನೀವು ತಿಂದಿದ್ದೀರಿ? ಅವುಗಳ ಪಟ್ಟಿ ತಯಾರಿಸಿರಿ.


ನಾವು ಸೇವಿಸುವ ಆಹಾರಕ್ಕೆ ಬಹುದೊಡ್ಡ ಇತಿಹಾಸವಿದೆ. ನಿಮಗೂ ಆ ಇತಿಹಾಸ ತಿಳಿಯಬೇಕೆಂಬ ಕುತೂಹಲವಿಲ್ಲವೇ?

## ಆಹಾರ ಸಂಪಾದನೆ

ಆಹಾರವು ಮನುಷ್ಯರ ಅಸ್ತಿತ್ವಕ್ಕೆ ಅತಿ ಅಗತ್ಯವಾದ ಘಟಕಗಳಲ್ಲಿ ಒಂದಾಗಿದೆ ಎಂಬುದು ನಿಮಗೆ ತಿಳಿದಿದೆಯಲ್ಲವೇ?

ಎಲ್ಲಾ ಜೀವಿಗಳಿಗೂ ಆಹಾರವು ಅಗತ್ಯವಾಗಿದೆ. ಹಿಂದಿನ ಕಾಲದಲ್ಲಿ ಎಲೆಗಳು, ಹಣ್ಣುಗಳು, ಗೆಡ್ಡೆಗೆಣಸುಗಳು, ಧಾನ್ಯಗಳು ಎಂಬಿವುಗಳು ಜೀವಿಗಳ ಆಹಾರವಾಗಿದ್ದವು. ಅಲ್ಲದೆ, ಕೆಲವೊಂದು ಜೀವಿಗಳು ಇತರ ಜೀವಿಗಳನ್ನು ಕೊಂದು ತಿನ್ನುತ್ತಿದ್ದವು. ಮನುಷ್ಯರು ಹಿಂದಿನ ಕಾಲದಲ್ಲಿ ಹಾಗೆಯೇ ಇದ್ದರು.

ಕೆಳಗೆ ನೀಡಿರುವ ಚಿತ್ರಗಳನ್ನು ಗಮನಿಸಿರಿ.



ಆದಿಮಾನವರ ಆಹಾರ ಸಂಪಾದನೆಯನ್ನು ಸೂಚಿಸುವ ಕೆಲವು ಚಿತ್ರಗಳನ್ನು ಮೇಲೆ ನೀಡಲಾಗಿದೆ. ಇದರಿಂದ ಆ ಕಾಲದ ಮಾನವರ ಆಹಾರ ಸಂಪಾದನೆಗೆ ಸಂಬಂಧಿಸಿ ಯಾವೆಲ್ಲ ಮಾಹಿತಿಗಳನ್ನು ನಿಮಗೆ ತಿಳಿಯಲು ಸಾಧ್ಯ?

- ಆಹಾರ ಸಂಗ್ರಹಿಸುತ್ತಿದ್ದರು.
- 
- 
- 

ಬೇಟೆ ಮತ್ತು ಸಂಗ್ರಹದ ಮೂಲಕ ಅವರಿಗೆ ಯಾವೆಲ್ಲ ಆಹಾರ ವಸ್ತುಗಳು ಲಭಿಸಿರಬಹುದು?


- ಹಣ್ಣು ಹಂಪಲುಗಳು, ತರಕಾರಿಗಳು
- ಗೆಡ್ಡೆ ಗೆಣಸುಗಳು
- 
- 

## ಬೆಂಕಿ ಮತ್ತು ಆಹಾರ

ಆದಿಮಾನವರು ಬೇಟೆ ಮತ್ತು ಸಂಗ್ರಹದ ಮೂಲಕ ಲಭಿಸಿದ ಆಹಾರ ವಸ್ತುಗಳನ್ನು ಬೇಯಿಸಿ ತಿನ್ನುತ್ತಿದ್ದರೇ?

**ಬೆಂಕಿ: ಉತ್ಪಾದನೆ ಮತ್ತು ನಿಯಂತ್ರಣ**

ಒಣಗಿದ ಮರಗಳು ಪರಸ್ಪರ ತಿಕ್ಕಿದಾಗ ಅಥವಾ ಶಿಲೆಗಳಿಗೆ ತಿಕ್ಕಲ್ಪಟ್ಟಾಗ ಬೆಂಕಿ ಉಂಟಾಗುವುದನ್ನು ಮಾನವರು ಕಂಡುಕೊಂಡರು. ಒಣಗಿದ ಮರಗಳನ್ನು ಶಿಲೆಗೆ ಉಜ್ಜಿ ಅಥವಾ ಶಿಲೆಗಳನ್ನು ಪರಸ್ಪರ ಉಜ್ಜಿ ಬೆಂಕಿ ತಯಾರಿಸಬಹುದೆಂದು ತಿಳಿದುಕೊಂಡರು.



ಹಿಂದಿನ ಕಾಲದಲ್ಲಿ ಬೆಂಕಿಯ ಉಪಯೋಗ ತಿಳಿಯದ ಕಾರಣ ಲಭಿಸಿದ ವಸ್ತುಗಳನ್ನು ಹಸಿಯಾಗಿ-ಯೇ ಅವರು ತಿನ್ನುತ್ತಿದ್ದರು. ಆದರೆ, ಬೆಂಕಿಯನ್ನು ನಿಯಂತ್ರಿಸಿ ಬಳಸಲು ಕಲಿತ ನಂತರ ಅವರು ಆಹಾರವನ್ನು ಬೇಯಿಸಿ ತಿನ್ನಲು ಆರಂಭಿಸಿದರು.



ಬೆಂಕಿಯನ್ನು ಬಳಸಲು ಕಲಿತದ್ದು ಮಾನವರ ಆಹಾರ ಕ್ರಮದಲ್ಲಿ ಪ್ರಮುಖ ಬದಲಾವಣೆಗೆ ಕಾರಣ-ವಾಯಿತು. ಕಾಡ್ಗಿಚ್ಚಿನಿಂದ ಸತ್ತ ಪ್ರಾಣಿಗಳ ಬೆಂದ ಮಾಂಸ ಅವರು ತಿಂದ ಮೊದಲ ಬೇಯಿಸಿದ ಆಹಾರವಾಗಿರಬಹುದು. ಬೆಂಕಿ ತಯಾರಿಸಲು ಮತ್ತು ಅದನ್ನು ನಿಯಂತ್ರಿಸಿ ಬಳಸಲು ಆರಂಭಿಸಿದ ಬಳಿಕ ಅವರು ಮಾಂಸ ಮತ್ತು ಮೀನುಗಳನ್ನು ಸುಟ್ಟು ತಿನ್ನಲು ಆರಂಭಿಸಿದರು. ಕ್ರಮೇಣ ಬೇರುಗಳು ಮತ್ತು ಗೆಡ್ಡೆಗಳನ್ನು ಸುಟ್ಟು ತಿನ್ನಲು ಆರಂಭಿಸಿದರು. ಹೀಗೆ ಮಾನವರು ಆಹಾರವನ್ನು ಬೇಯಿಸಿ ತಿನ್ನುವ ಕ್ರಮಕ್ಕೆ ತಲುಪಿದರು.

ಅಲೆದು ತಿರುಗಾಡುತ್ತಿದ್ದ ಮನುಷ್ಯರು ಬೇಟೆಯಾಡಿ ಮತ್ತು ಸಂಗ್ರಹಿಸಿ ಆ ದಿನಕ್ಕೆ ಅಗತ್ಯವಾದ ಆಹಾರವನ್ನು ಮಾತ್ರ ಗಳಿಸುತ್ತಿದ್ದರು. ಕ್ರಮೇಣ ಆಹಾರ ಸಂಪಾದನೆಗಾಗಿ ಅವರು ಇತರ ಮಾರ್ಗಗಳನ್ನು ಕಂಡುಕೊಳ್ಳಲು ನಿರ್ಬಂಧಿತರಾದರು.

ಆದಿಮಾನವರು ಯಾವ ಯಾವ ಸಂದರ್ಭಗಳಲ್ಲಿ ಆಹಾರ ಸಂಪಾದನೆಗಾಗಿ ಇತರ ಮಾರ್ಗಗಳನ್ನು ಕಂಡುಕೊಳ್ಳಲು ನಿರ್ಬಂಧಿತರಾದರು?

- ಆಹಾರದ ಕೊರತೆ ಉಂಟಾದಾಗ
- ಜನಸಂಖ್ಯೆ ಹೆಚ್ಚಳ
- ಪರಿಸರದಲ್ಲಿ ಉಂಟಾದ ಬದಲಾವಣೆಗಳು
- 
- 
- 

## ಆಹಾರ ಉತ್ಪಾದನೆ

ಕಾಲಕ್ರಮೇಣ ಮಾನವರು ಆಹಾರದ ಅಗತ್ಯಗಳಿಗಾಗಿ ಪ್ರಾಣಿಗಳನ್ನು ಪಳಗಿಸಿ ಸಾಕಲು ಮತ್ತು ಸಸ್ಯಗಳನ್ನು ಪೋಷಿಸಲು ಆರಂಭಿಸಿದರು. ಆಹಾರದ ಅಗತ್ಯಗಳಿಗಾಗಿ ಅವರು ಮೊದಲು ಆಡು, ಕುರಿಗಳು ಮುಂತಾದ ಪ್ರಾಣಿಗಳನ್ನು ಪಳಗಿಸಿ ಸಾಕಲು ಆರಂಭಿಸಿದರು.



ಮನುಷ್ಯರೊಂದಿಗೆ ಪಳಗಿದ ಮತ್ತು ಮನುಷ್ಯರು ಪಳಗಿಸಿ ಸಾಕಲು ಆರಂಭಿಸಿದ ಮೊದಲ ಪ್ರಾಣಿ ನಾಯಿ ಆಗಿದೆ. ಮನುಷ್ಯರೊಂದಿಗೆ ಬೇಗನೆ ಹೊಂದಿಕೊಳ್ಳುವ ಸ್ವಭಾವವಿರುವ ನಾಯಿಗಳನ್ನು ಬೇಟೆಯಾಡಲು ಮತ್ತು ಕಾಯಲು ಬಳಸುತ್ತಿದ್ದರು. ಆದರೆ, ಕೃಷಿ ವ್ಯಾಪಕವಾಗುವುದರೊಂದಿಗೆ ನಾಯಿಯೊಂದಿಗೆ ಬೇರೆ ಪ್ರಾಣಿಗಳನ್ನು ಆಹಾರಕ್ಕೆ ಮತ್ತು ಇತರ ಅಗತ್ಯಗಳಿಗೆ ಪಳಗಿಸಿ ಸಾಕಿ ಬೆಳೆಸಲು ಆರಂಭಿಸಿದರು.

> ಪ್ರಾಣಿಗಳನ್ನು ಪಳಗಿಸಿ ಸಾಕಲು, ಸಸ್ಯಗಳನ್ನು ಪೋಷಿಸಲು ಆರಂಭಿಸುವುದರೊಂದಿಗೆ ಯಾವೆಲ್ಲ ಬದಲಾವಣೆಗಳು ಮಾನವರ ಜೀವನದಲ್ಲಿ ಉಂಟಾದುವು? ಸಸ್ಯಗಳನ್ನು ಹೇಗೆ ಪೋಷಿಸಿದರು?

ಎಸೆದ ಆಹಾರವಸ್ತುಗಳಿಂದ ಹೊಸ ಸಸ್ಯಗಳು ಮೊಳೆತು ಬರುವುದನ್ನು ಗಮನಿಸಿದ ಆದಿ ಮಾನವರು ಕೃಷಿಯ ಕುರಿತು ಯೋಚಿಸಲು ಆರಂಭಿಸಿದ್ದಾಗಿರಬಹುದು. ಬಂಡೆಗಳ ಮೇಲೆ ಬೀಜಗಳನ್ನು ಇರಿಸಿದರೆ ಒಣಗುವುದು. ನೀರಿನಲ್ಲಿ ಇರಿಸಿದರೆ ಕೊಳೆತು ಹೋಗುವುದು. ಆದರೆ ತೇವಾಂಶವಿರುವ ಮತ್ತು ಬೆಚ್ಚಗಿನ ಮಣ್ಣಿನಲ್ಲಿ ಹೂತರೆ ಬೀಜ ಮೊಳಕೆ ಬರುವುದು ಎಂಬುದನ್ನು ಅವರು ತಿಳಿದುಕೊಂಡರು. ಹೀಗೆ ಕೃಷಿ ಆರಂಭವಾಯಿತು.ಮುಂದೆ ಉಪಯೋಗಕ್ಕೆ ಯೋಗ್ಯವಾದ ಗಿಡಗಳು, ಬೇರುಗಳು , ಮರಗಳನ್ನು ಕಂಡುಕೊಂಡು ನೆಡಲು ಮತ್ತು ಕೃಷಿ ಮಾಡಲು ಆರಂಭಿಸಿದರು. ಮೊದಲಿಗೆ ಗೋಧಿ, ಬಾರ್ಲಿ, ಸಾಮೆ ಅಕ್ಕಿ, ಗೆಣಸು ವರ್ಗಗಳು ಎಂಬಿವುಗಳನ್ನು ಕೃಷಿ ಮಾಡತೊಡಗಿದರು. ಕೃಷಿಗೆ ಅಗತ್ಯವಾದ ನೀರು, ಫಲವತ್ತಾದ ಮಣ್ಣು ಲಭ್ಯವಾಗುವ ನದಿ ತೀರಗಳಲ್ಲಿ ಮಾನವರು ಕೃಷಿ ಮಾಡಲು ಆರಂಭಿಸಿದರು. ಹೀಗೆ ಆಹಾರ ಹುಡುಕಿ ಅಲೆಯುತ್ತಿದ್ದ ಮಾನವರು ಕೃಷಿ ಮಾಡುತ್ತಿದ್ದ ಸಮೀಪದ ಪ್ರದೇಶಗಳಲ್ಲಿ ಸ್ಥಿರವಾಸವನ್ನು ಆರಂಭಿಸಿದರು.

ಕೃಷಿ ಪ್ರದೇಶದ ಸಮೀಪ ಸ್ಥಿರವಾಸವನ್ನು ಮಾಡಿದ್ದರಿಂದ ಅವರಿಗೆ ಯಾವ ಯಾವ ಪ್ರಯೋಜನಗಳು ಲಭಿಸಿರಬಹುದು?

- ಕೃಷಿ ಪ್ರದೇಶಗಳನ್ನು ಸಂರಕ್ಷಿಸಲು ಸಾಧ್ಯವಾಯಿತು.
- ಆಹಾರವನ್ನು ಹುಡುಕಿ ಅಲೆಯಬೇಕಾಗಿರಲಿಲ್ಲ.
- ಆಹಾರ ವಸ್ತುಗಳ ಲಭ್ಯತೆ ಹೆಚ್ಚಾಯಿತು.
- ಹೆಚ್ಚು ವಿಶ್ರಾಂತಿ ಸಮಯ ಲಭಿಸಿತು.
- 

> ಆದಿಮಾನವರಿಗೆ ಸ್ಥಿರವಾಸ ಹೊಂದಲು ನದಿ ತೀರಗಳು ಹೇಗೆಲ್ಲಾ ಸಹಾಯಕವಾಗಿರಬಹುದು? ಚರ್ಚಿಸಿರಿ.

## ಆಹಾರ ವಸ್ತುಗಳ ಸಂಗ್ರಹ

ಆದಿ ಮಾನವರು ಅಂದಂದಿಗೆ ಬೇಕಾದಷ್ಟು ಆಹಾರ ಮಾತ್ರ ಸಂಗ್ರಹಿಸುತ್ತಿದ್ದರು. ಆದರೆ, ಕೃಷಿ ಅಭಿವೃದ್ಧಿ ಹೊಂದಿದಂತೆ ಮನುಷ್ಯರಿಗೆ ಅಗತ್ಯಕ್ಕಿಂತ ಹೆಚ್ಚು ಆಹಾರವಸ್ತುಗಳು ಲಭಿಸತೊಡಗಿದವು. ದೈನಂದಿನ ಬಳಕೆಯ ಬಳಿಕ ಹೆಚ್ಚುವರಿ ಆಹಾರವಸ್ತುಗಳನ್ನು ಸಂರಕ್ಷಿಸಿಡಲು ಪ್ರತ್ಯೇಕ ಸೌಕರ್ಯ ಅಗತ್ಯವಾಯಿತು. ಅವರು ಹೆಚ್ಚುವರಿಯಾದ ಆಹಾರವಸ್ತುಗಳನ್ನು ಹೇಗೆಲ್ಲಾ ಸಂಗ್ರಹಿಸಿ ಇಡುತ್ತಿದ್ದರು?

> **ಹಿಂದಿನ ಕಾಲದ ಕೃಷಿ ಉಪಕರಣಗಳು**
>
> ಬಡಿಗೆಗಳು, ಕಲ್ಲು, ಕೊಂಬು,ಎಲುಬುಗಳು ಎಂಬಿವುಗಳನ್ನು ಮಾನವರು ಹಿಂದಿನ ಕಾಲದಲ್ಲಿ ಕೃಷಿ ಉಪಕರಣಗಳಾಗಿ ಬಳಸುತ್ತಿದ್ದರು. ಮಣ್ಣನ್ನು ಅಗೆದು ಬೀಜ ಹಾಕಲು ಈ ಉಪಕರಣಗಳು ಸಹಾಯಕವಾಗಿದ್ದವು.

- ಮಣ್ಣಿನ ಪಾತ್ರೆಗಳು
- ಪ್ರಾಣಿಗಳ ಚರ್ಮದಿಂದ ತಯಾರಿಸಿದ ಚೀಲಗಳು
- ಬೆತ್ತ ಬಿದಿರುಗಳಿಂದ ತಯಾರಿಸಿದ ಕುಕ್ಕೆಗಳು
- 
- 
- 



ಮಣ್ಣಿನ ಮುದ್ದೆಯನ್ನು ನೀರಿನಲ್ಲಿ ಇರಿಸಿದರೆ ಕರಗಿ ಹೋಗುವುದಲ್ಲವೇ? ಆದರೆ, ಮಣ್ಣನ್ನು ಹದಗೊಳಿಸಿ, ಪಾತ್ರೆಗಳಾಗಿ ಮಾಡಿ, ಸುಟ್ಟರೆ ನೀರನ್ನು ಸಂಗ್ರಹಿಸಬಹುದೆಂದು, ಬಿಸಿ ಮಾಡಬಹುದೆಂದು ಮಾನವರು ತಿಳಿದುಕೊಂಡರು. ಆರಂಭದ ದಿನಗಳಲ್ಲಿ ಆವೆ ಮಣ್ಣನ್ನು ಹದಗೊಳಿಸಿ ಕೈಗಳಿಂದ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಕೃಷಿ ವ್ಯಾಪಕವಾಗುವುದರೊಂದಿಗೆ ಧಾನ್ಯಗಳನ್ನು ಸಂರಕ್ಷಿಸಿ ಇಡಲು ಹಲವು ಗಾತ್ರದ ಮಣ್ಣಿನ ಪಾತ್ರೆಗಳು ಅಗತ್ಯವಾದುವು. ಮಣ್ಣಿನ ಪಾತ್ರೆಗಳನ್ನು ಆಹಾರ ಬೇಯಿಸಲೂ ಬಳಸುತ್ತಿದ್ದರು. ಅವುಗಳನ್ನು ತಯಾರಿಸಲಿರುವ ಚಕ್ರವನ್ನು ಕಂಡುಹಿಡಿದುದು ಮಾನವ ಚರಿತ್ರೆಯಲ್ಲಿ ಪ್ರಮುಖ ಮೈಲುಗಲ್ಲು ಆಗಿದೆ. ಇದು ಮಣ್ಣಿನ ಪಾತ್ರೆಗಳ ನಿರ್ಮಾಣ ವ್ಯಾಪಕವಾಗಲು ಕಾರಣವಾಯಿತು. ಆಹಾರ ಧಾನ್ಯಗಳನ್ನು ಸಂರಕ್ಷಿಸಿಡಲು ಪ್ರಾಚೀನ ಕಾಲದಲ್ಲಿ ಉಗ್ರಾಣಗಳನ್ನು ನಿರ್ಮಿಸಿರುವುದಕ್ಕೆ ಪುರಾವೆಗಳು ಲಭಿಸಿವೆ.

**ಉಗ್ರಾಣಗಳು (Granary)**

ಸಿಂಧೂ ನದಿ ತೀರದ ನಾಗರಿಕತೆ ಅಥವಾ ಹರಪ್ಪ ನಾಗರಿಕತೆ ಪ್ರಾಚೀನ ಭಾರತದಲ್ಲಿ ನೆಲೆನಿಂತಿದ್ದ ನಾಗರಿಕತೆಯಾಗಿದೆ. ಧಾನ್ಯಗಳ ಉಗ್ರಾಣಗಳು ಇಲ್ಲಿನ ಪ್ರಮುಖ ವಿಶೇಷತೆಯಾಗಿತ್ತು. ಅವುಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗಿತ್ತು. ದೂರದ ಗ್ರಾಮಗಳಿಂದ ಧಾನ್ಯಗಳನ್ನು ತಂದು ಈ ಉಗ್ರಾಣಗಳಲ್ಲಿ ಶೇಖರಿಸಲಾಗುತ್ತಿತ್ತು.

ನಮ್ಮ ಊರಿನಲ್ಲಿ ಧಾನ್ಯಗಳನ್ನು ಸಂರಕ್ಷಿಸಿಡಲು ಜಾಡಿಗಳು, ಪತ್ತಾಯಗಳು ಎಂಬಿವುಗಳನ್ನು ಬಳಸಲಾಗುತ್ತಿತ್ತು. ಇವುಗಳಲ್ಲದೆ ಇತರ ಯಾವ ಯಾವ ಆಹಾರ ಸಂರಕ್ಷಣಾ ವಿಧಾನಗಳನ್ನು ಆ ಕಾಲದ ಮಾನವರು ಅನುಸರಿಸಿರಬಹುದು? ಅವುಗಳ ಕುರಿತು ಹಿರಿಯರಲ್ಲಿ ಕೇಳಿ ತಿಳಿಯಿರಿ.

ಆಹಾರವನ್ನು ಬೇಯಿಸಲು ಮತ್ತು ಸಂಗ್ರಹಿಸಿಡಲು ಯಾವ ಯಾವ ಪಾತ್ರೆಗಳನ್ನು ನಿಮ್ಮ ಮನೆಯಲ್ಲಿ ಉಪಯೋಗಿಸುತ್ತಾರೆ?

## ಆಹಾರವಸ್ತುಗಳ ವಿನಿಮಯ

ಆದಿಮಾನವರು ಅಗತ್ಯಕ್ಕಿಂತ ಹೆಚ್ಚಿನ ಆಹಾರವಸ್ತುಗಳನ್ನು ಮುಂದಿನ ದಿನಗಳ ಉಪಯೋಗಕ್ಕೆ ಮಾತ್ರ ಸಂಗ್ರಹ ಮಾಡುತ್ತಿದ್ದರೇ?

ಹೆಚ್ಚುವರಿ ಆಹಾರವಸ್ತುಗಳನ್ನು ಮುಂದಿನ ದಿನಗಳಿಗೆ ಸಂರಕ್ಷಿಸುವುದು ಮಾತ್ರವಲ್ಲದೆ, ಅವುಗಳನ್ನು ಅಗತ್ಯ ಇರುವವರೊಂದಿಗೆ ವಿನಿಮಯ ಮಾಡುತ್ತಿದ್ದರು.

ಇಂತಹ ವಿನಿಮಯಗಳು ಹೇಗೆ ನಡೆದಿರಬಹುದು?

ತಮಗೆ ಅಗತ್ಯವಾದ ವಸ್ತುಗಳನ್ನು ಪಡೆದುಕೊಳ್ಳುವುದಕ್ಕೆ ಪ್ರತಿಯೊಬ್ಬರು ತಾವು ಸಂಗ್ರಹಿಸಿದ ವಸ್ತುಗಳನ್ನು ಇತರರೊಂದಿಗೆ ವಿನಿಮಯ ಮಾಡುತ್ತಿದ್ದರು.

### ದಕ್ಷಿಣ ಭಾರತದಲ್ಲಿ ಆಹಾರ ವಸ್ತುಗಳ ವಿನಿಮಯ

ಸುಮಾರು 1500 ವರ್ಷಗಳ ಹಿಂದೆ ದಕ್ಷಿಣ ಭಾರತದಲ್ಲಿ ಆಹಾರ ವಸ್ತುಗಳನ್ನು ಪರಸ್ಪರ ವಿನಿಮಯ ಮಾಡುತ್ತಿದ್ದರೆಂದು ಸಂಘಂ ಕಾಲದ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಪ್ರತಿಯೊಂದು ಪ್ರದೇಶದಲ್ಲಿ ವಾಸಿಸುವವರು ಇತರ ಪ್ರದೇಶಗಳಲ್ಲಿರುವವರಿಗೆ ಅವರು ಸಂಗ್ರಹಿಸಿದ ಆಹಾರವಸ್ತುಗಳನ್ನು ವಿನಿಮಯ ಮಾಡಿ ಅವರಿಂದ ತಮಗೆ ಅಗತ್ಯವಿರುವವುಗಳನ್ನು ಪಡೆದುಕೊಳ್ಳುತ್ತಿದ್ದರು. ಸಮುದ್ರದ ತೀರ ಪ್ರದೇಶಗಳಲ್ಲಿ ವಾಸಿಸುತ್ತಿದ್ದವರು ಇತರ ಪ್ರದೇಶಗಳಲ್ಲಿರುವವರೊಂದಿಗೆ ಒಣ ಮೀನು, ಉಪ್ಪುಗಳನ್ನು ವಿನಿಮಯ ಮಾಡುತ್ತಿದ್ದರು. ಅದಕ್ಕೆ ಬದಲಾಗಿ ಇತರರಿಂದ ಬೇರೆ ಆಹಾರ ವಸ್ತುಗಳನ್ನು ಮತ್ತು ಕಾಡಿನಿಂದ ಸಿಗುವ ಸಂಪನ್ಮೂಲಗಳನ್ನು ಪಡೆದುಕೊಳ್ಳುತ್ತಿದ್ದರು. ಕಾಡಿನಲ್ಲಿ ವಾಸಿಸುವವರು ಇತರ ಪ್ರದೇಶಗಳಲ್ಲಿರುವವರಿಗೆ ಕಾಡಿನಿಂದ ಸಿಗುವ ಸಂಪನ್ಮೂಲಗಳನ್ನು ವಿನಿಮಯ ಮಾಡಿದರು. ಸಮತಲಗಳಲ್ಲಿ ವಾಸಿಸುತ್ತಿದ್ದವರು ತಮ್ಮ ಕೃಷಿ ಉತ್ಪನ್ನಗಳನ್ನು ಇತರ ಪ್ರದೇಶದ ಜನರಿಗೆ ವಿನಿಮಯ ಮಾಡುತ್ತಿದ್ದರು.



### ವಿನಿಮಯ ಸಂಪ್ರದಾಯ

ನಾಣ್ಯ ವ್ಯವಸ್ಥೆ ಜಾರಿಗೆ ಬರುವುದರ ಮೊದಲು ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈ ವಿನಿಮಯ ರೀತಿಯನ್ನು 'ವಸ್ತು ವಿನಿಮಯ ಪದ್ಧತಿ' ಎಂದು ಕರೆಯುತ್ತಾರೆ.

ಇಂತಹ ವಿನಿಮಯಗಳು ಸಮಾಜದಲ್ಲಿ ಹಲವು ಬದಲಾವಣೆಗಳಿಗೆ ಕಾರಣವಾದುವು. ವಸ್ತುಗಳ ವಿನಿಮಯವು ವ್ಯಾಪಾರ ವ್ಯವಸ್ಥೆಗೆ ಕಾರಣವಾಯಿತು. ಆ ಮೂಲಕ ಸಂತೆಗಳು ರೂಪೀಕರಣವಾಯಿತು. ಸಂತೆಗಳು ಕ್ರಮೇಣ ಮಾರುಕಟ್ಟೆಗಳಾಗಿ ಅಭಿವೃದ್ಧಿ ಹೊಂದಿದವು. ವಸ್ತುಗಳನ್ನು ಖರೀದಿಸಲು ಮತ್ತು ಮಾರಾಟ ಮಾಡುವುದಕ್ಕಾಗಿ ಜನರು ಮಾರುಕಟ್ಟೆಗೆ ಬರುವುದರೊಂದಿಗೆ ಅವು ಕ್ರಮೇಣ ನಗರಗಳಾಗಿ ಬದಲಾದವು.

ಹಿಂದಿನ ಕಾಲಗಳಲ್ಲಿ ಕೇರಳದ ಜನರು ಆಹಾರವಸ್ತುಗಳನ್ನು ಸಂಗ್ರಹಿಸಲು ಮತ್ತು ದೂರದ ಊರುಗಳಿಗೆ ಕೊಂಡೊಯ್ದು ವಿನಿಮಯ ನಡೆಸಲು ಯಾವ ಯಾವ ವಸ್ತುಗಳನ್ನು ಮತ್ತು ಯಾವ ವಿಧಾನಗಳನ್ನು ಉಪಯೋಗಿಸಿರಬಹುದು? ಚರ್ಚಿಸಿರಿ.

ನಗರಗಳ ರೂಪೀಕರಣವನ್ನು ಸೂಚಿಸುವ ಫ್ಲೋಚಾರ್ಟ್‌ನ್ನು ಪೂರ್ತಿಗೊಳಿಸಿರಿ.

ವಸ್ತುಗಳ ವಿನಿಮಯ
↓
..............................................
↓
..............................................
↓
..............................................
↓
ನಗರಗಳು

'ವಸ್ತುಗಳ ವಿನಿಮಯ ಮತ್ತು ನಗರಗಳ ಬೆಳವಣಿಗೆ' ಎಂಬ ವಿಷಯದ ಬಗ್ಗೆ ಚರ್ಚಿಸಿ, ಕೊಲಾಷ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ದೇಶವನ್ನು ದಾಟಿ ಆಹಾರವಸ್ತುಗಳ ವಿನಿಮಯ

ಆಹಾರವಸ್ತುಗಳ ವಿನಿಮಯ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ದೇಶವನ್ನು ದಾಟಿ ವಿನಿಮಯ ವ್ಯಾಪಿಸಿತ್ತು.



ಪ್ರಾಚೀನ ಕಾಲದಿಂದಲೂ ನಮ್ಮ ಊರು ಮತ್ತು ದೂರದ ದೇಶಗಳ ನಡುವೆ ವಸ್ತುಗಳ ವಿನಿಮಯ ನಡೆಯುತ್ತಿತ್ತು. ರೋಮನರು, ಚೀನಿಯರು, ಅರಬಿಗಳು, ಪರ್ಷಿಯನ್ನರು, ಯಹೂದಿಗಳು ಎಂಬಿವರೊಂದಿಗೆ ಮುಖ್ಯವಾಗಿ ವಸ್ತು ವಿನಿಮಯ ನಡೆಯುತ್ತಿತ್ತು.

ಚಿತ್ರದಲ್ಲಿ ಕಾಣುವ ಸಾಂಬಾರ ಪದಾರ್ಥಗಳನ್ನು ಗುರುತಿಸಿ, ಪ್ರತಿಯೊಂದರ ಕುರಿತು ಕಿರುಟಿಪ್ಪಣಿ ಬರೆಯಿರಿ.









ಭಾರತದಿಂದ ಇತರ ದೇಶಗಳಿಗೆ ಪ್ರಮುಖವಾಗಿ ಕರಿಮೆಣಸು, ಏಲಕ್ಕಿ, ಶುಂಠಿ, ಲವಂಗ, ದಾಲ್ಚಿನ್ನಿ ಮುಂತಾದ ಸಾಂಬಾರ ಪದಾರ್ಥಗಳನ್ನು ವಿನಿಮಯ ಮಾಡಲಾಗುತ್ತಿತ್ತು. ಇವುಗಳಲ್ಲಿ 'ಕಪ್ಪು ಚಿನ್ನ' ಎಂದು ಕರೆಯಲ್ಪಡುವ ಕರಿಮೆಣಸು ವಿದೇಶಿಯರಿಗೆ ಹೆಚ್ಚು ಪ್ರಿಯವಾಗಿತ್ತು.

ಭಾರತಕ್ಕೆ ತಲುಪಿದ ಪೋರ್ಚುಗೀಸ್ ನಾವಿಕ ವಾಸ್ಕೋಡ ಗಾಮ ಮರಳಿ ಯುರೋಪಿಗೆ ತೆರಳಿದಾಗ ತನ್ನ ಪ್ರಯಾಣದ ಅರುವತ್ತು ಪಟ್ಟು ಬೆಲೆ ಬಾಳುವ ಸರಕುಗಳನ್ನು ಕೊಂಡು ಹೋಗಿರುವುದಾಗಿ ಇತಿಹಾಸದಲ್ಲಿ ಹೇಳಲಾಗಿದೆ.


ವಾಸ್ಕೋ ಡ ಗಾಮ

ನಿಮ್ಮ ಊರಿನಲ್ಲಿ ಈಗ ಕೃಷಿ ಮಾಡುವ ಸಾಂಬಾರ ಪದಾರ್ಥಗಳು ಯಾವುವು ಎಂಬುದನ್ನು ತಿಳಿದುಕೊಂಡು ಬರೆಯಿರಿ.

ST-537-5-SOC. SCI. (K)-5-VOL-1

ವ್ಯಾಪಾರದ ವ್ಯಾಪಿಸುವಿಕೆಯಲ್ಲಿ ನಂತರದ ಕಾಲದಲ್ಲಿ ವಿದೇಶಗಳ ಮಧ್ಯೆ ಆಹಾರ ವಸ್ತುಗಳ ವಿನಿಮಯಕ್ಕೆ ಕಾರಣವಾಯಿತು. ಇಂತಹ ವಿನಿಮಯದ ಫಲವಾಗಿ ಭಾರತದಲ್ಲಿ ಪ್ರಚಾರಕ್ಕೆ ಬಂದ ಕೆಲವು ಆಹಾರ ವಸ್ತುಗಳ ಚಿತ್ರಗಳನ್ನು ಕೆಳಗೆ ನೀಡಲಾಗಿದೆ.



ಪೇರಳೆ



ಪಪ್ಪಾಯಿ



ಅನನಾಸು



ಗೇರುಬೀಜ



ಮರಗೆಣಸು



ಬಟಾಟೆ

ಚಿತ್ರದಲ್ಲಿರುವ ಎಲ್ಲಾ ಆಹಾರ ವಸ್ತುಗಳು ನಿಮಗೆ ಪರಿಚಿತವಲ್ಲವೇ? ಈ ವಸ್ತುಗಳ ಉಗಮವಾದುದು ನಮ್ಮ ದೇಶದಲ್ಲಿಯೇ? ತಿಳಿದುಕೊಳ್ಳಿರಿ.



ಗುರುತಿನ ಚೀಟಿ ತಯಾರಿಸೋಣ

**ಪೇರಳೆ**

*ಜನ್ಮ ದೇಶ : ಮೆಕ್ಸಿಕೊ*

*"ಉಷ್ಣ ವಲಯದ ಸೇಬು"*

*ಪೋರ್ಚುಗೀಸರು ಭಾರತಕ್ಕೆ ತಂದರು..*

*ವಿಟಮಿನ್ ಎ, ಬಿ, ಸಿ*

*ಮುಂತಾದವುಗಳನ್ನು ಒಳಗೊಂಡಿದೆ.*



..............................

....................................

....................................

..........................................................



ಇದೇ ರೀತಿಯಲ್ಲಿ ಇತರ ಆಹಾರವಸ್ತುಗಳ ತಾಯ್ನಾಡನ್ನು ತಿಳಿದುಕೊಂಡು ಗುರುತಿನ ಕಾರ್ಡ್ ತಯಾರಿಸಿರಿ. ನೀವು ತಯಾರಿಸಿದ ಗುರುತಿನ ಕಾರ್ಡನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

ಆಹಾರ ಸಂಪನ್ಮೂಲಗಳ ವಿನಿಮಯ ಈಗಲೂ ಮುಂದುವರಿಯುತ್ತಿದೆ. ವ್ಯಾಪಾರದ ಹೊರತಾಗಿ, ಉದ್ಯೋಗಕ್ಕೆ, ಶಿಕ್ಷಣಕ್ಕೆ ಮತ್ತು ಮನೋರಂಜನೆಗಾಗಿ ಜಗತ್ತಿನ ವಿವಿಧ ಭಾಗಗಳಿಗೆ ಜನರು ಇಂದೂ ಸಂಚರಿಸಿಕೊಂಡಿರುವುದು ಈ ವಿನಿಮಯ ಹೆಚ್ಚು ವ್ಯಾಪಕವಾಗುವಂತೆ ಮಾಡಿದೆ.

ವ್ಯಾಪಾರ ಹೆಚ್ಚಳವಾದುದು ದೇಶ ವಿದೇಶಗಳ ಮಧ್ಯೆ ಆಹಾರವಸ್ತುಗಳ ವಿನಿಮಯಕ್ಕೆ ಹೇಗೆ ಕಾರಣವಾಯಿತು?

ನಾವು ತಿನ್ನುವ ಹಲವು ಹಣ್ಣುಗಳು ಮತ್ತು ಇತರ ಆಹಾರ ವಸ್ತುಗಳು ಹಲವು ದೇಶಗಳಿಂದ ಇಲ್ಲಿಗೆ ತಲುಪಿದವುಗಳೆಂದು ನಿಮಗೆ ತಿಳಿಯಿತಲ್ಲವೇ? ಇಲ್ಲಿಗೆ ತಲುಪಿ ನಮ್ಮ ಮಧ್ಯೆ ಪ್ರಚಾರದಲ್ಲಿರುವ ಆಹಾರ ವಸ್ತುಗಳ ಒಂದು ಪಟ್ಟಿ ತಯಾರಿಸಿರಿ. ಅವುಗಳ ಜನ್ಮದೇಶವನ್ನೂ ತಿಳಿದುಕೊಳ್ಳಿರಿ.

## ಆಹಾರ ಮತ್ತು ಅಸಮಾನತೆ

ಆಹಾರಕ್ಕೆ ಸಂಬಂಧಿಸಿ ನಮ್ಮ ಊರಿನಲ್ಲಿ ಹಲವು ರೀತಿಯ ಅಸಮಾನತೆಗಳು ನೆಲೆನಿಂತಿದ್ದವು. ಸಾಮಾಜಿಕ ಅಸಮಾನತೆ ಎಲ್ಲಾ ವಿಭಾಗದ ಜನರು ಒಟ್ಟಾಗಿ ಆಹಾರ ಸೇವಿಸಲು ತೊಡಕಾಗಿತ್ತು. ಈ ತಾರತಮ್ಯದ ವಿರುದ್ಧ ಸಮಾಜ ಸುಧಾರಕ ಸಹೋದರನ್ ಅಯ್ಯಪ್ಪನ್ ರ ನೇತೃತ್ವದಲ್ಲಿ ಎರ್ನಾಕುಳಂನ ಚೆರಾಯಿಯಲ್ಲಿ ಸಹಭೋಜನ ನಡೆಸಲಾಗಿತ್ತು.

### ಸಹಭೋಜನ

1917 ಮೇ 29ರಂದು ವಿವಿಧ ಜಾತಿಯವರನ್ನು ಒಟ್ಟಿಗೆ ಕುಳ್ಳಿರಿಸಿ ಸಹೋದರ ಅಯ್ಯಪ್ಪನ್ ರ ನೇತೃತ್ವದಲ್ಲಿ ಎರ್ನಾಕುಳಂನ ಚೆರಾಯಿಯಲ್ಲಿ ಸಹಭೋಜನ ನಡೆಸಲಾಗಿತ್ತು. ಎಲ್ಲಾ ವಿಭಾಗದ ಜನರೂ ಒಟ್ಟಿಗೆ ಕುಳಿತು ಆಹಾರ ಸೇವಿಸಲಿರುವ ಹಕ್ಕು ನಿಷೇಧಿಸಲ್ಪಟ್ಟುದುದಕ್ಕೆ ವಿರುದ್ಧವಾಗಿ ಈ ಚಳುವಳಿಯನ್ನು ನಡೆಸಲಾಯಿತು. ಸಹೋದರನ್ ಅಯ್ಯಪ್ಪನ್ ರವರು ಸಹಭೋಜನಕ್ಕೆ ನೇತೃತ್ವ ನೀಡಿದ ಕಾರಣ ಜನರಿಂದ ತೀವ್ರ ವಿರೋಧವನ್ನು ಎದುರಿಸಬೇಕಾಗಿ ಬಂತು. ಕೇರಳದಲ್ಲಿ ನೆಲೆನಿಂತಿದ್ದ ಸಾಮಾಜಿಕ ಅಸಮಾನತೆಯನ್ನು ಇದು ಬಯಲು ಮಾಡಿತು.



ಸಹೋದರನ್ ಅಯ್ಯಪ್ಪನ್

ಇಂದು ನಮ್ಮ ಊರಿನಲ್ಲಿ ಆಹಾರಕ್ಕೆ ಸಂಬಂಧಿಸಿದ ಜಾತಿ ತಾರತಮ್ಯ ನೆಲೆನಿಂತಿದೆಯೇ? ಇಂತಹ ತಾರತಮ್ಯಗಳನ್ನು ನಮ್ಮ ದೇಶದಲ್ಲಿ ಕಾನೂನು ಪ್ರಕಾರ ನಿಷೇಧಿಸಲಾಗಿದೆ . ಸಾಮಾಜಿಕ ಅಸಮಾನತೆ ಮಾತ್ರವಲ್ಲದೆ, ಆರ್ಥಿಕ ಅಸಮಾನತೆ, ಅಹಾರಕ್ಷೇತ್ರದ ಸಮಾನತೆಗೆ ಸವಾಲಾಗಿದೆ.

'ಆಹಾರದಲ್ಲಿ ಅಸಮಾನತೆ' ಎಂಬ ವಿಷಯದ ಕುರಿತು ಒಂದು ಟಿಪ್ಪಣಿ ತಯಾರಿಸಿರಿ.

## ಬಡತನದ ದೃಶ್ಯಗಳು

ಪತ್ರಿಕಾ ಶೀರ್ಷಿಕೆಗಳನ್ನು ಗಮನಿಸಿರಿ.




ವಾರ್ತೆಗಳಿಂದ ಯಾವೆಲ್ಲಾ ಮಾಹಿತಿಗಳನ್ನು ತಿಳಿದುಕೊಳ್ಳಬಹುದು?

- ಜಗತ್ತಿನ ವಿವಿಧ ಭಾಗಗಳಲ್ಲಿ ಇಂದು ಬಡತನ ನೆಲೆನಿಂತಿದೆ.
- 
- 
- 

ಆರೋಗ್ಯವನ್ನು ಕಾಪಾಡಿಕೊಳ್ಳಲಿರುವ ಆಹಾರ ಎಲ್ಲಾ ಮನುಷ್ಯರ ಹಕ್ಕಾಗಿದೆ. ಆದರೆ ಜೀವನವನ್ನು ಉಳಿಸಿಕೊಳ್ಳಲು ಅಗತ್ಯವಾದ ಒಂದು ಹೊತ್ತಿನ ಆಹಾರ ಲಭಿಸದ ಸಾವಿರಾರು ಮಂದಿ ಜಗತ್ತಿನ ಹಲವು ಭಾಗಗಳಲ್ಲಿ ಇದ್ದಾರೆ. ಹವಾಗುಣದಲ್ಲಿ ಉಂಟಾಗುವ ಬದಲಾವಣೆಗಳು, ಯುದ್ಧ, ನಿರುದ್ಯೋಗ, ಮುಂತಾದವು ಬಡತನ ಮತ್ತು ಹಸಿವೆಗೆ ಕಾರಣವಾಗುವುದು.

### ಬಂಗಾಳದಲ್ಲಿ ಆಹಾರ ಕ್ಷಾಮ


ಕ್ಷಾಮದಿಂದಾಗಿ ಬಂಗಾಳದ ಜನರು ಆಹಾರಕ್ಕಾಗಿ ಕಾಯುತ್ತಿರುವ ದೃಶ್ಯ

ಬ್ರಿಟೀಷ್ ಕಾಲದ ಅನಿಯಂತ್ರಿತ ಆರ್ಥಿಕ ಶೋಷಣೆಗೆ ಭಾರತದಲ್ಲಿ ಆಹಾರ ಕೊರತೆಗೆ ಕಾರಣವಾಗಿತ್ತು. ಅದರ ಪರಿಣಾಮವಾಗಿ ಅನೇಕ ಮಂದಿ ಮರಣ ಹೊಂದಿದರು. 1943ರಲ್ಲಿ ಬಂಗಾಳದಲ್ಲಿ ಉಂಟಾದ ಆಹಾರ ಕ್ಷಾಮ ಇದಕ್ಕೆ ಉದಾಹರಣೆಯಾಗಿದೆ.

ಕೃಷಿಯು ಬಂಗಾಳದ ಜನರ ಪ್ರಮುಖ ಜೀವನ ಮಾರ್ಗವಾಗಿತ್ತು. ಬಂಗಾಳದ ಸಮುದ್ರ ತೀರಕ್ಕೆ ಅಪ್ಪಳಿಸಿದ ಬಿರುಗಾಳಿಯ ಪರಿಣಾಮವಾಗಿ ಅಲ್ಲಿನ ಭತ್ತದ ಕೃಷಿ ವ್ಯಾಪಕವಾಗಿ ನಾಶವಾಯಿತು. ಬಳಿಕ ಬಂಗಾಳದಲ್ಲಿ ಆಹಾರದ ಕೊರತೆ ಉಂಟಾಯಿತು. ಈ ಕ್ಷಾಮದಿಂದಾಗಿ ಸುಮಾರು 30 ಲಕ್ಷ ಜನರು ಹಸಿವಿನಿಂದ ಮರಣಹೊಂದಿದರು.

ಸಂಪತ್ತಿನ ಹಂಚಿಕೆಯಲ್ಲಿನ ಅಸಮಾನತೆ ಬಡತನಕ್ಕಿರುವ ಮತ್ತೊಂದು ಪ್ರಮುಖ ಕಾರಣವಾಗಿದೆ. ಸಂಪತ್ತು ಎಲ್ಲರ ನಡುವೆ ಸಮಾನವಾಗಿ ಹಂಚಲ್ಪಟ್ಟಿಲ್ಲ. ಅದರಿಂದ, ಕೆಲವರು ಧಾರಾಳವಾಗಿ ಆಹಾರ ಸೇವಿಸುವಾಗ ಇನ್ನು ಕೆಲವರು ಹಸಿವಿನಿಂದ ಬಳಲುತ್ತಿರುವರು.


ಬಡತನ ಹಾಗೂ ಹಸಿವು ನಿರ್ಮೂಲನಾ ಚಟುವಟಿಕೆಗಳನ್ನು ಬಲಪಡಿಸುವುದು ಮತ್ತು ಎಲ್ಲರಿಗೂ ಆಹಾರದ ಲಭ್ಯತೆಯನ್ನು ಖಾತರಿಪಡಿಸುವುದು ಎಂಬ ಉದ್ದೇಶದಿಂದ ಪ್ರತಿ ವರ್ಷವೂ ಅಕ್ಟೋಬರ್ 16ನ್ನು ವಿಶ್ವ ಆಹಾರ ದಿನವಾಗಿ ಆಚರಿಸಲಾಗುತ್ತಿದೆ. ಕೇರಳವು ಬಡತನ ನಿರ್ಮೂಲನೆಗಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ ಮಾದರಿ ರಾಜ್ಯವಾಗಿದೆ. ಬಡತನ ನಿರ್ಮೂಲನೆಗಾಗಿ ಕೇರಳ ಸರಕಾರ ಆರಂಭಿಸಿದ ಕುಟುಂಬ ಶ್ರೀ ಯೋಜನೆ ಇದಕ್ಕೊಂದು ಉದಾಹರಣೆಯಾಗಿದೆ.

**ರಾಷ್ಟ್ರೀಯ ಆಹಾರ ಭದ್ರತೆಯ ನಿಯಮ** (National Food Security Act 2013)

ಭಾರತದಲ್ಲಿ 2013ರಲ್ಲಿ ಆಹಾರ ಭದ್ರತೆಯ ನಿಯಮ ಜಾರಿಗೆ ಬಂದಿತು. ಎಲ್ಲರಿಗೂ ಆಹಾರ ಭದ್ರತೆಯನ್ನು ಖಾತರಿಪಡಿಸುವುದು ಇದರ ಉದ್ದೇಶವಾಗಿದೆ. ಈ ಉದ್ದೇಶವನ್ನು ಮುಂದಿಟ್ಟುಕೊಂಡು ಕಾರ್ಯವೆಸಗುವ ಸಾರ್ವಜನಿಕ ವಿತರಣಾ ವ್ಯವಸ್ಥೆಯು ನಮ್ಮ ದೇಶದಲ್ಲಿದೆ.

ಆಹಾರ ದಿನದ ಸಂದೇಶ ಒಳಗೊಳ್ಳುವ ಪ್ಲಕಾರ್ಡ್ ಗಳನ್ನು ತಯಾರಿಸಿ, ಶಾಲೆಯಲ್ಲಿ ಆಹಾರ ದಿನದ ಮೆರವಣಿಗೆಯನ್ನು ಆಯೋಜಿಸಿರಿ.




ಹಸಿವು ಇಲ್ಲದ ಜಗತ್ತನ್ನು ಸೃಷ್ಟಿಸುವುದಕ್ಕಾಗಿ ನಾವು ಏನು ಮಾಡಬಹುದು? ಚರ್ಚಿಸಿರಿ.

## ಆಹಾರ ಮತ್ತು ಆರೋಗ್ಯ

ಆಹಾರವು ಮನುಷ್ಯರು ಬದುಕಲು ಅಗತ್ಯವಾದ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಆಹಾರಕ್ಕೆ ಪ್ರಮುಖ ಪಾತ್ರವಿದೆ. ಪೋಷಕಾಂಶಯುಕ್ತ ಆಹಾರವನ್ನು ಸೇವಿಸುವುದರ ಮೂಲಕ ನಮ್ಮ ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಿದೆ. ಆದರೆ, ಅನಾರೋಗ್ಯಕರ ಆಹಾರ ಪದ್ಧತಿಗಳು ವಿವಿಧ ಜೀವನಶೈಲಿ ರೋಗಗಳಿಗೆ ಕಾರಣವಾಗುವುವು.

## 2023 ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ

ವಿಶ್ವಸಂಸ್ಥೆಯ ಸೂಚನೆಯ ಪ್ರಕಾರ 2023ನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವಾಗಿ ಆಯ್ಕೆ ಮಾಡಲಾಗಿದೆ. **ಸಿರಿಧಾನ್ಯಗಳ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವುದು** ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ಪ್ರಮುಖ ಉದ್ದೇಶವಾಗಿದೆ. ಸಿರಿಧಾನ್ಯಗಳು ಹುಲ್ಲು ವರ್ಗಕ್ಕೆ ಒಳಪಡುವವುಗಳಾಗಿದೆ. ಸಿರಿಧಾನ್ಯಗಳಲ್ಲಿ ಜೋಳ, ರಾಗಿ, ಹಾರಕ ಅಕ್ಕಿ, ನವಣೆ ಇತ್ಯಾದಿ ಒಳಗೊಳ್ಳುವುವು. ಹೃದಯ ಸಂಬಂಧಿ ರೋಗಗಳು ಹಾಗೂ ಇತರ ಜೀವನಶೈಲಿ ರೋಗಗಳನ್ನು ನಿಯಂತ್ರಿಸಲು ಸಿರಿಧಾನ್ಯಗಳಿಗೆ ಸಾಧ್ಯವಿದೆ. ಆದ್ದರಿಂದ ಪೋಷಕಾಂಶಯುಕ್ತ ಸಿರಿಧಾನ್ಯಗಳನ್ನು ನಮ್ಮ ದಿನ ನಿತ್ಯದ ಆಹಾರದಲ್ಲಿ ಸೇರಿಸಬೇಕು.


ರಾಗಿ


ಜೋಳ


ಬಾರ್ಲಿ


ಹಾರಕ ಅಕ್ಕಿ


ಸಜ್ಜೆ


ನವಣೆ

'ಅನಾರೋಗ್ಯಕರ ಆಹಾರ ರೀತಿ ಮತ್ತು ಜೀವನಶೈಲಿ ರೋಗಗಳು' ಎಂಬ ವಿಷಯದ ಬಗ್ಗೆ ಟಿಪ್ಪಣಿ ತಯಾರಿಸಿರಿ.

ಆಹಾರವಸ್ತುಗಳ ಲಭ್ಯತೆ ಎಲ್ಲಾ ನಾಗರಿಕರ ಕಾನೂನುಬದ್ಧ ಹಕ್ಕು ಆಗಿದೆ. ನಮಗೆ ಲಭಿಸುವ ಆಹಾರವನ್ನು ಎಚ್ಚರಿಕೆಯಿಂದ ಬಳಸಬೇಕು. ಆಹಾರವನ್ನು ಪೋಲು ಮಾಡುವುದು ಎಂಬುದು ಒಂದು ಹೊತ್ತಿನ ಆಹಾರ ಸಿಗದವರಿಗೆ ನಾವು ಮಾಡುವ ದ್ರೋಹವಾಗಿದೆ. ಇತರರಿಗೆ ಲಭಿಸಬೇಕಾದ ಆಹಾರವನ್ನು ನಾವು ಪೋಲು ಮಾಡುತ್ತಿರುವೆವು ಎಂಬ ತಿಳುವಳಿಕೆ ನಮ್ಮಲ್ಲಿರಬೇಕು.

## ಮುಂದುವರಿದ ಚಟುವಟಿಕೆಗಳು

1. ಈಗ ನೀವು ಸೇವಿಸುತ್ತಿರುವುದು ನಿಮ್ಮ ಹಿರಿಯರು ಅವರ ಬಾಲ್ಯದಲ್ಲಿ ಸೇವಿಸುತ್ತಿದ್ದ ಆಹಾರ ವಸ್ತುಗಳೇ ಆಗಿವೆಯೇ? ಈ ಬಗ್ಗೆ ನಾವು ಕೇಳಿತಿಳಿಯೋಣವೇ? ಮಾಹಿತಿಗಳನ್ನು ಹಿರಿಯರಲ್ಲಿ ಕೇಳಿ ನಿಮ್ಮ ನೋಟು ಪುಸ್ತಕದಲ್ಲಿ ಬರೆಯಿರಿ. ತಿಳಿದುಕೊಂಡ ಮಾಹಿತಿಗಳ ಆಧಾರದಲ್ಲಿ ಚಿತ್ರಗಳನ್ನು ಸೇರಿಸಿಕೊಂಡು 'ಆಹಾರ ಕ್ರಮದಲ್ಲಿ ಉಂಟಾದ ಬದಲಾವಣೆಗಳು' ಎಂಬ ವಿಷಯದ ಕುರಿತು ಹಸ್ತ ಪತ್ರಿಕೆಯೊಂದನ್ನು ತಯಾರಿಸಿರಿ.
2. ಯುದ್ಧ, ಬರಗಾಲ, ನೆರೆ ಮುಂತಾದ ಮಾನವ ನಿರ್ಮಿತ ದುರಂತಗಳು ಮತ್ತು ನೈಸರ್ಗಿಕ ದುರಂತಗಳು ಜಗತ್ತಿನ ಆಹಾರ ಭದ್ರತೆಗೆ ಬೆದರಿಕೆಯಾಗುವುದು ಹೇಗೆ? ಚಿತ್ರ ಪ್ರದರ್ಶನವನ್ನು ಆಯೋಜಿಸಿರಿ.
3. ಹಿಂದಿನ ಕಾಲದಲ್ಲಿ ಆಹಾರ ಧಾನ್ಯಗಳ ಸಂಗ್ರಹಕ್ಕೆ ಮತ್ತು ಬೇಯಿಸಲು ಉಪಯೋಗಿಸುತ್ತಿದ್ದ ಸಂಗ್ರಹಾಗಾರಗಳು, ಪಾತ್ರೆಗಳು ಎಂಬಿವುಗಳ ಚಿತ್ರಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಒಂದು ಪ್ರದರ್ಶನವೊಂದನ್ನು ಆಯೋಜಿಸಿರಿ.
4. ಸಿರಿಧಾನ್ಯಗಳನ್ನು ಸಂಗ್ರಹಿಸಿ, ಅದನ್ನು ಚಾರ್ಟಿನಲ್ಲಿ ಅಂಟಿಸಿ ಕಿರು ವಿವರಣೆಯೊಂದಿಗೆ ತರಗತಿಯಲ್ಲಿ ಪ್ರದರ್ಶಿಸಿರಿ. ಅದರೊಂದಿಗೆ ಶಾಲೆಯಲ್ಲಿ ಆಹಾರಮೇಳವನ್ನು ಆಯೋಜಿಸಿರಿ.
5. ನಿಮ್ಮ ಶಾಲೆಯ ಕೃಷಿ ತೋಟದಲ್ಲಿನ ಬೆಳೆಗಳ ಕುರಿತು ಟಿಪ್ಪಣಿ ತಯಾರಿಸಿರಿ.
6. ನಿಮ್ಮ ಊರಿನ ಕೃಷಿ ಸ್ಥಳಗಳು, ಆಹಾರವಸ್ತುಗಳು ಸಿಗುವ ಮಾರುಕಟ್ಟೆ ಮತ್ತು ಹೋಟೆಲುಗಳು ಎಂಬಿವುಗಳನ್ನು ಸೇರಿಸಿಕೊಂಡು ರೇಖಾಚಿತ್ರವನ್ನು ರಚಿಸಿ, ಪ್ರದರ್ಶಿಸಿರಿ.
7. 'ಆರೋಗ್ಯಕರ ಆಹಾರ ಅಭ್ಯಾಸಗಳು' ಎಂಬ ವಿಷಯದ ಬಗ್ಗೆ ಆರೋಗ್ಯ ಕಾರ್ಯಕರ್ತರೊಂದಿಗೆ ಸಂದರ್ಶನವನ್ನು ನಡೆಸಿರಿ.

# 3

# ವೃತ್ತಿ ವೈವಿಧ್ಯಗಳು



ಪ್ರತಿದಿನ ಮನೆಯ ಹೂದೋಟಕ್ಕೆ ನೀರುಣಿಸುವುದಕ್ಕಾಗಿ ಕೀರ್ತಿಗೆ ಅವಳ ತಂದೆ ಮತ್ತು ತಾಯಿ ಮಿಠಾಯಿಯನ್ನು ಉಡುಗೊರೆಯಾಗಿ ನೀಡುತ್ತಾರೆ.



ಮನೆಯಲ್ಲಿನ ಬಟ್ಟೆಗಳನ್ನು ಅಚ್ಚುಕಟ್ಟಾಗಿ ಜೋಡಿಸುವುದಕ್ಕಾಗಿ ತೇಜಸ್‌ನಿಗೆ ಅವನ ತಂದೆ ಮತ್ತು ತಾಯಿ ಕಥೆ ಪುಸ್ತಕವನ್ನು ಉಡುಗೊರೆಯಾಗಿ ನೀಡುತ್ತಾರೆ.

ಮೇಲಿನ ಚಿತ್ರಗಳನ್ನು ಗಮನಿಸಿದಿರಲ್ಲವೇ?

ಹೂದೋಟಕ್ಕೆ ನೀರು ಹಾಕಿದ್ದಕ್ಕೆ ಕೀರ್ತಿಗೆ ಲಭಿಸಿದ್ದೇನು?

•

ತೇಜಸ್ ತನ್ನ ಬಟ್ಟೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿದುದಕ್ಕಾಗಿ ಅವನ ಹೆತ್ತವರು ಅವನನ್ನು ಹೇಗೆ ಅಭಿನಂದಿಸಿದರು?

- 

ನಿಮ್ಮ ಮನೆಯ ಹಿರಿಯರು ಮಾಡುವ ಕೆಲಸಕ್ಕೆ ಪ್ರತಿಫಲವಾಗಿ ಏನು ಪಡೆಯುತ್ತಾರೆ?

## ಆದಾಯ

ಚಿತ್ರಗಳನ್ನು ಗಮನಿಸಿರಿ.















ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳ ಚಿತ್ರವನ್ನು ಗಮನಿಸಿದಿರಲ್ಲವೇ? ಪ್ರತಿಯೊಬ್ಬರು ಯಾವ ಯಾವ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ?

- ವ್ಯಾಪಾರ
- 
- 
- 
- 
- 

ಇವುಗಳಲ್ಲಿ ಯಾವ ಯಾವ ಚಟುವಟಿಕೆಗಳಿಗೆ/ಕೆಲಸಗಳಿಗೆ ಪ್ರತಿಫಲವಾಗಿ ಹಣ ಸಿಗುತ್ತದೆ?

- ಅಧ್ಯಾಪನ
- 
- 

ಯಾವ ಯಾವ ಚಟುವಟಿಕೆಗಳಿಗೆ ಬಹುಮಾನ ನೀಡಲಾಗುತ್ತದೆ?

- 
- 
- 

ನಾವು ಮಾಡುವ ಕೆಲವು ಕೆಲಸಗಳಿಗೆ ಬಹುಮಾನಗಳೂ ಕೆಲವೊಂದಕ್ಕೆ ಪ್ರತಿಫಲವಾಗಿ ಹಣವೂ ಸಿಗುತ್ತವೆ. ಅಧ್ಯಾಪನ, ವ್ಯಾಪಾರ, ಸಮಾಜಸೇವೆಯಂತಹ ಚಟುವಟಿಕೆಗಳಿಗೆ ಪ್ರತಿಫಲವಾಗಿ ವ್ಯಕ್ತಿಗಳಿಗೆ ಹಣವು ಲಭಿಸುತ್ತದೆ. ವ್ಯಕ್ತಿಯು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಕ್ಕೆ ಒಂದು ನಿರ್ದಿಷ್ಟ ಅವಧಿಯಲ್ಲಿ ಪಡೆಯುವ ಹಣವನ್ನು ಆದಾಯ ಎನ್ನುವರು. ಈ ರೀತಿಯಾಗಿ ಹಣವನ್ನು ಪ್ರತಿಫಲವಾಗಿ ಪಡೆಯುವ ಇತರ ಚಟುವಟಿಕೆಗಳನ್ನು ಕಂಡುಹಿಡಿಯಿರಿ.

## ಉದ್ಯೋಗ

ಈ ಕವಿತೆಯನ್ನು ಆಲಿಸಿರಿ.

### ಪಡಿಪ್ಪು ತೀರ್ನಾಲ್

ಚೋದ್ಯಂ:
ಪಡಿಪ್ಪು ತೀರ್ನಾಲ್, ಪಳ್ಳಿಕ್ಕೂಡಂ
ವಿಟ್ಟುಕಯಿನ್ನಾಲ್
ಪರಯುಗ ಪರಯುಗ ಪಿನ್ನೀಡೆಂದೊರು
ಪಣಿಕು ಪೋಕುಂ ನೀ?

* * * * * *

ಉತ್ತರಂ:

ಒನ್ನಾಮನ್:
ಕೃಷಿಕ್ಕು ಪೋಕುಂ, ಕೃಷಿಕ್ಕು ಪೋಕುಂ
ಕೃಷಿಕ್ಕು ಪೋಕುಂ ಇಾನ್,
ಕೃಷಿಕ್ಕು, ನಮ್ಮುಡೆ ಪಿತಾಕಳ್ ಚೆಯ್ದೊರು
ತೊಯಿಲುಂ, ಪೋಕುಂ ಇಾನ್

* * * * * *

ರಂಡಾಮನ್:
ಪಣಂ ಮುಡಕ್ಕಿ ಕೋಡಿಕಣಕ್ಕಿನು
ಕಚ್ಚವಡತ್ತಿನಾಯ್,
ತುಣಿಇೀಡುಂ ಇಾನ್; ತೊಯಿಲಿದಿಲ್
ನಲ್ಲತು ವೇರೊನ್ನುಂಡಾಮೋ?

* * * * * *

ಮೂನಾಮನ್:
ನಾಟ್ಟಿಲಶಿಕ್ಷಿತರಾಯಲಯುನ್ನ
ಶಿಶುಕಳೆಯೆಲ್ಲಾಂ ಇಾನ್
ಕೂಟ್ಟಿ, ಮಿಗಚ್ಚೊರು ವಿದ್ಯಾನಿಲಯನಾ
ರಂಭಿಚ್ಚಿಡುಂ

* * * * * *

ನಾಲಾಮನ್:
ಪಡಿಪ್ಪು ತೀರ್ನಾಲ್ ಪಟ್ಟಾಳತ್ತಿಲ್
ಪ್ರೋಯಿಚ್ಚೇರುಂ ಇಾನ್
ಪಡನಾಯಕನಾಯ್ ಭಾರತರಾಜ್ಯಂ
ಪರಿಪಾಲಿಕ್ಕುಂ ಇಾನ್

* * * * * *

ಎನ್.ವಿ. ಕೃಷ್ಣವಾರಿಯರ್

(ಸಾರಾಂಶ: ಎನ್.ಪಿ ಕೃಷ್ಣ ವಾರಿಯರ್ ರವರು ಬರೆದ ಈ ಪದ್ಯದಲ್ಲಿ ವಿದ್ಯಾಭ್ಯಾಸ ಕಳೆದು ಮುಂದೇನು? ಎಂಬ ಪ್ರಶ್ನೆಗೆ ಉತ್ತರರೂಪದಲ್ಲಿ ಕೃಷಿ, ವ್ಯಾಪಾರ, ಶಿಕ್ಷಣ, ಸೈನಿಕ ಎಂಬ ವಿವಿಧ ವೃತ್ತಿ/ಕೆಲಸಗಳ ಕುರಿತು ತಿಳಿಸುತ್ತಾ ಅದರ ಮಹತ್ವವನ್ನು ಸಾರುತ್ತಿದ್ದಾರೆ)

ಇಲ್ಲಿ ಕವಿಯು ವಿದ್ಯಾಭ್ಯಾಸದ ನಂತರ ನಾವು ಆಯ್ಕೆ ಮಾಡುವ ವಿವಿಧ ವೃತ್ತಿಗಳ ಕುರಿತು ಸೂಚಿಸಿದ್ದಾರೆ. ಯಾವೆಲ್ಲಾ ಕಸುಬುಗಳನ್ನು ಈ ಸಾಲುಗಳು ಪರಿಚಯಿಸುತ್ತದೆ?

- ಕೃಷಿ
- 

ಭವಿಷ್ಯದಲ್ಲಿ ನೀವು ಮಾಡಲು ಬಯಸುವ ವೃತ್ತಿ ಯಾವುದು?

ಮನುಷ್ಯರು ದೈಹಿಕ ಶ್ರಮವಿರುವ ಕೆಲಸವನ್ನು ಮಾತ್ರ ಮಾಡುತ್ತಾರೆಯೇ?

ಒಬ್ಬ ವ್ಯಕ್ತಿಯು ಆದಾಯಕ್ಕಾಗಿ ದೈಹಿಕವಾಗಿಯೋ, ಬೌದ್ಧಿಕವಾಗಿಯೋ, ನಿರ್ವಹಿಸುವ ಚಟುವಟಿಕೆಯನ್ನು ಉದ್ಯೋಗ ಎನ್ನುವರು. ಇದಕ್ಕೆ ಪ್ರತಿಫಲವಾಗಿ ವೇತನ ಅಥವಾ ಸಂಬಳ ಲಭಿಸುತ್ತದೆ. ಉದ್ಯೋಗವು ವ್ಯಕ್ತಿಗಳಿಗೆ ಪ್ರಧಾನ ಆದಾಯದ ಮೂಲವಾಗಿದೆ.

### ಕೂಲಿ ಮತ್ತು ಸಂಬಳ

ಒಪ್ಪಂದದ ಪ್ರಕಾರ ಸೇವೆ ಸಲ್ಲಿಸಿದ್ದಕ್ಕೆ ಉದ್ಯೋಗದಾತನು ಕಾರ್ಮಿಕನಿಗೆ ನೀಡುವ ಪ್ರತಿಫಲವೇ ಕೂಲಿ. ಗಂಟೆ ಅಥವಾ ದಿನದ ಆಧಾರದಲ್ಲಿ ಕೂಲಿಯನ್ನು ನಿಶ್ಚಯಿಸಲಾಗುತ್ತದೆ. ಪ್ರತಿ ತಿಂಗಳ ಆಧಾರದಲ್ಲಿ ಉದ್ಯೋಗಿಗಳು ನಿರ್ವಹಿಸುವ ಕೆಲಸಕ್ಕೆ ಉದ್ಯೋಗದಾತ ನೀಡುವ ಪ್ರತಿಫಲವು ಸಂಬಳವಾಗಿದೆ.

ನಿಮ್ಮ ಮನೆಯಲ್ಲಿ ಯಾರೆಲ್ಲಾ ಆದಾಯ ಗಳಿಸುವ ಚಟುವಟಿಕೆಗಳಲ್ಲಿ ತೊಡಗಿದ್ದಾರೆ?

ನಿಮ್ಮ ಕುಟುಂಬದ ಸದಸ್ಯರ ಉದ್ಯೋಗವನ್ನು ಪಟ್ಟಿ ಮಾಡಿರಿ.

| ಕುಟುಂಬದ ಸದಸ್ಯರು | ಉದ್ಯೋಗ |
|---|---|
| • | |
| • | |
| • | |


## ಆದಾಯದ ಮೂಲಗಳು

ನಮ್ಮ ಸುತ್ತಮುತ್ತಲಿನ ಜನರು ವಿವಿಧ ರೀತಿಯ ಉದ್ಯೋಗಗಳ ಮೂಲಕ ಆದಾಯವನ್ನು ಗಳಿಸುತ್ತಾರೆ. ಕೃಷಿ, ವ್ಯಾಪಾರ, ಬ್ಯಾಂಕ್ ಠೇವಣಿ ಮತ್ತು ಇತರ ಆಸ್ತಿಗಳಿಂದ ಆದಾಯ ಬರುತ್ತದೆ. ಈ ರೀತಿ ಆದಾಯ ಲಭಿಸುವ ಶ್ರಮ ಅಥವಾ ವಸ್ತುಗಳೇ ಆದಾಯದ ಮೂಲಗಳು.

**ಆಸ್ತಿಗಳು**

ವಿವಿಧ ರೂಪಗಳಲ್ಲಿರುವ ಹಣಕಾಸು ಸಂಪನ್ಮೂಲಗಳನ್ನು ಆಸ್ತಿಗಳು ಎಂದು ಕರೆಯಲಾಗುತ್ತದೆ. ಕಟ್ಟಡಗಳು, ಭೂಮಿ ಇತ್ಯಾದಿ ಆಸ್ತಿಗಳಿಗೆ ಉದಾಹರಣೆಗಳಾಗಿವೆ.

ಆದಾಯದ ವಿವಿಧ ಮೂಲಗಳನ್ನು ಚಿತ್ರಿಸುವ ರೇಖಾಚಿತ್ರವನ್ನು ಪೂರ್ತಿಗೊಳಿಸಿರಿ.



ವಿವಿಧ ಮೂಲಗಳಿಂದ ಲಭಿಸುವ ಆದಾಯವನ್ನು ಪಟ್ಟಿ ಮಾಡಲಾಗಿದೆ ಅವುಗಳನ್ನು ಗಮನಿಸಿರಿ.

| ಆದಾಯದ ಮೂಲಗಳು | ಆದಾಯ |
|---|---|
| ಕೃಷಿ | ಬೆಳೆ |
| ಉದ್ಯೋಗ | ಕೂಲಿ/ಸಂಬಳ |
| ವ್ಯಾಪಾರ | ಲಾಭ |
| ಬ್ಯಾಂಕ್ ಠೇವಣಿ | ಬಡ್ಡಿ |
| ಆಸ್ತಿಗಳು/ಸೊತ್ತು | ಬಾಡಿಗೆ/ಗೇಣಿ |
| ಶೇರು ಹೂಡಿಕೆ | ಲಾಭಾಂಶಗಳು |

ನಿಮ್ಮ ಕುಟುಂಬದ ವಿವಿಧ ಆದಾಯದ ಮೂಲಗಳ ಕುರಿತು ಚರ್ಚಿಸಿರಿ.

## ವೈಯಕ್ತಿಕ ಆದಾಯ ಮತ್ತು ಕುಟುಂಬದ ಆದಾಯ

ಆದಾಯದ ಮೂಲಗಳು ವಿಭಿನ್ನವಾಗಿರುವಂತೆ ಅವುಗಳಿಂದ ಬರುವ ಆದಾಯವು ಭಿನ್ನವಾಗಿರುತ್ತದೆ. ಒಬ್ಬ ವ್ಯಕ್ತಿಯು ವಿವಿಧ ಮೂಲಗಳಿಂದ ಆದಾಯವನ್ನು ಗಳಿಸಬಹುದು. ಉದಾಹರಣೆಗೆ ಕೃಷಿಯಲ್ಲಿ ತೊಡಗಿರುವ ವ್ಯಕ್ತಿಗೆ ಕೃಷಿಗೆ ಸಂಬಂಧಿಸಿದ ವ್ಯವಹಾರಗಳಿಂದ ಅಥವಾ ತನ್ನ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿಯಿಂದ ಆದಾಯ ಲಭಿಸಬಹುದು. ಈ ರೀತಿಯಾಗಿ ಒಬ್ಬ ವ್ಯಕ್ತಿಯು ಉದ್ಯೋಗ ಮತ್ತು ಉದ್ಯೋಗೇತರ ಮಾರ್ಗಗಳ ಮೂಲಕ ಆದಾಯವನ್ನು ಗಳಿಸುತ್ತಾನೆ. ಒಂದು ನಿರ್ದಿಷ್ಟ ಅವಧಿಯಲ್ಲಿ ವ್ಯಕ್ತಿಯು ವಿವಿಧ ಆದಾಯದ ಮೂಲಗಳಿಂದ ಗಳಿಸುವ ಆದಾಯವನ್ನು ವೈಯಕ್ತಿಕ ಆದಾಯ ಎನ್ನುವರು.

ನಿಮ್ಮ ಕುಟುಂಬದ ವಿವಿಧ ಆದಾಯದ ಮೂಲದ ಬಗ್ಗೆ ನೀವು ಚರ್ಚಿಸಿರುವಿರಲ್ಲವೇ? ಒಂದು ಕುಟುಂಬದ ಎಲ್ಲಾ ಸದಸ್ಯರಿಗೆ ಒಂದು ನಿರ್ದಿಷ್ಟ ಅವಧಿಗೆ ಲಭಿಸುವ ಒಟ್ಟು ಆದಾಯವೇ ಕುಟುಂಬದ ಆದಾಯವಾಗಿದೆ.

ನಿಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಗಮನಿಸಿರಿ. ಆದಾಯದ ವಿವಿಧ ಮೂಲಗಳನ್ನು ಮತ್ತು ಅವುಗಳಿಂದ ಬರುವ ಆದಾಯವನ್ನು ಪಟ್ಟಿ ಮಾಡಿರಿ.


## ಹಲವು ವಿಧದ ಉದ್ಯೋಗಗಳು

ಚಿತ್ರಗಳನ್ನು ನಿರೀಕ್ಷಿಸಿರಿ.













ಮೇಲೆ ನೀಡಿರುವ ಚಿತ್ರಗಳನ್ನು ಗಮನಿಸಿರಿ.
ಚಿತ್ರದಲ್ಲಿ ಯಾವೆಲ್ಲಾ ವೃತ್ತಿಗಳನ್ನು ಕಾಣಬಹುದು?

- ಅಧ್ಯಾಪನ
-
-
-
-
-

### ಕೃಷಿ ಕೆಲಸಗಳು

ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಆಹಾರ ಮತ್ತು ನಾರಿನ ಉತ್ಪಾದನೆಗೆ ಸಸ್ಯಗಳನ್ನು ಬೆಳೆಸುವುದು, ಜಾನುವಾರು ಸಾಕಣೆ, ಮೀನು ಸಾಕಣೆ ಇತ್ಯಾದಿಗಳು ಕೃಷಿ ಕೆಲಸಗಳಾಗಿವೆ. ಭಾರತದ ಆರ್ಥಿಕತೆಯಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸುತ್ತದೆ. ಭಾರತದಲ್ಲಿ ಒಟ್ಟು ಉದ್ಯೋಗಿಗಳಲ್ಲಿ ಶೇಕಡಾ 46.5ರಷ್ಟು ಜನರು ಕೃಷಿ ಮತ್ತು ಅನುಬಂಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

(ಆರ್ಥಿಕ ಸಮೀಕ್ಷೆ: 2022-23)

### ಕೃಷಿಯೇತರ ಕೆಲಸಗಳು

ಕೃಷಿ ಅನುಬಂಧ ಕೆಲಸಗಳಲ್ಲಿ ಒಳಪಡದ ಎಲ್ಲಾ ರೀತಿಯ ಕೆಲಸಗಳನ್ನು ಕೃಷಿಯೇತರ ಕೆಲಸಗಳು ಎಂದು ಪರಿಗಣಿಸಬಹುದು. ಕೈಗಾರಿಕಾ ಆಧಾರದ ಮೇಲೆ ಉತ್ಪನ್ನಗಳನ್ನು ನಿರ್ಮಿಸುವ ಕೆಲಸಗಳು ವಿವಿಧ ರೀತಿಯ ಸೇವೆಗಳು, ಕೃಷಿಯೇತರ ಚಟುವಟಿಕೆಗಳಾಗಿವೆ. ಬಟ್ಟೆ ತಯಾರಿ, ಕಟ್ಟಡ ನಿರ್ಮಾಣ, ವ್ಯಾಪಾರ, ಬ್ಯಾಂಕಿಂಗ್, ಅಧ್ಯಾಪನ, ಸಾರಿಗೆ, ಕಾರ್ಖಾನೆ ಉದ್ಯೋಗಗಳು ಇತ್ಯಾದಿ ಕೆಲಸಗಳು ಕೃಷಿಯೇತರ ಕೆಲಸಗಳಿಗೆ ಉದಾಹರಣೆಗಳಾಗಿವೆ.

ನಿಮ್ಮ ಶಾಲೆಯಲ್ಲಿ ಕೃಷಿ ಕ್ಲಬ್ ಸಹಯೋಗದಿಂದ ಯಾವೆಲ್ಲಾ ಚಟುವಟಿಕೆಗಳನ್ನು ನಡೆಸುತ್ತೀರಿ? ಟಿಪ್ಪಣಿ ಬರೆಯಿರಿ.



ನಿಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಂಡುಬರುವ ಕೆಲಸಗಳನ್ನು ಕೃಷಿ ಕೆಲಸಗಳು ಹಾಗೂ ಕೃಷಿಯೇತರ ಕೆಲಸಗಳಾಗಿ ವರ್ಗೀಕರಿಸುವ ಮೂಲಕ ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕೃಷಿ ಕೆಲಸಗಳು | ಕೃಷಿಯೇತರ ಕೆಲಸಗಳು |
|---|---|
| • ಭತ್ತದ ಕೃಷಿ | • ವ್ಯಾಪಾರ |
| • ಮೀನು ಸಾಕಣೆ | • ಕಟ್ಟಡ ನಿರ್ಮಾಣ |
| • | • |
| • | • |
| • | • |

## ಸ್ವ ಉದ್ಯೋಗ



ಸಿಬಿಯ ಪೋಷಕರು 'ಸ್ಟಾರ್ ಪಿಕಲ್ಸ್' ಎಂಬ ಉಪ್ಪಿನಕಾಯಿ ಘಟಕವನ್ನು ನಡೆಸುತ್ತಿದ್ದಾರೆ. ಸ್ವಂತ ಉದ್ಯೋಗವೇ ಇಲ್ಲದ ಪರಿಸ್ಥಿತಿಯಲ್ಲಿ ಸರಕಾರದ ನೆರವಿನಿಂದ ಆರಂಭವಾದ ಈ ಉದ್ದಿಮೆಯು ಲಾಭದಾಯಕವಾಗಿ ಮುನ್ನಡೆಯುತ್ತಿದೆ. ಇದು ಸಿಬಿಯ ಕುಟುಂಬಕ್ಕೆ ಆದಾಯದ ಮೂಲವಾಗಿರುವುದಲ್ಲದೆ , ಸುಮಾರು 10ರಷ್ಟು ಕುಟುಂಬಗಳಿಗೆ ಈ ಉದ್ದಿಮೆಯ ಮೂಲಕ ಉದ್ಯೋಗ ಲಭಿಸುತ್ತದೆ.

ಟಿಪ್ಪಣಿ ಓದಿದಿರಲ್ಲವೇ? ಈ ರೀತಿಯ ಉದ್ದಿಮೆಗಳನ್ನು ವ್ಯಕ್ತಿಗತವಾಗಿ ಅಥವಾ ಗುಂಪುಗಳಲ್ಲಿಯೋ ನಡೆಸುವುದನ್ನು ಗಮನಿಸಿದ್ದೀರಾ?

ಸ್ವಉದ್ಯೋಗ ಎಂದರೆ ಯಾವುದೇ ಉದ್ಯೋಗದಾತರ ನಿಯಂತ್ರಣಕ್ಕೆ ಒಳಗಾಗದೆ ಸ್ವತಂತ್ರ ಆರ್ಥಿಕ ಚಟುವಟಿಕೆಯ ಮೂಲಕ ಜೀವನೋಪಾಯವನ್ನು ಗಳಿಸುವುದು. ಸ್ವಉದ್ಯೋಗದಲ್ಲಿ ತೊಡಗಿರುವ ವ್ಯಕ್ತಿಯು ತನ್ನ ಉದ್ಯಮದ ಒಡೆತನ ಹಾಗೂ ಅದೇ ಸಮಯದಲ್ಲಿ ಒಬ್ಬ ನೌಕರನ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಾನೆ. ಸ್ವಉದ್ಯೋಗದಲ್ಲಿ ವ್ಯಕ್ತಿಗಳು ಹೆಚ್ಚಾಗಿ ತಾವೇ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಹಾಗಾಗಿ ಅದರಿಂದ ಬರುವ ಆದಾಯದ ಪೂರ್ಣ ಫಲಾನುಭವಿಗಳು ಅವರಾಗಿರುತ್ತಾರೆ. ನಿಮ್ಮ ಪ್ರದೇಶದಲ್ಲಿ ವ್ಯಕ್ತಿಗಳು ವ್ಯಕ್ತಿಗತವಾಗಿಯೋ, ಗುಂಪಾಗಿಯೋ ನಡೆಸುವ ದಿನಸಿಅಂಗಡಿಗಳು, ಹೊಲಿಗೆ ಅಂಗಡಿಗಳು, ಹೋಟೆಲ್‌ಗಳು ಇತ್ಯಾದಿಗಳನ್ನು ನೋಡಿರುವಿರಲ್ಲವೇ? ಇವೆಲ್ಲ ಸ್ವಉದ್ಯೋಗಕ್ಕೆ ಉದಾಹರಣೆಗಳಾಗಿವೆ. ಇತರ ಕೆಲವು ಉದಾಹರಣೆಗಳನ್ನು ಕಂಡುಹಿಡಿಯಿರಿ.

ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸಿ, ಅವು ಯಾವ ಉದ್ಯೋಗಕ್ಕೆ ಸಂಬಂಧಿಸಿದೆ ಎಂದು ಬರೆಯಿರಿ.



ಎ)..............................................



ಬಿ)..............................................



ಸಿ)..............................................



ಡಿ)..............................................

ಸ್ವ ಉದ್ಯೋಗ ಉದ್ದಿಮೆಯ ಲಕ್ಷಣಗಳನ್ನು ಬರೆಯಿರಿ.

- ಇತರರನ್ನು ಅವಲಂಬಿಸದೆ ಸ್ವಂತ ಉದ್ಯಮದ ಮೂಲಕ ಆದಾಯ ಗಳಿಸುವುದು
- 
- 

ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸ್ವಉದ್ಯೋಗದ ಪಾತ್ರ ಬಹಳ ದೊಡ್ಡದು ಅದಕ್ಕಾಗಿ ಸರಕಾರವು ಸ್ವ ಉದ್ಯೋಗ ಉದ್ಯಮವನ್ನು ಪ್ರೋತ್ಸಾಹಿಸಲು ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತದೆ.

| ಸ್ವ ಉದ್ಯೋಗ ಯೋಜನೆಗಳು | ಫಲಾನುಭವಿಗಳು |
|---|---|
| • ನವಜೀವನ್ ಯೋಜನೆ | • ಹಿರಿಯ ನಾಗರಿಕರು |
| • ಕೈವಲ್ಯ | • ವಿಶೇಷಚೇತನರು |
| • ಶರಣ್ಯ | • ಮಹಿಳೆಯರು |
| • | • |

ಸ್ವ ಉದ್ಯೋಗದ ಮೂಲಕ ಯಶಸ್ಸನ್ನು ಗಳಿಸಿದ ಕೆಲವರ ಅನುಭವಗಳನ್ನು ಕೆಳಗೆ ಕೊಡಲಾಗಿದೆ.

**ಮನೆಯಿಂದ ಆರಂಭಿಸಿದ ಉದ್ಯಮ**

ಮಲಪ್ಪುರಂ ಜಿಲ್ಲೆಯಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ ಅನು ಸ್ವಂತ ಮನೆಯಿಂದಲೇ ಉದ್ಯೋಗ ಪ್ರಾರಂಭಿಸಿದಳು. ಮನೆಯವರೆಲ್ಲರೂ ಮನೆಯಲ್ಲಿಯೇ ಅಗತ್ಯ ಸೌಕರ್ಯಗಳನ್ನು ಸಿದ್ಧಪಡಿಸಿ ಸಾಮಾನ್ಯ ತಿನಿಸುಗಳನ್ನು ತಯಾರಿಸಿ ಮಾರುತಿದ್ದರು. ಕ್ರಮೇಣ ಬೇಡಿಕೆ ಹೆಚ್ಚಾಯಿತು. ಇಂದು ಸುಮಾರು 60 ವಿಧದ ತಿಂಡಿಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತದೆ. ಒಂದು ವರ್ಷದಲ್ಲಿ ಸುಮಾರು 11 ಕೋಟಿ ರೂಪಾಯಿ ವ್ಯಾಪಾರ ನಡೆಯುತ್ತದೆ.

**ತಿಂಗಳಿಗೆ 50,000 ಸಂಪಾದಿಸುವ ಮನೆಯೊಡತಿ**

ಸಜಿತ ತನ್ನ ಚಿತ್ರಕಲೆ ಹವ್ಯಾಸವನ್ನು ವ್ಯಾಪಾರ ಮಟ್ಟಕ್ಕೆ ತಂದ ಯಶಸ್ವಿ ಉದ್ಯಮಿ. ಇವರು ಮಾಡುವ ವ್ಯಾಪಾರವು ಫ್ಯಾಬ್ರಿಕ್ ಪೈಂಟಿಂಗ್ ಆಗಿದೆ. ಸೀರೆ, ಶರ್ಟ್, ಚೂಡಿದಾರ, ಮಕ್ಕಳ ಉಡುಗೆಗಳ ಮೇಲೆ ಸುಂದರವಾಗಿ ಚಿತ್ರಿಸುತ್ತಾರೆ. ಅವರು ಫ್ಯಾಬ್ರಿಕ್ ಪೈಂಟಿಂಗ್ ನ್ನು ಹವ್ಯಾಸದಿಂದ ವ್ಯಾಪಾರವಾಗಿ ಯಶಸ್ವಿಯಾಗಿ ಅಭಿವೃದ್ಧಿ ಪಡಿಸಿದರು. ಈಗ ತಿಂಗಳಿಗೆ 50,000 ರೂಪಾಯಿ ಸಂಪಾದಿಸುತ್ತಾರೆ.

ಮೇಲೆ ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿದಿರಲ್ಲವೇ?

ದುಡಿಯುವ ಮನಸ್ಸು ಮತ್ತು ಆತ್ಮವಿಶ್ವಾಸವಿದ್ದರೆ ವಿವಿಧ ಕೆಲಸಗಳನ್ನು ಮಾಡುವ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಬಹುದು. ಪ್ರತಿಯೊಂದು ಕೆಲಸಕ್ಕೂ ಅದರದೇ ಆದ ಮಹತ್ವವಿದೆ. ಪ್ರತಿಯೊಬ್ಬರಿಗೂ ಅವರ ಶಿಕ್ಷಣ ಹಾಗೂ ಅಭಿರುಚಿಗೆ ತಕ್ಕಂತೆ ಉದ್ಯೋಗವನ್ನು ಆಯ್ಕೆ ಮಾಡುವ ಅವಕಾಶವಿದೆ. ದೇಶದ ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ನಿರ್ಧರಿಸುವಲ್ಲಿ ಉದ್ಯೋಗಗಳು ಪ್ರಮುಖ ಪಾತ್ರವಹಿಸುತ್ತವೆ.

## ಮುಂದುವರಿದ ಚಟುವಟಿಕೆಗಳು

1. ಸಮಾಜ ವಿಜ್ಞಾನ ಕ್ಲಬ್ ಚಟುವಟಿಕೆಗಳ ಭಾಗವಾಗಿ ನಿಮ್ಮ ನೆರೆಹೊರೆಯ ಕೃಷಿಕರನ್ನು ಸಂದರ್ಶನ ನಡೆಸಿ, ಕೃಷಿ ಉದ್ಯೋಗಗಳ ವೈವಿಧ್ಯಗಳ ಕುರಿತು ಸಂಕ್ಷಿಪ್ತ ವಿವರಣೆಯನ್ನು ತಯಾರಿಸಿರಿ.
2. ಟೀಚರ ಸಹಾಯದಿಂದ ನಿಮ್ಮ ಪ್ರದೇಶದಲ್ಲಿ ಕಂಡುಬರುವ ವಿವಿಧ ರೀತಿಯ ಉದ್ಯೋಗಗಳ ಕುರಿತು ವೀಡಿಯೋವನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.
3. ನಿಮ್ಮ ಪ್ರದೇಶದಲ್ಲಿರುವ ಉದ್ಯಮಿಗಳ ಸಂದರ್ಶನ ನಡೆಸಿರಿ. ಸಂದರ್ಶನಕ್ಕೆ ಬೇಕಾದ ಪ್ರಶ್ನಾವಳಿಯನ್ನು ಶಿಕ್ಷಕರ ಸಹಾಯದೊಂದಿಗೆ ಸಿದ್ಧಪಡಿಸಿರಿ.
4. ನಿಮ್ಮ ಸಮೀಪದ ಸ್ವ ಉದ್ಯೋಗ ಘಟಕಕ್ಕೆ ಭೇಟಿ ನೀಡಿ , ಚಟುವಟಿಕೆಗಳನ್ನು ನಿರೀಕ್ಷಿಸಿ ಅದರ ಕುರಿತು ಟಿಪ್ಪಣಿ ತಯಾರಿಸಿರಿ.
5. ಕೇರಳೀಯ ಸಮಾಜದ ಉದ್ಯೋಗ ಕ್ಷೇತ್ರದಲ್ಲಿನ ಬದಲಾವಣೆಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಸೆಮಿನಾರನ್ನು ಪ್ರಸ್ತುತಪಡಿಸಿರಿ.
6. ಸ್ವ ಉದ್ಯೋಗವನ್ನು ಪ್ರೋತ್ಸಾಹಿಸುವ ಸರಕಾರದ ಯೋಜನೆಗಳ ಕುರಿತು ಪ್ರೋಜೆಕ್ಟ್ ಸಿದ್ಧಪಡಿಸಿ ಸಮಾಜ ವಿಜ್ಞಾನ ಕ್ಲಬ್‌ನಲ್ಲಿ ಮಂಡಿಸಿರಿ.

# 4

# ವಸ್ತ್ರಗಳು ವಿವಿಧ ಕಾಲ ಘಟ್ಟಗಳಲ್ಲಿ



ಚಿತ್ರಗಳನ್ನು ನಿರೀಕ್ಷಿಸಿರಿ.

ಈ ಜೀವಿಗಳು ತೀವ್ರವಾದ ಸೆಖೆ, ಅಸಹನೀಯ ಚಳಿ ಮೊದಲಾದ ಸಂದರ್ಭಗಳಲ್ಲಿ ಹೇಗೆ ಬದುಕುತ್ತವೆ?

ಮೇಕೆಯ ರೋಮ, ಗಿಳಿಯ ಗರಿಗಳು, ಆಮೆಯ ಚಿಪ್ಪು ಪ್ರತಿಕೂಲ ವಾತಾವರಣದಲ್ಲಿ ವಸ್ತ್ರದಂತೆ ಇವುಗಳನ್ನು ಸಂರಕ್ಷಿಸುತ್ತವೆ. ಆದರೆ ಮನುಷ್ಯನು ಇಂತಹ ಸಂದರ್ಭಗಳನ್ನು ಹೇಗೆ ನಿಭಾಯಿಸಿದನು ಎಂದು ನೀವು ಯೋಚಿಸಿದ್ದೀರಾ?

- ಮನುಷ್ಯನಿಗೆ ಅಗತ್ಯವಾದ ಬಟ್ಟೆಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದಲೇ ತಯಾರಿಸಬೇಕಾಗಿ ಬಂತು.
- 
- 


ಇಂದು ಜನರು ಯಾವೆಲ್ಲಾ ರೀತಿಯ ಬಟ್ಟೆಗಳನ್ನು ಬಳಸುತ್ತಾರೆ?

ಬಟ್ಟೆಗಳು ನಮಗೆ ಹೇಗೆಲ್ಲಾ ಪ್ರಯೋಜನಕಾರಿಗಳಾಗಿವೆ ?
ಹೆಚ್ಚಿನ ವಿಷಯಗಳನ್ನು ಸೇರಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ಚಳಿಯಿಂದ ಸಂರಕ್ಷಣೆ
- ಸೆಖೆಯಿಂದ ಸಂರಕ್ಷಣೆ
- ದೇಹದ ಉಷ್ಣತೆಯನ್ನು ಕಾಯ್ದುಕೊಳ್ಳುತ್ತದೆ .
- ಕೀಟಗಳಿಂದ ಸಂರಕ್ಷಣೆ
-
-

ನಾವು ಬಳಸುವ ಬಟ್ಟೆಗೆ ಸುದೀರ್ಘ ಇತಿಹಾಸವಿದೆ. ಇಂದು ಉಪಯೋಗಿಸುವ ವಿವಿಧ ವಸ್ತ್ರಗಳ ವಿನ್ಯಾಸಗಳಿಗೆ ನಾವು ಹೇಗೆ ತಲುಪಿದೆವು ಎಂದು ನೋಡೋಣ

ಚಿತ್ರಗಳನ್ನು ಗಮನಿಸಿರಿ.


ಆದಿಮಾನವರು ಯಾವ ವಸ್ತುಗಳನ್ನು ಬಟ್ಟೆಯಾಗಿ ಬಳಸುತ್ತಿದ್ದರು?

| |
|---|
| • ಮರದ ತೊಗಟೆ |
| • |
| • |

ಬೇಟೆಯಾಡಿ ಬದುಕುತ್ತಿದ್ದ ಕಾಲದಲ್ಲಿ ತಮ್ಮ ಸುತ್ತಮುತ್ತಲು ದೊರಕುವ ವಸ್ತುಗಳನ್ನು ಮನುಷ್ಯರು ಬಟ್ಟೆಯಾಗಿ ಬಳಸುತ್ತಿದ್ದರು. ಹುಲ್ಲು, ಎಲೆಗಳು, ಮರದ ತೊಗಟೆ ಮತ್ತು ಪ್ರಾಣಿಗಳ ಚರ್ಮದಿಂದ ಬಟ್ಟೆಯನ್ನು ತಯಾರಿಸಿದರು. ಪ್ರಾಣಿಗಳ ಕೊಂಬುಗಳು ಮತ್ತು ಎಲುಬುಗಳನ್ನು ಸೂಜಿಗಳಂತೆ ಬಳಸಿ ಬಟ್ಟೆಗಳನ್ನು ನಿರ್ಮಿಸುವ ಉಪಕರಣವಾಗಿ ಉಪಯೋಗಿಸಿದರು. ನಯಗೊಳಿಸಿದ ಕಲ್ಲುಗಳನ್ನು ಆಯುಧಗಳಾಗಿ ಬಳಸುತ್ತಿದ್ದ ಕಾಲದಲ್ಲಿ ಬಟ್ಟೆಗಳನ್ನು ಹೊಲಿಯಲು ಕಲ್ಲಿನ ಸೂಜಿಗಳು ಸಹಕರಿಸಿತು. ಅವರು ಪ್ರಾಣಿಗಳ ಚರ್ಮ ಮತ್ತು ರೋಮವನ್ನು ಸ್ವಚ್ಛಗೊಳಿಸಿ ಮತ್ತು ಹದಗೊಳಿಸಿ ಬಟ್ಟೆಗಳನ್ನು ತಯಾರಿಸಿದರು.


ಕಲ್ಲಿನ ಸೂಜಿ


ಆದಿಮಾನವರ ವಸ್ತ್ರ ತಯಾರಿ ಇಂದಿನಂತಿರಲಿಲ್ಲ. ಇದಕ್ಕೆ ಕಾರಣವೇನಾಗಿರಬಹುದು?

## ನೇಯ್ಗೆ ವಿದ್ಯೆಯ ಕಡೆಗೆ

ಆರಂಭ ಕಾಲದಲ್ಲಿ ಪರಿಸರದಿಂದ ಸಂಗ್ರಹಿಸಿದ ನಾರುಗಳಿಂದ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು.

ನಾರುಗಳನ್ನು ಒಟ್ಟು ಸೇರಿಸಿ ಬಿಡಿಸಿ ಉದ್ದನೆಯ ನೂಲುಗಳಾಗಿ ಮಾಡಲಾಗುತ್ತಿತ್ತು. ನೇಯ್ಗೆಯು ಈ ರೀತಿಯ ನೂಲುಗಳನ್ನು ಬಳಸಿ ಬಟ್ಟೆ ನಿರ್ಮಿಸುವ ವಿದ್ಯೆಯಾಗಿದೆ.

### ಸಿಂಧೂ ನದೀತೀರದ ವಸ್ತ್ರ

ಸಿಂಧೂ ನದಿ ನಾಗರಿಕತೆಯು ಭಾರತದ ವಾಯುವ್ಯ ಭಾಗದಲ್ಲಿ ಅಸ್ತಿತ್ವದಲ್ಲಿದ್ದ ಪ್ರಾಚೀನ ನದಿ ತೀರದ ನಾಗರಿಕತೆಯಾಗಿದೆ. ಸಿಂಧೂ ಜನರು ಹತ್ತಿ ಮತ್ತು ಉಣ್ಣೆಯ ಬಟ್ಟೆಗಳನ್ನು ತಯಾರಿಸುತ್ತಿದ್ದರು ಎಂದು ಲಭ್ಯವಿರುವ ಪುರಾವೆಗಳ ಆಧಾರದಲ್ಲಿ ಊಹಿಸಬಹುದು. ಅಲ್ಲಿ ಕಂಡುಬರುವ ನಿಲುವಂಗಿ ತೊಟ್ಟ ಪ್ರತಿಮೆಗಳು ಅಲ್ಲಿನ ಜನರ ವಸ್ತ್ರ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಇಲ್ಲಿಂದ ಹತ್ತಿಯನ್ನು ಬೇರೆ ದೇಶಗಳಿಗೆ ಕೊಂಡೊಯ್ಯಲಾಗುತ್ತಿತ್ತು ಎಂದು ತಿಳಿಯಲಾಗಿದೆ.

ಕಾಲಕ್ರಮೇಣ ನೇಯ್ಗೆ ತಂತ್ರವು ಹೆಚ್ಚು ಅಭಿವೃದ್ಧಿ ಹೊಂದಿತು. ಮೊದಲಿಗೆ ಹತ್ತಿ ಮತ್ತು ಸೆಣಬಿನಿಂದ ತಯಾರಿಸಿದ ನೂಲು ಬಳಸಿ ಕೈಗಳಿಂದ ಮಾತ್ರ ಬಟ್ಟೆ ನಿರ್ಮಿಸುತ್ತಿದ್ದರು. ಪ್ರಾಣಿಗಳ ಚರ್ಮಕ್ಕಿಂತ ನೂಲಿನಿಂದ ನೇಯ್ದ ಬಟ್ಟೆಗಳು ಉತ್ತಮ ಎಂಬ ಅರಿವು ನೇಯ್ಗೆ ವಸ್ತ್ರಗಳ ವ್ಯಾಪಿಸುವಿಕೆಗೆ ಕಾರಣವಾಯಿತು. ಮರದ ಮಗ್ಗಗಳನ್ನು ಬಳಸಿ ಬಟ್ಟೆಯನ್ನು ತಯಾರಿಸುವ ರೀತಿ ನಂತರ ಬೆಳೆಯಿತು.

ಮಾನವರ ಅತಿಯಾದ ಬಟ್ಟೆಯ ಬೇಡಿಕೆಯು ನೇಯ್ಗೆ ಉಪಕರಣಗಳ ಆವಿಷ್ಕಾರಕ್ಕೆ ಕಾರಣವಾಯಿತು. ಇದು ನೇಯ್ಗೆಯನ್ನು ವೇಗಗೊಳಿಸಲು ಸಹಾಯ ಮಾಡಿತು. ಕೈಮಗ್ಗದ ಬಟ್ಟೆಗಳೆಂದರೆ ನೂಲು ಉಪಯೋಗಿಸಿ ಕೈಮಗ್ಗದಿಂದ ನೇಯ್ದ ಬಟ್ಟೆಗಳಾಗಿವೆ.


ಹಿಂದಿನ ಕಾಲದ ನೂಲುವ ಯಂತ್ರ


ಕೈಮಗ್ಗ

ಕೈಮಗ್ಗದ ಆವಿಷ್ಕಾರವು ಬಟ್ಟೆ ನಿರ್ಮಾಣ ಕ್ಷೇತ್ರದಲ್ಲಿ ಪ್ರಗತಿಯನ್ನು ಉಂಟು ಮಾಡಿತು. ನೀಲಿ (Indigo) ಸಸ್ಯದಿಂದ ಮಾಡಿದ ಬಣ್ಣದಿಂದ ಬಟ್ಟೆಗಳಿಗೆ ಬಣ್ಣ ನೀಡಲಾಯಿತು. ಕಾಲಕ್ರಮೇಣ ನೇಯ್ಗೆ ತಂತ್ರವು ಹೆಚ್ಚು ಜನಪ್ರಿಯವಾಯಿತು.


ಹತ್ತಿ (Cotton)

ಹತ್ತಿಯು ಪ್ರಪಂಚದಾದ್ಯಂತ ಬಟ್ಟೆಗಳನ್ನು ತಯಾರಿಸಲು ಬಳಸುವ ವಸ್ತುವಾಗಿದೆ. ಹತ್ತಿ ಗಿಡದಿಂದ ಸಿಗುವ ಹತ್ತಿಯಿಂದ ನೂಲನ್ನು ಮಾಡಿ ಬಟ್ಟೆ ತಯಾರಿಕೆಗೆ ಬಳಸುತ್ತಾರೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಹತ್ತಿಯನ್ನು ಬೆಳೆಸಲಾಗುತ್ತಿದೆ.


ಸೆಣಬು (Jute)

ಸೆಣಬಿನ ಸಸ್ಯದಿಂದ ಸೆಣಬನ್ನು ಉತ್ಪಾದಿಸಲಾಗುತ್ತದೆ. ಸೆಣಬು ಒಂದು ನೈಸರ್ಗಿಕ ನಾರು. ಫಲವತ್ತಾದ ಗಂಗಾ ನದಿ ತೀರದಲ್ಲಿ ಹೆಚ್ಚಾಗಿ ಸೆಣಬಿನ ಕೃಷಿ ಮಾಡಲಾಗುತ್ತದೆ. ವಿದೇಶಿಯರು ಜವಳಿ ಉದ್ಯಮಕ್ಕಾಗಿ ಭಾರತದಿಂದ ಹೆಚ್ಚಿನ ಪ್ರಮಾಣದಲ್ಲಿ ಸೆಣಬನ್ನು ಕೊಂಡೊಯ್ಯುತ್ತಿದ್ದರು.


ನೀಲಿ ಸಸ್ಯ (Indigo)

ಆರಂಭ ಕಾಲದಲ್ಲಿ ನೀಲಿಗಿಡದಿಂದ ತಯಾರಿಸಿದ ಬಣ್ಣವನ್ನು ಬಟ್ಟೆಗೆ ಬಣ್ಣ ಹಚ್ಚಲು ಬಳಸಲಾಗುತ್ತಿತ್ತು . ನಂತರ ನೀಲಿ ಬಣ್ಣಕ್ಕೆ ಇತರ ಬಣ್ಣಗಳನ್ನು ಸೇರಿಸುವ ಮೂಲಕ ವಿವಿಧ ಬಣ್ಣಗಳನ್ನು ತಯಾರಿಸುತ್ತಿದ್ದರು.

ನಮ್ಮ ರಾಜ್ಯದಲ್ಲಿಯೂ ಸಾಕಷ್ಟು ಕೈಮಗ್ಗದ ಕೇಂದ್ರಗಳಿವೆ. ಕಣ್ಣೂರು, ತಿರುವನಂತಪುರ ಜಿಲ್ಲೆಯ ಬಾಲರಾಮಪುರಂ ಮತ್ತು ತ್ರಿಶೂರ್ ಜಿಲ್ಲೆಯ ಕುತ್ತಂಬುಳ್ಳಿ ಮೊದಲಾದವುಗಳು ಪ್ರಮುಖ ಕೈಮಗ್ಗ ಕೇಂದ್ರಗಳಾಗಿವೆ.



ಕೈಮಗ್ಗದ ಬಟ್ಟೆಗಳು


ವೈಜ್ಞಾನಿಕ ಪ್ರಗತಿಯು ಬಟ್ಟೆ ತಯಾರಿಕೆಯ ಕ್ಷೇತ್ರದಲ್ಲಿ ಹೊಸ ಯಂತ್ರಗಳ ಆವಿಷ್ಕಾರಕ್ಕೆ ಕಾರಣವಾಯಿತು. ಚಿತ್ರದಲ್ಲಿ ಕಾಣುವ 'ಸ್ಪಿನ್ನಿಂಗ್ ಜೆನ್ನಿ' ಅವುಗಳಲ್ಲಿ ಒಂದಾಗಿದೆ.



### ಸ್ಪಿನ್ನಿಂಗ್ ಜೆನ್ನಿ (Spinning Jenny)

ಸ್ಪಿನ್ನಿಂಗ್ ಜೆನ್ನಿಯನ್ನು ಜೇಮ್ಸ್ ಹಾರ್‌ಗ್ರೀವ್ಸ್ ಕಂಡುಹಿಡಿದರು. ಕೈಯಿಂದ ನೇಯುವ ನೂಲಿನ ತಯಾರಿಕೆಯಿಂದ ಆ ಕಾಲದ ಬಟ್ಟೆಗಳ ಉದ್ಯಮದ ಅಗತ್ಯಗಳನ್ನು ಪೂರೈಸಲಾಗುತ್ತಿರಲಿಲ್ಲ. ಸ್ಪಿನ್ನಿಂಗ್ ಜೆನ್ನಿಯ ಆವಿಷ್ಕಾರವು ನೂಲಿನ ಉತ್ಪಾದನೆಯನ್ನು ವೇಗಗೊಳಿಸಿತು.

ಜನಸಂಖ್ಯೆಯ ಹೆಚ್ಚಳವು ಬಟ್ಟೆಯ ಬೇಡಿಕೆಯನ್ನು ಹೆಚ್ಚಿಸಿತು. ಹೊಸ ಯಂತ್ರಗಳು ನೇಯ್ಗೆಯ ಭಾಗವಾಯಿತು. ಅವು ಮನುಷ್ಯನ ಶ್ರಮವನ್ನು ಕಡಿಮೆ ಮಾಡಿತು. ಕೈಮಗ್ಗದ ಸ್ಥಾನಕ್ಕೆ ಯಂತ್ರದ ಮಗ್ಗ ಬಂತು.



### ಯಂತ್ರ ಮಗ್ಗ (Powerloom)

ಎಡ್ಮಂಡ್ ಕಾರ್ಟ್ ರೈಟ್ ಯಂತ್ರ ಮಗ್ಗವನ್ನು ಕಂಡುಹಿಡಿದರು. ಇದನ್ನು ವಿದ್ಯುಚ್ಛಕ್ತಿ ಅಥವಾ ಯಾವುದೇ ಇತರ ಇಂಧನ ಶಕ್ತಿಯ ಸಹಾಯದಿಂದ ನಿರ್ವಹಿಸಲಾಗುತ್ತದೆ. ಕೈಮಗ್ಗಕ್ಕಿಂತ ವೇಗವಾಗಿ ಹೆಚ್ಚು ಬಟ್ಟೆಗಳನ್ನು ಯಂತ್ರ ಮಗ್ಗದಿಂದ ಉತ್ಪಾದಿಸಬಹುದು.




ಯಾಂತ್ರೀಕೃತ ವಸ್ತ್ರ ತಯಾರಿ

ಕೈಗಾರಿಕೀಕರಣದ ಪರಿಣಾಮವಾಗಿ ಯುರೋಪಿಯನ್ನರು ತಾವು ಅಧಿಕವಾಗಿ ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಾಡಲು ಮಾರುಕಟ್ಟೆಗಳ ಹುಡುಕಾಟದಲ್ಲಿ ಪ್ರಪಂಚದ ವಿವಿಧ ಭಾಗಗಳಿಗೆ ಸಂಚರಿಸಿದರು. ಅವರು ಗುಂಪುಗಳಾಗಿ ಭಾರತಕ್ಕೂ ತಲುಪಿದರು. ಬಟ್ಟೆ ಉದ್ಯಮಕ್ಕೆ ಬೇಕಾದ ಕಚ್ಚಾವಸ್ತುಗಳನ್ನು ಅವರು ಭಾರತದಿಂದ ಯುರೋಪಿಗೆ ತೆಗೆದುಕೊಂಡು ಹೋದರು. ಅಲ್ಲಿ ಯಂತ್ರಗಳ ಸಹಾಯದಿಂದ ಉತ್ಪಾದಿಸಿದ ಬಟ್ಟೆಗಳನ್ನು ಭಾರತಕ್ಕೆ ತಲುಪಿಸಿ, ಮಾರಾಟ ಮಾಡಿದರು.

### ಯುರೋಪಿಯನ್ನರು

ಯುರೋಪ್ ಜಗತ್ತಿನ ಏಳು ಭೂಖಂಡಗಳಲ್ಲಿ ಒಂದಾಗಿದೆ. ಈ ಭೂಖಂಡದ ಜನರನ್ನು ಯುರೋಪಿಯನ್ನರು ಎಂದು ಕರೆಯಲಾಗುತ್ತದೆ. ಪೋರ್ಚುಗೀಸರು (ಪೋರ್ಚುಗಲ್) ಡಚ್ಚರು (ನೆದರ್ ಲ್ಯಾಂಡ್) ಬ್ರಿಟಿಷರು (ಇಂಗ್ಲೆಂಡ್) ಮತ್ತು ಫ್ರೆಂಚರು (ಫ್ರಾನ್ಸ್) ಮೊದಲಾದ ಯುರೋಪಿಯನ್ನರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. ಅವರು ಭಾರತವನ್ನು ವಸಾಹತನ್ನಾಗಿ ಮಾಡಿದರು. ಅವರು ಇಲ್ಲಿಂದ ಕಚ್ಚಾ ವಸ್ತುಗಳನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋದರು. ಇವರಲ್ಲಿ ಬ್ರಿಟೀಷರು ಭಾರತವನ್ನು ದೀರ್ಘಕಾಲ ವಸಾಹತನ್ನಾಗಿ ಮಾಡಿಕೊಂಡಿದ್ದರು.

ಸಮಾಜದಲ್ಲಿ ಉಂಟಾದ ಬದಲಾವಣೆಗಳು ಬಟ್ಟೆ ತಯಾರಿಯ ಮೇಲೆ ಗಮನಾರ್ಹವಾದ ಪರಿಣಾಮವನ್ನು ಬೀರಿತು. ಬಟ್ಟೆಯ ಬೇಡಿಕೆಯ ಹೆಚ್ಚಳವು ನವೀನ ನೇಯ್ಗೆ ಯಂತ್ರಗಳ ಅಭಿವೃದ್ಧಿಗೆ ಕಾರಣವಾಯಿತು. ಯಂತ್ರಗಳ ಸಹಾಯದಿಂದ ಉತ್ಪಾದನೆ ಹೆಚ್ಚಾಯಿತು. ಗುಣಮಟ್ಟ ಮತ್ತು ವೈವಿಧ್ಯಮಯ ಬಟ್ಟೆಗಳು ಹೆಚ್ಚು ಜನರನ್ನು ತಲಪಿದವು. ಬಟ್ಟೆಗಳಿಗೆ ಕೃತಕ ಬಣ್ಣಗಳನ್ನು ಬಳಸಲಾರಂಭಿಸಿದರು.




ವೈವಿಧ್ಯಮಯವಾದ ಉಡುಪುಗಳು ಮತ್ತು ಬಟ್ಟೆ ಬರೆಗಳು

ಇಂದು ನಾವು ಬಳಸುವ ಬಹುತೇಕ ಬಟ್ಟೆಗಳಲ್ಲಿ ಕಂಡುಬರುವ ವರ್ಣ ವೈವಿಧ್ಯವು ಈ ರೀತಿಯ ಬಣ್ಣಗಳನ್ನು ಬೆರೆಸಿ ತಯಾರಿಸಲಾಗುತ್ತದೆ.

ಯಂತ್ರಗಳನ್ನು ಬಳಸಿ ಬಟ್ಟೆ ತಯಾರಿಸಲು ಪ್ರಾರಂಭಿಸಿದಂತೆ ಆ ಕ್ಷೇತ್ರದಲ್ಲಿ ಉಂಟಾದ ಗುಣಾತ್ಮಕ ಬದಲಾವಣೆಗಳನ್ನು ಗಮನಿಸಿರಿ.

**ಯಂತ್ರಗಳ ಬಳಕೆಯಿಂದ ಬಟ್ಟೆ ತಯಾರಿಯಲ್ಲಿ ಉಂಟಾದ ಬದಲಾವಣೆಗಳು**

- ಬಟ್ಟೆ ಉತ್ಪಾದನೆಯಲ್ಲಿ ಹೆಚ್ಚಳ
- ಮನುಷ್ಯರ ಕೆಲಸದ ಹೊರೆಯಲ್ಲಿ ಕಡಿತ
- ಉಡುಪುಗಳಲ್ಲಿ ವೈವಿಧ್ಯ
- ಗುಣಮಟ್ಟದ ಬಟ್ಟೆಗಳು
- ಬಟ್ಟೆಗಳ ವ್ಯಾಪಿಸುವಿಕೆ
-
-



ಯಂತ್ರಗಳ ಬಳಕೆಯಿಂದ ಬಟ್ಟೆ ತಯಾರಿಯಲ್ಲಿ ಉಂಟಾದ ಬದಲಾವಣೆಗಳ ಕುರಿತು ಚರ್ಚಿಸಿರಿ.

ಬಟ್ಟೆಗಳನ್ನು ತಯಾರಿಸಲು ನೈಸರ್ಗಿಕ ನಾರುಗಳು ಹಾಗೂ ಕೃತಕ ನಾರುಗಳನ್ನು ಬಳಸಲಾಗುತ್ತದೆ. ನೈಸರ್ಗಿಕ ನಾರುಗಳನ್ನು ಪ್ರಾಣಿಗಳು ಮತ್ತು ಸಸ್ಯಗಳಿಂದ ಉತ್ಪಾದಿಸಲಾಗುತ್ತದೆ. ಕೃತಕ ನಾರುಗಳ ಆವಿಷ್ಕಾರವು ವಿಭಿನ್ನ ವಿನ್ಯಾಸ ಮತ್ತು ಗುಣಮಟ್ಟದ ಬಟ್ಟೆಗಳ ಉತ್ಪಾದನೆಗೆ ಕಾರಣವಾಯಿತು. ಪಾಲಿಸ್ಟರ್, ನೈಲಾನ್ ನಂತಹ ಕೃತಕ ನಾರುಗಳ ಬಳಕೆಯು ದೀರ್ಘ ಬಾಳಿಕೆ ಹಾಗೂ ಕಡಿಮೆ ವೆಚ್ಚದ ಬಟ್ಟೆಗಳ ತಯಾರಿಗೆ ಸಹಾಯ ಮಾಡಿತು.

**ಬಟ್ಟೆ ತಯಾರಿಗೆ ಬಳಸುವ ನಾರುಗಳು**

**ನೈಸರ್ಗಿಕ ನಾರುಗಳು**

ಜೀವಿಗಳಿಂದ

ಕುರಿಗಳಿಂದ ಉಣ್ಣೆಯ ನೂಲು, ರೇಷ್ಮೆ ಹುಳುಗಳಿಂದ ರೇಷ್ಮೆ ನಾರು ಉತ್ಪತ್ತಿಯಾಗುತ್ತದೆ.

ಸಸ್ಯಗಳಿಂದ

ಹತ್ತಿ ಮತ್ತು ಸೆಣಬಿನ ನಾರುಗಳನ್ನು ಕ್ರಮವಾಗಿ ಹತ್ತಿ ಮತ್ತು ಸೆಣಬಿನ ಸಸ್ಯಗಳಿಂದ ಉತ್ಪಾದಿಸಲಾಗುತ್ತದೆ.

**ಕೃತಕ ನಾರುಗಳು**

ಪೆಟ್ರೋಲಿಯಂನಂತಹ ರಾಸಾಯನಿಕಗಳಿಂದ ಕೃತಕ ನಾರುಗಳನ್ನು ಉತ್ಪಾದಿಸಲಾಗುತ್ತದೆ. ನೈಸರ್ಗಿಕ ನಾರುಗಳಿಗಿಂತ ಕೃತಕ ನಾರುಗಳನ್ನು ಉಪಯೋಗಿಸಿ ಬಟ್ಟೆಗಳನ್ನು ತಯಾರಿಸುವುದಕ್ಕೆ ವೆಚ್ಚ ಕಡಿಮೆಯಾಗುತ್ತದೆ. ಬೇಗನೆ ಸುಕ್ಕುಗಟ್ಟುವುದಿಲ್ಲ ಎಂಬ ಹಿರಿಮೆ ಕೂಡಾ ಇದಕ್ಕಿದೆ.

ಉದಾಹರಣೆ

ಪಾಲಿಸ್ಟರ್, ನೈಲಾನ್, ರೇಯಾನ್, ಇತ್ಯಾದಿ



ಯಾವ ಯಾವ ಜೀವಿಗಳು ಮತ್ತು ಸಸ್ಯಗಳಿಂದ ನೈಸರ್ಗಿಕ ನಾರುಗಳನ್ನು ಉತ್ಪಾದಿಸಲಾಗುತ್ತದೆ ಎಂಬುದನ್ನು ಕಂಡುಹಿಡಿದು, ಪಟ್ಟಿ ಪೂರ್ತಿಗೊಳಿಸಿರಿ.

| | |
|---|---|
| ಉಣ್ಣೆ | .................................... |
| ರೇಷ್ಮೆ | ರೇಷ್ಮೆ ಹುಳು |
| ಹತ್ತಿ | ಹತ್ತಿ ಗಿಡ |
| ಸೆಣಬು | .................................... |



ನಿಮ್ಮ ಊರಿನ ಹೊಲಿಗೆ ಅಂಗಡಿಗೆ ಭೇಟಿ ನೀಡಿ ನಿರುಪಯೋಗಿ ಬಟ್ಟೆ ತುಂಡುಗಳನ್ನು ಸಂಗ್ರಹಿಸಿ. ನೈಸರ್ಗಿಕ ನಾರುಗಳು ಮತ್ತು ಕೃತಕ ನಾರುಗಳಿಂದ ತಯಾರಿಸಿದ ಬಟ್ಟೆಗಳನ್ನು ಪ್ರತ್ಯೇಕಿಸಿ ಚಾರ್ಟಿನಲ್ಲಿ ಅಂಟಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ಉಡುಪುಗಳಲ್ಲಿ ವೈವಿಧ್ಯ


ವಿವಿಧ ಹವಾಗುಣಕ್ಕೆ ಹೊಂದುವ ಬಟ್ಟೆಗಳನ್ನಲ್ಲವೇ ನಾವು ಧರಿಸುವುದು? ಹವಾಗುಣದ ಬದಲಾವಣೆಗೆ ತಕ್ಕಂತೆ ನಮ್ಮ ವಸ್ತ್ರಧಾರಣೆಯಲ್ಲಿ ವ್ಯತ್ಯಾಸಗಳು ಉಂಟಾಗುವುದೇ?



ಕೊಟ್ಟಿರುವ ಚಿತ್ರಗಳನ್ನು ನೋಡಿ ಮತ್ತು ಅವುಗಳಲ್ಲಿ ಪ್ರತಿಯೊಂದು ಬಟ್ಟೆಯನ್ನು ಯಾವ ಸನ್ನಿವೇಶದಲ್ಲಿ ಬಳಸಲಾಗುತ್ತದೆ ಎಂಬುದನ್ನು ಕಂಡುಹಿಡಿದು ಪಟ್ಟಿಯಲ್ಲಿ ಚಿತ್ರದ ಸಂಖ್ಯೆಯನ್ನು ಬರೆಯಿರಿ.


1


2


3


4


5


6


| ಹವಾಗುಣ | ರೋಗನಿರೋಧಕ | ಅಧಿಕಾರ /ಪದವಿ | ಉದ್ಯೋಗ |
|---|---|---|---|
| 1 | | | |

ವಿವಿಧ ಸಂದರ್ಭಗಳಲ್ಲಿನ ವಸ್ತ್ರಧಾರಣೆಯನ್ನು ಸೂಚಿಸುವ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

ಹವಾಗುಣ, ಸಂಪ್ರದಾಯಗಳು, ಅಧಿಕಾರದ ಸ್ಥಾನಗಳು, ಉದ್ಯೋಗ ಮತ್ತು ಪ್ರಾದೇಶಿಕ ವ್ಯತ್ಯಾಸಗಳು ಉಡುಪಿನ ಮೇಲೆ ಪ್ರಭಾವ ಬೀರುತ್ತದೆ. ಈ ವೈವಿಧ್ಯವನ್ನು ಕೇವಲ ಬಟ್ಟೆಗಳಲ್ಲಿ ಮಾತ್ರವಲ್ಲದೆ ಬಟ್ಟೆಯೊಂದಿಗೆ ಧರಿಸುವ ಆಭರಣಗಳು, ಟೋಪಿಗಳು ಮತ್ತು ಪಾದರಕ್ಷೆಗಳಲ್ಲಿಯೂ ಕಾಣಬಹುದು.

ಇಂದು ನಾವು ಬಟ್ಟೆ ಮತ್ತು ಬಟ್ಟೆ ಧರಿಸುವ ರೀತಿಯಲ್ಲಿ ಸಾಕಷ್ಟು ವೈವಿಧ್ಯ ಮತ್ತು ಹೋಲಿಕೆಗಳನ್ನು ಕಾಣುತ್ತೇವೆ. ನಮ್ಮಲ್ಲಿ ಹೆಚ್ಚಿನವರು ಹವಾಗುಣ, ಪ್ರಯಾಣದ ಸೌಕರ್ಯದ ಆಧಾರದ ಮೇಲೆ ಸೂಕ್ತ ಬಟ್ಟೆಗಳನ್ನು ಆಯ್ಕೆ ಮಾಡುತ್ತಾರೆ.

ಬಟ್ಟೆಗಳಲ್ಲಿನ ವೈವಿಧ್ಯವನ್ನು ನೋಡಬಹುದಾದ ಮತ್ತೊಂದು ಕ್ಷೇತ್ರವೆಂದರೆ ಕಲೆ. ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿದ ಕಲಾ ರೂಪಗಳನ್ನು ನೋಡುವುದೆಂದರೆ ನಮಗೆ ಬಹಳ ಇಷ್ಟವಲ್ಲವೇ?




ವಿವಿಧ ಕಲಾ ಪ್ರಕಾರಗಳು

ಕೊಟ್ಟಿರುವ ಚಿತ್ರದಲ್ಲಿರುವ ವೇಷಭೂಷಣಗಳನ್ನು ಗಮನಿಸಿರಿ. ಅವು ಯಾವ ಕಲಾ ಪ್ರಕಾರಕ್ಕೆ ಸೇರಿವೆ ಎಂಬುದನ್ನು ಪಟ್ಟಿ ಮಾಡಿರಿ.

- 
- 
- 
- 
- 
- 

ವಿವಿಧ ಕಲಾ ಪ್ರಕಾರಗಳಲ್ಲಿ ಕಂಡುಬರುವ ವಸ್ತ್ರಗಳ ಬಗ್ಗೆ ಚರ್ಚಿಸಿರಿ.

## ವಸ್ತ್ರಧಾರಣೆಯಲ್ಲಿನ ತಾರತಮ್ಯ



ശ്രീഉത്രംതിരുനാൾ മഹാരാജാവു തിരുമനസ്സുകൊണ്ടു.

നമ്പർ-17൮. M. E. 1034. A. D. 1859.

ശ്രീപത്മനാഭദാസ വഞ്ചിബാല മാർത്താണ്ഡ
വർമ്മ കുലശെഖരകിരീടപതി മന്നെ
സുൽത്താൻ മഹാരാജരാജെ ഭാഗ്യോ
ദയ രാമരാജാബഹാദർ ഷംഷെർ
ജംഗ മഹാരാജാ അവർകൾ
സകലമാനപെർക്കും പ്രസിദ്ധ
പ്പെടുത്തുന്ന വിളംബരം.

ചാന്നാട്ടികളിടെ മെലിൽശീല സംഗതിയെക്കുറിച്ച ൧൦൦൪-മാണ്ടു മകരമാസം ൨൧-നു ചെയ്തിട്ടുള്ള വിളംബരത്തിലെ നിബന്ധനകളെക്കൊണ്ടു സങ്കടം ഉള്ളതായി നാം അറിവാൻ ഇടവന്നിരിക്കകൊണ്ടും എല്ലാ ആളുകൾക്കും സങ്കടംകൂടാതെ ആകുന്നെടത്തൊളവും നടത്തിക്കണമെന്നു നമുക്കു വളരെ മനസായിരിക്കകൊണ്ടും ഇതിനാൽ പ്രസിദ്ധപ്പെടുത്തുന്നത എന്തെന്നാൽ —

ക്രിസ്തുമതത്തിൽ ചെർന്നിരിക്കുന്ന ചാന്നാട്ടികളെപൊലെ ശെഷം ചാന്നാട്ടികളും കുപ്പായം ഇട്ടുകൊള്ളുകയൊ മുക്കുവത്തികളെപൊലെ എല്ലാ മതത്തിൽ ഉള്ള ചാന്നാട്ടികളും കട്ടിശ്ശീലകൊണ്ടു ഉടുത്തുകെട്ടിക്കൊള്ളുകയൊ മെൽജാതിയിൽ ഉള്ള സ്ത്രീകളെപൊലെ അല്ലാതെ മറ്റു എതുവിധത്തിൽ എങ്കിലും മാറു മറച്ചുകൊള്ളുകയൊ ചെയ്യുന്നതിനു വിരൊധം ഇല്ലായ്ക കൊണ്ടു ഈ വിവരം സകലമാനപെരും അറിഞ്ഞു നടന്നു കൊള്ളുകയും വെണം.

൧൦൩൪-മാണ്ടു കർക്കടകമാസം ൧൨-നു.

ಇದು 1859ರಲ್ಲಿ ತಿರುವಿದಾಂಕೂರಿನ ಅಂದಿನ ರಾಜ ಉತ್ರಂ ತಿರುನಾಳ್ ಮಾರ್ತಾಂಡವರ್ಮ ಅವರು ದಕ್ಷಿಣ ಕೇರಳದಲ್ಲಿ ಕೆಳಜಾತಿಗಳೆಂದು ಕರೆಯಲ್ಪಡುವ ಜಾತಿಯ ಮಹಿಳೆಯರಿಗೆ ಮೇಲುಡುಪು (ಕುಪ್ಪಸ) ಧರಿಸುವ ಹಕ್ಕನ್ನು ನೀಡಲು ಹೊರಡಿಸಿದ ಘೋಷಣೆಯಾಗಿದೆ.

ಈ ಪ್ರಕಟಣೆಯಿಂದ ನೀವು ಏನು ಅರ್ಥ ಮಾಡಿಕೊಂಡಿದ್ದೀರಿ?

ಆ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ವ್ಯವಸ್ಥೆಯು ಕೆಲವು ವರ್ಗದ ಜನರು ತಾವು ಇಷ್ಟಪಡುವ ಬಟ್ಟೆಯನ್ನು ಧರಿಸುವುದನ್ನು ನಿಷೇಧಿಸಿತ್ತು ಎಂಬುದನ್ನು ಈ ಪ್ರಕಟಣೆ ನಮಗೆ ತಿಳಿಸುತ್ತದೆ.

**ತಿರುವಾಂಕೂರು**

ತಿರುವಿದಾಂಕೂರು ಒಂದು ರಾಜಪ್ರಭುತ್ವ ಆಡಳಿತವಿದ್ದ ದೇಶೀಯ ರಾಜ್ಯವಾಗಿದ್ದು, ಇದು ದಕ್ಷಿಣ ಕೇರಳದ ಬಹುಪಾಲು ಮತ್ತು ಮಧ್ಯ ಕೇರಳದ ಒಂದು ಸಣ್ಣ ಭಾಗ ಮತ್ತು ತಮಿಳುನಾಡಿನ ಭಾಗವಾದ ಕನ್ಯಾಕುಮಾರಿ ಜಿಲ್ಲೆಯನ್ನು ಒಳಗೊಂಡಿತ್ತು. 18ನೇ ಶತಮಾನದ ಮಧ್ಯದಲ್ಲಿ ಅನಿಳಂ ತಿರುನಾಳ್ ಮಾರ್ತಾಂಡವರ್ಮನ ಆಳ್ವಿಕೆಯಲ್ಲಿ ತಿರುವಿದಾಂಕೂರು ಸಂಸ್ಥಾನವು ವಿಸ್ತಾರಗೊಂಡಿತು. 1956 ರಲ್ಲಿ ಕೇರಳ ರಾಜ್ಯ ರಚನೆಯೊಂದಿಗೆ ಈ ರಾಜಪ್ರಭುತ್ವದ ಈ ದೇಶಿಯ ರಾಜ್ಯವು ಕೇರಳ ರಾಜ್ಯದ ಭಾಗವಾಯಿತು.

**ಮೇಲುಡುಪು ಹೋರಾಟ**

ಮೇಲುಡುಪು ಹೋರಾಟವು 19ನೇ ಶತಮಾನದ ಆರಂಭದಲ್ಲಿ ದಕ್ಷಿಣ ತಿರುವಿದಾಂಕೂರಿನಲ್ಲಿ ಮಹಿಳೆಯರು ಮೇಲುಡುಪು ಧರಿಸುವುದಕ್ಕಾಗಿ ನಡೆಸಿದ ಹೋರಾಟವಾಗಿತ್ತು. ಆ ಕಾಲದಲ್ಲಿ ಮೇಲ್ವರ್ಗದವರೆಂದು ಹೇಳಲಾದ ಮಹಿಳೆಯರಿಗೆ ಮಾತ್ರ ಮೇಲ್ವಸ್ತ್ರವನ್ನು ಧರಿಸಲು ಅವಕಾಶವಿತ್ತು. ಕೆಳವರ್ಗದ ಮಹಿಳೆಯರಿಗೆ ಮೇಲ್ವರ್ಗದವರ ಮುಂದೆ ಎದೆಯನ್ನು ಮುಚ್ಚಿಕೊಳ್ಳುವ ಹಕ್ಕು ಇರಲಿಲ್ಲ . ಇದಕ್ಕೆ ಎದುರಾಗಿ 19ನೇ ಶತಮಾನದ ಆರಂಭದಲ್ಲಿ ಮೇಲ್ವಸ್ತ್ರ ಧರಿಸುವುದಕ್ಕೆ ನಡೆಸಿದ ಹೋರಾಟವೇ ಮೇಲುಡುಪು ಹೋರಾಟ.

ಮೇಲುಡುಪು ಧರಿಸುವುದನ್ನು ನಿಷೇಧಿಸಿದುದರ ಬಗ್ಗೆ ತರಗತಿಯಲ್ಲಿ ಚರ್ಚಿಸಿ, ಟಿಪ್ಪಣಿ ತಯಾರಿಸಿರಿ.

## ಹೋರಾಟದ ಆಯುಧವಾದ ಬಟ್ಟೆ

ಹಿಂದಿನಿಂದಲೂ ವಿವಿಧ ರೀತಿಯ ಶೋಷಣೆಗಳ ವಿರುದ್ಧ ಹೋರಾಟದ ಅಸ್ತ್ರವಾಗಿ ಬಟ್ಟೆಯನ್ನು ಬಳಸಲಾಗಿದೆ. ಅದರಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದ ಭಾರತದ ಸ್ವಾತಂತ್ರ್ಯ ಸಂಗ್ರಾಮ ಅತ್ಯಂತ ಪ್ರಮುಖವಾದುದಾಗಿದೆ. ಖಾದಿ ಬಟ್ಟೆ, ಚರಕ, ನೂಲುವುದು ಮತ್ತು ವಿದೇಶಿ ವಸ್ತ್ರಗಳ ಬಹಿಷ್ಕಾರವನ್ನು ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಭಾಗವಾಗಿಸಿದರು. ಗಾಂಧೀಜಿ ಚರಕದಲ್ಲಿ ನೂಲುವ ಖಾದಿ ಬಟ್ಟೆಗಳನ್ನು ಪ್ರೋತ್ಸಾಹಿಸಿದರು. ಅವರು ಖಾದಿ ಬಟ್ಟೆಗಳನ್ನು ಧರಿಸುವಂತೆ ಜನರಿಗೆ ಕರೆ ನೀಡಿದರು. ಸ್ವದೇಶಿ ಬಟ್ಟೆಗಳನ್ನು ತಯಾರಿಸಿ ಬಳಸುವ ಮೂಲಕ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಲು ಗಾಂಧೀಜಿ ಒತ್ತಾಯಿಸಿದರು.



ಭಾರತೀಯರು ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ನಾಶಪಡಿಸುತ್ತಿರುವುದು.



ಚರಕದಲ್ಲಿ ನೂಲು ಸುತ್ತುತ್ತಿರುವ ಗಾಂಧೀಜಿ

ಅವರು ವಸ್ತ್ರವನ್ನು ಹೋರಾಟದ ಅಸ್ತ್ರವನ್ನಾಗಿಸಿಕೊಂಡು ಸ್ವಾತಂತ್ರ್ಯ ಹೋರಾಟವನ್ನು ಜನಪರ ಆಂದೋಲನವನ್ನಾಗಿ ಪರಿವರ್ತಿಸಿದರು. ಚರಕವು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವದೇಶಿ ಚಳುವಳಿಯ ಸಂಕೇತವಾಯಿತು. ಖಾದಿ ಬಟ್ಟೆಗಳನ್ನು ಧರಿಸುವುದು ಮತ್ತು ಖಾದಿ ಟೋಪಿ ಧರಿಸುವುದು ರಾಷ್ಟ್ರಾಭಿಮಾನದ ಸಂಕೇತವಾಯಿತು.

### ಸ್ವದೇಶಿ ಚಳುವಳಿ

1905 ಆಗಸ್ಟ್ 7ರಂದು ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಸ್ವದೇಶಿ ಚಳುವಳಿ ಆರಂಭವಾಯಿತು. ಬ್ರಿಟೀಷರು ತಯಾರಿಸಿದ ವಸ್ತುಗಳನ್ನು ತಿರಸ್ಕರಿಸುವುದು, ಭಾರತದಲ್ಲಿ ತಯಾರಿಸಿದ ವಸ್ತುಗಳ ಉತ್ಪಾದನೆ ಮತ್ತು ಉಪಯೋಗಕ್ಕೆ ಪ್ರೋತ್ಸಾಹ ನೀಡುವುದು ಇದರ ಉದ್ದೇಶವಾಗಿದೆ. ಆಗಸ್ಟ್ 7ರಂದು ಆರಂಭಿಸಿದ 'ಸ್ವದೇಶಿ ಚಳುವಳಿ'ಯ ದಿನವನ್ನು 2015 ರಿಂದ 'ಕೈಮಗ್ಗ ದಿನ'ವನ್ನಾಗಿ ಆಚರಿಸಲಾಗುತ್ತಿದೆ.

### ಖಾದಿ ಚಳುವಳಿ

ಖಾದಿ ಚಳುವಳಿಯು 1918ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಭಾರತದಲ್ಲಿ ಪ್ರಾರಂಭವಾದ ಚಳುವಳಿಯಾಗಿದೆ.ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಖಾದಿ ಬಟ್ಟೆಗೆ ವಿಶಿಷ್ಟ ಸ್ಥಾನವಿದೆ. ಖಾದಿ ಆಂದೋಲನವು ಬಲಗೊಳ್ಳುತ್ತಿದ್ದಂತೆ ಭಾರತದ ಹಳ್ಳಿಗಳಲ್ಲಿ ಚರಕದ ಸದ್ದು ಮೊಳಗಿತು. ಖಾದಿ ಉಡುಪಿನ ಪ್ರಚಾರ ಭಾರತದಾದ್ಯಂತ ವ್ಯಾಪಿಸಿತು.

ಚರಕ ಮತ್ತು ಖಾದಿ ವಸ್ತ್ರಗಳು ಬ್ರಿಟೀಷರ ವಿರುದ್ಧ ಹೋರಾಟದ ಅಸ್ತ್ರವಾಗಿ ಬದಲಾದುದು ಹೇಗೆ? ಪೋಸ್ಟರ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ವಸ್ತ್ರಧಾರಣೆಯಲ್ಲಿನ ನೂತನ ಶೈಲಿಗಳು

ಯಾವಾಗಲೂ ಒಂದೇ ರೀತಿಯ ಬಟ್ಟೆಗಳನ್ನು ಧರಿಸಲು ನೀವು ಇಷ್ಟಪಡುತ್ತೀರಾ? ಯಾವ ರೀತಿಯ ಬಟ್ಟೆಗಳನ್ನು ಧರಿಸಲು ನೀವು ಇಷ್ಟಪಡುತ್ತೀರಿ?

ಚಿತ್ರವನ್ನು ನಿರೀಕ್ಷಿಸಿರಿ.



ಬಟ್ಟೆಗಳನ್ನು ತಯಾರಿಸುವ ವಿಧಾನ ಮಾತ್ರವಲ್ಲ, ವಿನ್ಯಾಸ, ಶೈಲಿ ಮತ್ತು ಬಳಕೆ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ವೈಯಕ್ತಿಕ ಆದ್ಯತೆಗಳು, ಆಸಕ್ತಿಗಳು ಮತ್ತು ಅನುಕೂಲಗಳು ಇಂದಿನ ವಸ್ತ್ರಧಾರಣೆಯ ಮೇಲೆ ಪ್ರಭಾವ ಬೀರುತ್ತವೆ.

ಸೌಂದರ್ಯದ ಪರಿಕಲ್ಪನೆಯ ಬದಲಾವಣೆಯೊಂದಿಗೆ ಹೊಸ ವೇಷಭೂಷಣಗಳಲ್ಲಿಯೂ ಆಸಕ್ತಿದಾಯಕ ಬೆಳವಣಿಗೆ ಕಂಡುಬಂದಿದೆ. ಜಾಹೀರಾತುಗಳು, ಚಲನಚಿತ್ರಗಳು ಸಮೂಹ ಮಾಧ್ಯಮ ಇತ್ಯಾದಿಗಳು ಉಡುಪುಗಳ ಆಯ್ಕೆಯ ಮೇಲೆ ಗಮನಾರ್ಹ ಪ್ರಭಾವ ಬೀರುತ್ತವೆ.

ಜಾಹೀರಾತುಗಳು, ಚಲನಚಿತ್ರಗಳು, ಸಮೂಹ ಮಾಧ್ಯಮಗಳು ಇತ್ಯಾದಿಗಳು ಉಡುಪುಗಳ ಆಯ್ಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದರ ಕುರಿತು ಚರ್ಚೆಯನ್ನು ಆಯೋಜಿಸಿರಿ.

ಇಂದು ಫ್ಯಾಶನ್ ಡಿಸೈನಿಂಗ್, ಎಂಬ್ರಾಯ್ಡರಿ ಮುಂತಾದ ಕ್ಷೇತ್ರಗಳು ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುತ್ತವೆ. ಇಂದು ಫ್ಯಾಶನ್ ಡಿಸೈನಿಂಗ್ ಬೃಹತ್ ಉದ್ಯೋಗ ಸಾಧ್ಯತೆಯನ್ನು ಹೊಂದಿರುವ ಅಧ್ಯಯನ ಕ್ಷೇತ್ರವಾಗಿ ಬೆಳೆದಿದೆ.




ಎಂಬ್ರಾಯ್ಡರಿ ಮಾಡಿದ ಬಟ್ಟೆ



ಫ್ಯಾಶನ್ ಡಿಸೈನಿಂಗ್

ಬಟ್ಟೆ ತಯಾರಿಕೆಯ ಕೆಲಸದ ವಿವಿಧ ವಲಯಗಳು ಯಾವುವು? ಎಂದು ನೋಡೋಣ.




ಉಪಯೋಗಿಸಿದ ಮತ್ತು ನಿರುಪಯೋಗಿ ಬಟ್ಟೆಗಳನ್ನು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವುದು ಹೇಗೆ?




ನೀಡಿರುವ ಶೀರ್ಷಿಕೆಗಳನ್ನು ಗಮನಿಸಿರಿ.

ನೀವು ಖರೀದಿಸಿದ ಎಲ್ಲಾ ಬಟ್ಟೆಗಳನ್ನು ಬಳಸುತ್ತೀರಾ?

ಬಳಸಿದ ಬಟ್ಟೆಯಿಂದ ಕರಕುಶಲ ವಸ್ತುಗಳನ್ನು ತಯಾರಿಸಲು ನೀವು ಪ್ರಯತ್ನಿಸಿದ್ದೀರಾ?

ಪ್ರಪಂಚದಾದ್ಯಂತ ಟನ್ ಗಟ್ಟಲೆ ಬಟ್ಟೆಗಳನ್ನು ಎಸೆಯಲಾಗುತ್ತದೆ. ಇದು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ನಮ್ಮ ದೇಶದಲ್ಲಿ ಬಳಕೆಯಾಗದ ಮತ್ತು ನಿರುಪಯೋಗಿ ಬಟ್ಟೆಗಳು ಹೆಚ್ಚಾಗುತ್ತಿವೆ. ಅಂತಹ ಬಟ್ಟೆಗಳನ್ನು ಹೇಗೆ ಮರುಬಳಕೆ ಮಾಡಬಹುದು?

ಚಿತ್ರಗಳನ್ನು ಗಮನಿಸಿರಿ.



ಇಂತಹ ಕರಕುಶಲ ಉತ್ಪನ್ನಗಳನ್ನು ನಮಗೆ ತಯಾರಿಸಬಹುದೇ? ವಿವಿಧ ಕಾಲಘಟ್ಟದ ವಸ್ತ್ರಗಳನ್ನು ಗಮನಿಸಿದರೆ ಹಿಂದಿನ ಕಾಲದಲ್ಲಿ ದೇಹದ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಿರುವುದನ್ನು ಕಾಣಬಹುದು. ನಂತರ ಭೂ ಪ್ರಕೃತಿ ಮತ್ತು ಹವಾಗುಣ ಎಂಬಿವುಗಳು ವಸ್ತ್ರ ನಿರ್ಮಾಣ ಮತ್ತು ವಸ್ತ್ರ ಧಾರಣಾಶೈಲಿಯ ಮೇಲೆ ಪ್ರಭಾವ ಬೀರಿದುವು. ಬದಲಾಗುತ್ತಿರುವ ಸೌಂದರ್ಯ ಪರಿಕಲ್ಪನೆಗಳು ಮತ್ತು ಸಾಂಸ್ಕೃತಿಕ ವೈವಿಧ್ಯಗಳು ಇಂದು ನಮ್ಮ ವಸ್ತ್ರಧಾರಣಾ ರೀತಿಯ ಮೇಲೆ ಪ್ರಭಾವ ಬೀರುತ್ತವೆ.

ಇಷ್ಟವಾದ ಬಟ್ಟೆಗಳನ್ನು ಧರಿಸಿದಾಗ ನಮಗೆ ಸಂತೋಷ ಮತ್ತು ಅಭಿಮಾನವಾಗುವುದಿಲ್ಲವೇ? ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದಾಗಿರುವ ವಸ್ತ್ರ ಸಮಾಜದ ಎಲ್ಲಾ ಜನವಿಭಾಗಗಳಿಗೂ ದೊರೆಯಬೇಕು. ಅದಕ್ಕೆ ಬೇಕಾದ ಚಟುವಟಿಕೆಗಳಲ್ಲಿ ನಾವು ಭಾಗವಹಿಸಬೇಕು.

## ಮುಂದುವರಿದ ಚಟುವಟಿಕೆಗಳು


1. ನಿಮ್ಮ ಪ್ರದೇಶದಲ್ಲಿ ಯಾವುದಾದರೂ ಕೈಮಗ್ಗ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ವಸ್ತ್ರ ತಯಾರಿಕೆಯ ವಿಧಾನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ.
2. ಭಾರತದ ವಿವಿಧ ರಾಜ್ಯಗಳಲ್ಲಿನ ವಸ್ತ್ರವೈವಿಧ್ಯದ ಚಿತ್ರಗಳನ್ನು ಸಂಗ್ರಹಿಸಿ, 'ಭಾರತದ ರಾಜ್ಯಗಳ ವಸ್ತ್ರ ವೈವಿಧ್ಯ' ಎಂಬ ಶೀರ್ಷಿಕೆಯಲ್ಲಿ ಒಂದು ಆಲ್ಬಂ ತಯಾರಿಸಿರಿ.
3. ನಾವು ವಿವಿಧ ರೀತಿಯ ಉಡುಪುಗಳು ಸುಲಭವಾಗಿ ಲಭ್ಯವಿರುವ ಯುಗದಲ್ಲಿ ವಾಸಿಸುತ್ತಿದ್ದೇವೆ ಆದರೆ ಹಿಂದಿನ ತಲೆಮಾರಿನವರಿಗೆ ಬಟ್ಟೆಗಳ ಲಭ್ಯತೆ ಸೀಮಿತವಾಗಿತ್ತು. ವಸ್ತ್ರ ಹಾಗೂ ವಸ್ತ್ರಧಾರಣೆಯಲ್ಲಿ ಆದ ಬದಲಾವಣೆಗಳ ಕುರಿತು ಮನೆಯ ಹಿರಿಯರನ್ನು ಕೇಳಿ ಟಿಪ್ಪಣಿ ತಯಾರಿಸಿರಿ.
4. ವಿವಿಧ ಕಲೆಗಳ ಚಿತ್ರಗಳನ್ನು ಸಂಗ್ರಹಿಸಿ 'ವಿವಿಧ ಕಲೆಗಳ ವಸ್ತ್ರ ವೈವಿಧ್ಯ' ಎಂಬ ಆಲ್ಬಂ ತಯಾರಿಸಿರಿ.
5. ನಿಮ್ಮ ಮನೆಯಿಂದ ಹಳೆಯ ಬಟ್ಟೆಗಳನ್ನು ಸಂಗ್ರಹಿಸಿ ಅವುಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸಿ ಸಮಾಜ ವಿಜ್ಞಾನ ಕ್ಲಬ್ ನಲ್ಲಿ ಪ್ರದರ್ಶಿಸಿರಿ.
6. ಶಾಲೆಯಲ್ಲಿ ಬಟ್ಟೆ ಸಂಗ್ರಹ ಕೇಂದ್ರವನ್ನು ಸ್ಥಾಪಿಸಿ ಹಳೆಯ ಮತ್ತು ಶುಭ್ರ ಬಟ್ಟೆಗಳನ್ನು ಸಂಗ್ರಹಿಸಿ, ಟೀಚರ ಸಹಾಯದಿಂದ ನಿಮ್ಮ ಶಾಲೆಯ ಸಮೀಪದಲ್ಲಿರುವ ವೃದ್ಧಾಶ್ರಮ, ಅನಾಥಾಶ್ರಮ ಮತ್ತು ನಿರಾಶ್ರಿತರ ಶಿಬಿರಗಳಿಗೆ ತಲುಪಿಸುವಿರಲ್ಲವೇ?

ST-537-9-SOC. SCI. (K)-5-VOL-1

# 5

# ರಚಿಸುವ ಓದುವ

ತ್ರಿಶೂರ್ ಜಿಲ್ಲೆಯಲ್ಲಿ ನಡೆಯುವ ಕೇರಳ ಶಾಲಾ ಕಲೋತ್ಸವದಲ್ಲಿ ಭಾಗವಹಿಸುವುದಕ್ಕಾಗಿ ಅಜಿ ಬಂದಿದ್ದನು. ಜೊತೆಯಲ್ಲಿ ಅವನ ಕುಟುಂಬವೂ ಬಂದಿತ್ತು. ಅವರಲ್ಲಿದ್ದ ಲೇಔಟನ್ನು ಕೆಳಗೆ ನೀಡಲಾಗಿದೆ.



ರೈಲ್ವೆ ನಿಲ್ದಾಣದಿಂದ ನಡೆದು ಅಜಿ ಮತ್ತು ಅವನ ಕುಟುಂಬದವರು ಸ್ವರಾಜ್ ಗ್ರೌಂಡಿನ ಸಮೀಪವಿರುವ ಪ್ರೋಗ್ರಾಮ್ ಕಮಿಟಿ ಆಫೀಸಿನ ಬಳಿ ತಲುಪಿದರು. ಅಜಿ ಭಾಗವಹಿಸಬೇಕಾದ ಕಾರ್ಯಕ್ರಮವು ಜಿ.ಎಚ್.ಎಸ್.ಎಸ್ ತ್ರಿಶೂರ್‌ನಲ್ಲಿ ನಡೆಯುತ್ತಿದೆ.

- ಪ್ರೋಗ್ರಾಮ್ ಕಮಿಟಿ ಆಫೀಸ್‌ನಿಂದ ಯಾವ ದಿಕ್ಕಿಗೆ ಸಂಚರಿಸಿದರೆ ಅಜಿಗೆ ಕಾರ್ಯಕ್ರಮದ ವೇದಿಕೆಯನ್ನು ಸುಲಭವಾಗಿ ತಲುಪಬಹುದು?
- ಭೋಜನ ಶಾಲೆ ಎಲ್ಲಿದೆಯೆಂದು ಲೇಔಟ್‌ನ ಆಧಾರದಲ್ಲಿ ನಿಮಗೆ ಕಂಡುಹಿಡಿಯಲು ಸಾಧ್ಯವೇ?
- ಜಿ.ಎಚ್.ಎಸ್.ಎಸ್ ತ್ರಿಶೂರಿನಿಂದ ಯಾವ ದಿಕ್ಕಿಗೆ ಸಂಚರಿಸಿದರೆ ಭೋಜನ ಶಾಲೆಯನ್ನು ತಲುಪಬಹುದು?

ನಾವೀಗ ಕಲೋತ್ಸವದ ವೇದಿಕೆಗಳ ಲೇಔಟ್‌ನ್ನು ತಿಳಿದೆವು.

ಕೆಲವೊಂದು ಸಂಸ್ಥೆಗಳ ಮುಂದೆ ಕಟ್ಟಡಗಳ ಸ್ಥಾನವನ್ನು ಸೂಚಿಸುವ ಲೇಔಟ್‌ನ್ನು ಪ್ರದರ್ಶಿಸಿರುವುದನ್ನು ನೋಡಿರುವಿರಲ್ಲವೇ? ಈ ರೀತಿಯ ಲೇಔಟ್‌ನ್ನು ದಿಕ್ಕುಗಳನ್ನು ತಿಳಿಯಲು ಮಾತ್ರವೇ ತಯಾರಿಸುತ್ತಾರೆಯೇ?

ಹೊಸ ಮನೆ ಅಥವಾ ಕಟ್ಟಡವನ್ನು ನಿರ್ಮಿಸುವಾಗ ಸ್ಕೆಚ್ ಮತ್ತು ಪ್ಲಾನ್ ತಯಾರಿಸುವ ಬಗ್ಗೆ ನೀವು ತಿಳಿದಿರುವಿರಾ? ಕಟ್ಟಡಗಳ ಪ್ಲಾನ್ ತಯಾರಿಸುವಾಗ ಅದರಲ್ಲಿ ನಿಖರವಾದ ಅಳತೆಗಳನ್ನು ಸೂಚಿಸುವುದಿದೆ. ಆದರೆ ಸ್ಕೆಚ್‌ಗಳನ್ನು ತಯಾರಿಸುವಾಗ ಅಳತೆಗಳು ನಿಖರವಾಗಿರಬೇಕೆಂದಿಲ್ಲ.

ನಿಮ್ಮ ತರಗತಿ ಕೋಣೆಯ ಸ್ಕೆಚ್‌ನ್ನು ತಯಾರಿಸಿರಿ


ತರಗತಿ ಕೋಣೆಯ ಬಾಗಿಲು ಯಾವ ದಿಕ್ಕಿನಲ್ಲಿದೆ?
ಯಾವೆಲ್ಲ ಭಾಗಗಳಲ್ಲಿ ಕಿಟಕಿಗಳಿವೆ?
ಬ್ಲ್ಯಾಕ್ / ವೈಟ್ ಬೋರ್ಡ್ ಗಳನ್ನು ಯಾವ ದಿಕ್ಕುಗಳಲ್ಲಿ ಸ್ಥಾಪಿಸಲಾಗಿದೆ?

ನೀವು ತಯಾರಿಸಿದ ಸ್ಕೆಚ್‌ಗಳನ್ನು ಪರಿಶೀಲಿಸಿರಿ. ಪ್ರತಿಯೊಂದೂ ಒಂದೇ ರೀತಿಯದ್ದೋ?

ದಿಕ್ಕುಗಳನ್ನು ಗುರುತಿಸಲು ತೊಂದರೆಯಾಯಿತೇ?

ಒಂದು ಪ್ರದೇಶದ ದಿಕ್ಕನ್ನು ಹೇಗೆ ಕಂಡುಹಿಡಿಯಬಹುದು?

ನಾವು ಸೂರ್ಯ ಉದಯಿಸುವ ದಿಕ್ಕನ್ನು ಪೂರ್ವ ಎಂದು ಪರಿಗಣಿಸುತ್ತೇವೆ.



ಚಿತ್ರ A

ಅಜಿ ತನ್ನ ಮನೆಯ ಸಮೀಪ ಉದಯಿಸುವ ಸೂರ್ಯನಿಗೆ ಅಭಿಮುಖವಾಗಿ ನಿಂತುಕೊಂಡಿರುವನು.

- ಅಜಿ ಯಾವ ದಿಕ್ಕಿಗೆ ಅಭಿಮುಖವಾಗಿ ನಿಂತಿರುವನು?

  ..........................................................

- ಅಜಿಯ ಬಲದ ಕೈ ಯಾವ ದಿಕ್ಕಿನ ಕಡೆಗೆ ಚಾಚಿಕೊಂಡಿದೆ? ಎಡದ ಕೈಯೋ?

  ..........................................................

  ..........................................................

- ಅಜಿಯ ನೆರಳು ಯಾವ ದಿಕ್ಕನ್ನು ಸೂಚಿಸುವುದು?

  ..........................................................



ಚಿತ್ರ B

- ಚಿತ್ರ B ಯಲ್ಲಿ ಅಜಿ ಯಾವ ದಿಕ್ಕಿಗೆ ಮುಖಮಾಡಿ ನಿಂತಿರುವನು?

  ............................................

- ಅಜಿಯ ಬಲದ ಕೈಯಾವ ದಿಕ್ಕಿನ ಕಡೆಗೆ ಚಾಚಿಕೊಂಡಿದೆ? ಎಡದ ಕೈಯೋ?

  ............................................

  ............................................

- ಅಜಿಯ ನೆರಳು ಯಾವ ದಿಕ್ಕನ್ನು ಸೂಚಿಸುವುದು?

  ............................................

- ಅಜಿಯ ಹಿಂಭಾಗದಲ್ಲಿ ಯಾವ ದಿಕ್ಕು ಇದೆ?

  ............................................

ಸೂರ್ಯನನ್ನು ಆಧಾರವಾಗಿರಿಸಿ ದಿಕ್ಕನ್ನು ಗುರುತಿಸುವುದು ಹೇಗೆ ಎಂದು ತಿಳಿಯಿತಲ್ಲವೇ? ದಿಕ್ಸೂಚಿ ನಾವು ಸಾಮಾನ್ಯವಾಗಿ ದಿಕ್ಕುಗಳನ್ನು ಗುರುತಿಸುವುದಕ್ಕಾಗಿ ಉಪಯೋಗಿಸುವ ಉಪಕರಣವಾಗಿದೆ. ಇತ್ತೀಚಿನ ದಿನಗಳಲ್ಲಿ ದಿಕ್ಕುಗಳನ್ನು ತಿಳಿಯಲು ಮೊಬೈಲ್ ಆ್ಯಪ್‌ಗಳನ್ನೂ ಉಪಯೋಗಿಸುವುದುಂಟು.

### ದಿಕ್ಸೂಚಿ


ದಿಕ್ಕುಗಳನ್ನು ತಿಳಿದುಕೊಳ್ಳುವುದಕ್ಕಾಗಿ ಉಪಯೋಗಿಸುವ ಉಪಕರಣವು ದಿಕ್ಸೂಚಿಯಾಗಿದೆ. ಸ್ವತಂತ್ರವಾಗಿ ಚಲಿಸುವ ಕಾಂತೀಯ ಸೂಜಿಯು ದಕ್ಷಿಣೋತ್ತರ ದಿಕ್ಕಿಗೆ ಮುಖ ಮಾಡಿ ನಿಲ್ಲುವ ನಿಯಮದ ಆಧಾರದಲ್ಲಿ ದಿಕ್ಸೂಚಿಯು ಕಾರ್ಯವೆಸಗುವುದು. ಸೂಜಿ (ಮುಳ್ಳು) ಯಲ್ಲಿ ವಿಶೇಷವಾಗಿ ಗುರುತಿಸಿರುವ ತುದಿಯು ಉತ್ತರ ಭಾಗವನ್ನು ಪ್ರತಿನಿಧಿಸುತ್ತದೆ. ನಾವಿಕರು ಸಮುದ್ರಯಾನದಲ್ಲಿ ದಿಕ್ಕುಗಳನ್ನು ತಿಳಿಯಲು ದಿಕ್ಸೂಚಿಯನ್ನು ಅನಾದಿಕಾಲದಿಂದಲೇ ಉಪಯೋಗಿಸುತ್ತಿದ್ದರು.



ನಾವು ದಿಕ್ಕುಗಳ ಆಧಾರದಲ್ಲಿ ತರಗತಿ ಕೋಣೆಯ ಸ್ಕೆಚ್ ತಯಾರಿಸೋಣವೇ.

ದಿಕ್ಕುಗಳನ್ನು ಆಧಾರವಾಗಿರಿಸಿ ಸ್ಕೆಚ್‌ನ್ನು ಪೇಪರ್ ಅಥವಾ ಪುಸ್ತಕದಲ್ಲಿ ಬಿಡಿಸುವಾಗ ಗಮನಿಸಬೇಕಾದ ಅಂಶಗಳೇನು?

ಗೋಡೆಯಲ್ಲಿ ತೂಗು ಹಾಕಿದ ಈ ಭೂಪಟದಲ್ಲಿ ದಿಕ್ಕನ್ನು ಹೇಗೆ ಕಂಡುಕೊಳ್ಳಬಹುದು?





### ಭೂಪಟದಲ್ಲಿ ದಿಕ್ಕುಗಳು

ಸಾಮಾನ್ಯವಾಗಿ ಭೂಪಟದಲ್ಲಿ ದಿಕ್ಕನ್ನು ಸೂಚಿಸುವ ಚಿಹ್ನೆಯನ್ನು ನೀಡಿರುತ್ತಾರೆ. ಭಿತ್ತಿ ಭೂಪಟದ ಮೇಲ್ಭಾಗದಲ್ಲಿ ಉತ್ತರ ಭಾಗವನ್ನು ಸೂಚಿಸುವ ಚಿಹ್ನೆಯನ್ನು ಕಾಣಬಹುದು. ಭೂಪಟದ ಕೆಳಭಾಗವು ದಕ್ಷಿಣವನ್ನೂ ಬಲದ ಭಾಗ ಪಶ್ಚಿಮವನ್ನೂ ಎಡದ ಭಾಗ ಪೂರ್ವ ದಿಕ್ಕನ್ನೂ ಸೂಚಿಸುವುದು.

ನಿಮ್ಮ ತರಗತಿಕೋಣೆಯ ಉತ್ತರ ದಿಕ್ಕು ಯಾವ ಕಡೆಗೆ ಎಂದು ಕಂಡುಹಿಡಿಯಿರಿ. ನಂತರ ಸ್ಕೆಚ್ ರಚಿಸುವ ಕಾಗದದ ಬಲದ ಭಾಗದಲ್ಲಿ ದಿಕ್ಕನ್ನು ಸೂಚಿಸುವ ಚಿಹ್ನೆಯನ್ನು ರಚಿಸಿರಿ. (ನೀಡಿರುವ ಚಿಹ್ನೆಗಳಲ್ಲಿ ಯಾವುದಾದರೂ ಒಂದು)

**ಸಾಮಾನ್ಯವಾಗಿ ಭೂಪಟಗಳಲ್ಲಿ ದಿಕ್ಕನ್ನು ಸೂಚಿಸಲು ಉಪಯೋಗಿಸುವ ಚಿಹ್ನೆಗಳು**





ನಿಮ್ಮ ತರಗತಿ ಕೋಣೆಯ ಬಾಗಿಲುಗಳು ಯಾವ ದಿಕ್ಕಿನಲ್ಲಿವೆ ಎಂದು ತಿಳಿದುಕೊಂಡಿರಲ್ಲವೇ? ಕಿಟಕಿಗಳು ಯಾವೆಲ್ಲಾ ದಿಕ್ಕಿನಲ್ಲಿವೆ? ಮೇಜು ಯಾವ ದಿಕ್ಕಿನಲ್ಲಿದೆ ಎಂದು ನೋಡಿರಿ. ಇನ್ನು ನಾವು ತರಗತಿ ಕೋಣೆಯ ಸ್ಕೆಚ್ ರಚಿಸುವ.

ಸ್ಕೆಚ್ ಪೂರ್ತಿಗೊಳಿಸಿದಿರಲ್ಲವೇ ಬಾಗಿಲು, ಮೇಜು, ಕಿಟಕಿ ಇತ್ಯಾದಿಗಳಿಗೆ ಕೆಳಗೆ ನೀಡಿದಂತೆ ಸೂಚಕ ಪಟ್ಟಿಯನ್ನು (index table) ನೀಡಿರಿ.

| | |
|---|---|
| D. | ಬಾಗಿಲು |
| T. | ಮೇಜು |
| W. | ಕಿಟಕಿ |
| B.B | ಕರಿಹಲಗೆ |
| WB | ವೈಟ್ ಬೋರ್ಡ್ |
| B. | ಬೆಂಚು |

ಅಜಿ ತಯಾರಿಸಿದ ತರಗತಿ ಕೋಣೆಯ ಸ್ಕೆಚ್‌ನ್ನು ಇಲ್ಲಿ ನೀಡಲಾಗಿದೆ. ಇದನ್ನು ನಿರೀಕ್ಷಣೆ ಮಾಡಿರಿ .


ಇನ್ನು ತರಗತಿಯಲ್ಲಿರುವ ಇತರ ಮಕ್ಕಳು ರಚಿಸಿದ ಸ್ಕೆಚ್‌ಗಳನ್ನು ಪರಿಶೀಲಿಸಿರಿ. ಎಲ್ಲವೂ ಒಂದೇ ರೀತಿಯಾಗಿದೆಯೇ?




ಅಜಿಯ ತರಗತಿ ಕೋಣೆಯ ಸ್ಕೆಚ್

ಅಜಿಯ ಶಾಲೆಯ ಸ್ಕೆಚ್‌ನ್ನು ಕೆಳಗೆ ನೀಡಲಾಗಿದೆ. ಸ್ಕೆಚ್ ನಿರೀಕ್ಷಣೆ ಮಾಡಿ ಕೆಳಗೆ ನೀಡಿರುವ ಪಟ್ಟಿಯನ್ನು ಭರ್ತಿ ಮಾಡಿರಿ.






| | |
|---|---|
| ಬಾಸ್ಕೆಟ್ ಬಾಲ್ ಕೋರ್ಟಿನ ಯಾವ ದಿಕ್ಕಿಗೆ ಆಫೀಸ್ ರೂಂ ಇರುವ ಕಟ್ಟಡವಿದೆ? | • |
| ಬಾಸ್ಕೆಟ್ ಬಾಲ್ ಕೋರ್ಟಿನ ಯಾವ ದಿಕ್ಕಿಗೆ ಶಾಲೆಯ ಪ್ರವೇಶ ದ್ವಾರವಿದೆ? | • |
| ಶೌಚಾಲಯದ ಯಾವ ದಿಕ್ಕಿಗೆ ಗ್ರಂಥಾಲಯ ಮತ್ತು ಓದುವ ಕೊಠಡಿಗಳು ಇವೆ? | • |
| ಸ್ಟೋರ್ ರೂಂ ಇರುವ ಕಟ್ಟಡದ ಯಾವ ದಿಕ್ಕಿನಲ್ಲಿ ಅಡುಗೆ ಮನೆಯಿದೆ? | • |
| ಸಭಾಂಗಣದಿಂದ ಯಾವ ದಿಕ್ಕಿಗೆ ಸಂಚರಿಸಿದರೆ ಪ್ರವೇಶ ದ್ವಾರದ ಮೂಲಕ ಹೊರಗೆ ಹೋಗಬಹುದು? | • |

ನಿಮ್ಮ ತರಗತಿ ಕೋಣೆಯಲ್ಲಿರುವ ಬೆಂಚು, ಮೇಜು, ಕರಿಹಲಗೆ ಇತ್ಯಾದಿಗಳ ಸ್ಥಾನವನ್ನು ಸ್ಕೆಚ್‌ನಲ್ಲಿ ಸೇರಿಸಿರುವಿರಲ್ಲವೇ? ತರಗತಿಯಲ್ಲಿ ನೀವು ಕುಳಿತುಕೊಳ್ಳುವ ಜಾಗ ಎಲ್ಲಿ ಎಂದು ನಿಮಗೆ ಹೇಳಬಹುದಲ್ಲವೇ?

- ಒಂದನೆಯ ಬೆಂಚಿನಲ್ಲಿರುವ ಎರಡನೆಯವನು
- ಕೊನೆಯ ಬೆಂಚಿನಲ್ಲಿರುವ ಒಂದನೆಯವನು
- ..........................................................................
- ..........................................................................

ಹಾಗಾದರೆ ನಿಮಗೆ ಪ್ರತಿಯೊಬ್ಬರ ಸ್ಥಾನವನ್ನು ಹೇಳಬಹುದೇ? ಭೂಮಿಯಲ್ಲಿ ನಿಶ್ಚಿತ ಸ್ಥಳವೊಂದರ ಸ್ಥಾನವನ್ನು ಹೇಗೆ ಕಂಡುಹಿಡಿಯಬಹುದು?

ಕೆಳಗೆ ನೀಡಿರುವ ಚೆಂಡಿನ ಚಿತ್ರವನ್ನು ನಿರೀಕ್ಷಣೆ ಮಾಡಿರಿ.




ಚೆಂಡಿನ ಮೇಲೆ ಮನೆಯೊಂದರ ಚಿತ್ರವನ್ನು ಅಂಟಿಸಿರುವುದನ್ನು ಕಾಣುವಿರಲ್ಲವೇ? ಮನೆಯ ಸ್ಥಾನವು ಎಲ್ಲಿದೆ ಎಂದು ಕಂಡುಹಿಡಿಯುವುದು ಹೇಗೆ?


ಮೇಲೆ, ಕೆಳಗೆ, ಮಧ್ಯಭಾಗದಲ್ಲಿ ಅಥವಾ ಒಂದು ಬದಿಯಲ್ಲಿ ಇವುಗಳಲ್ಲಿ ಯಾವುದು ಸರಿ?

ಗೋಲಾಕೃತಿಯಲ್ಲಿರುವ ಮೇಲ್ಮೈಯಲ್ಲಿ ವಸ್ತುವೊಂದರ ಸ್ಥಾನವನ್ನು ನಿಖರವಾಗಿ ನಿರ್ಣಯಿಸುವುದು ಸುಲಭವಲ್ಲ. ಚೆಂಡಿನಲ್ಲಿ ಮನೆಯ ಚಿತ್ರವನ್ನು ಅಂಟಿಸಿರುವ ಸ್ಥಾನವನ್ನು ನಿಖರವಾಗಿ ಹೇಗೆ ತಿಳಿದುಕೊಳ್ಳಬಹುದು ?

ಚೆಂಡಿನ ಮೇಲೆ ಚಿತ್ರದಲ್ಲಿರುವಂತೆ ಉದ್ದಕ್ಕೂ ಅಡ್ಡಕ್ಕೂ ರೇಖೆಗಳನ್ನು ಹಾಕಿದರೋ?



ಅಡ್ಡಕ್ಕಿರುವ ರೇಖೆಗಳು ಉದ್ದಕ್ಕಿರುವ ರೇಖೆಗಳು





ಇನ್ನುಒಂದೊಂದುಗೆರೆಗೂಸಂಖ್ಯೆಮತ್ತುಅಕ್ಷರನೀಡಿದರೆ ಯಾವ ಕೋಣೆಗಳೆಡೆಯಲ್ಲಿ ಮನೆಯು ಬರುವುದು ಎಂದು ನಿಖರವಾಗಿ ತಿಳಿದುಕೊಳ್ಳಬಹುದಲ್ಲವೇ?

ಭೂಗೋಳವನ್ನು ನಿರೀಕ್ಷಣೆ ಮಾಡಿರಿ.



ಈಗ ಚೆಂಡಿನಲ್ಲಿ ಮನೆಯ ಸ್ಥಾನವು ಎಲ್ಲಿ ಬರುವುದೆಂದು ಬರೆಯಿರಿ.




ನೀಡಿರುವ ಗ್ಲೋಬಿನಲ್ಲಿ ಕೆಂಪು ಬಣ್ಣದಲ್ಲಿ ಎಳೆದ ರೇಖೆಗಳನ್ನುಗಮನಿಸಿರಿ. ಇದನ್ನು ಭೂಮಧ್ಯರೇಖೆ ಎಂದು




ಕರೆಯುವರು. ಈ ರೇಖೆಯು ಗ್ಲೋಬನ್ನು ಎರಡು ಅರ್ಧ ಗೋಲಗಳನ್ನಾಗಿ ವಿಭಜಿಸುವುದು. ನೀಡಿರುವ ಚಿತ್ರದಲ್ಲಿ A ಎಂದು ಗುರುತಿಸಿದ ಭಾಗವು ಉತ್ತರಾರ್ಧಗೋಲವಾಗಿದೆ. B ಎಂದು ಗುರುತಿಸಿದ ಭಾಗವು ದಕ್ಷಿಣಾರ್ಧಗೋಲವಾಗಿದೆ. ಭೂಮಧ್ಯ ರೇಖೆಗೆ ಮತ್ತು ಅದಕ್ಕೆ ಸಮಾಂತರವಾಗಿ ಉತ್ತರಾರ್ಧಗೋಲ ಮತ್ತು ದಕ್ಷಿಣಾರ್ಧಗೋಲದಲ್ಲಿ ವೃತ್ತಾಕಾರವಾಗಿ ಎಳೆದ ಇತರ ಅಡ್ಡ ರೇಖೆಗಳನ್ನು ಗಮನಿಸಿರಿ. ಇವುಗಳು ಅಕ್ಷಾಂಶ ರೇಖೆಗಳಾಗಿವೆ. ಅಕ್ಷಾಂಶ ರೇಖೆಗಳಿಗೆ ಲಂಬವಾಗಿ ಅರ್ಧ ವೃತ್ತಾಕೃತಿಯಲ್ಲಿರುವ ಗೆರೆಗಳನ್ನು ಗ್ಲೋಬಿನಲ್ಲಿ ಕಾಣುವಿರಲ್ಲವೇ? ಇವುಗಳು ರೇಖಾಂಶ ರೇಖೆಗಳಾಗಿವೆ. ಭೂಮಿಯ ಮೇಲಿನ ಸ್ಥಳ ನಿರ್ಣಯವೊಂದನ್ನು ಗ್ಲೋಬಿನಲ್ಲಿರುವ ಕಾಲ್ಪನಿಕವಾದ ಅಕ್ಷಾಂಶ ರೇಖಾಂಶ ರೇಖೆಗಳ ಆಧಾರದಲ್ಲಿ ನಡೆಸುವರು. ಗ್ಲೋಬನ್ನು ನಿರೀಕ್ಷಣೆ ಮಾಡಿ ಅಕ್ಷಾಂಶ ಮತ್ತು ರೇಖಾಂಶಗಳ ವಿಶೇಷತೆಗಳನ್ನು ತಿಳಿದುಕೊಳ್ಳಿರಿ.


**ಗ್ಲೋಬ್ ಮತ್ತು ಭೂಪಟ**

ಗ್ಲೋಬ್ ಎಂಬುದು ಗೋಲಾಕೃತಿಯಲ್ಲಿರುವ ಭೂಮಿಯ ಮಾದರಿಯಾಗಿದೆ. ಗೋಲಾಕೃತಿಯಲ್ಲಿರುವ ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ಸಮತಲ ಮೇಲ್ಮೈಗೆ ವರ್ಗಾಯಿಸಿದರೆ, ಅದು ಭೂಪಟವಾಗುವುದು.

ST-537-10-SOC. SCI. (K)-5-VOL-1




ಗ್ಲೋಬ್



ಜಾಗತಿಕ ಭೂಪಟ

ಕೇರಳದ ಭೂಪಟವನ್ನು ನಿರೀಕ್ಷಣೆ ಮಾಡಿರಿ.



ನೀಡಿರುವ ಭೂಪಟದಲ್ಲಿ A, B, C ಎಂದು ಸೂಚಿಸಿದ ಅಕ್ಷರಗಳನ್ನು ಗಮನಿಸಿರಿ. ಅವುಗಳು ಅನುಕ್ರಮವಾಗಿ ಭೂಪಟದ ಶೀರ್ಷಿಕೆ, ದಿಕ್ಕು ಮತ್ತು ಸೂಚಕ ಪಟ್ಟಿಯನ್ನು ತಿಳಿಸುವುದು. ಇವು ಪ್ರತಿಯೊಂದು ಭೂಪಟದಲ್ಲಿ ಇರಲೇಬೇಕಾದ ಘಟಕಗಳು ಇವುಗಳಾಗಿವೆ. ಇವುಗಳ ಸಹಾಯದಿಂದ ನಾವು ಭೂಪಟ ವಾಚನ ಮಾಡುತ್ತೇವೆ.

ಸಾಮಾನ್ಯವಾಗಿ ಭೂಪಟದ ಮೇಲ್ಭಾಗದಲ್ಲಿ ಶೀರ್ಷಿಕೆಯನ್ನು ನೀಡುತ್ತಾರೆ. ಶೀರ್ಷಿಕೆಯು ಭೂಪಟದಲ್ಲಿ ಅಡಕವಾಗಿರುವ ವಿಷಯವನ್ನು ತಿಳಿಸುತ್ತದೆ. ನೀಡಿರುವ ಭೂಪಟದ ಶೀರ್ಷಿಕೆಯನ್ನು ಓದಿ ಅದು ಯಾವ ವಿಷಯಕ್ಕೆ ಸಂಬಂಧಿಸಿದೆ ಎಂದು ಕಂಡುಹಿಡಿಯಿರಿ.

A

| ಶೀರ್ಷಿಕೆ | ಕೇರಳ - ರಾಜಕೀಯ ಭೂಪಟ |
|---|---|



ನಿಮ್ಮ ಶಾಲೆಯಲ್ಲಿರುವ ಸಮಾಜ ವಿಜ್ಞಾನ ಲ್ಯಾಬಿನಲ್ಲಿರುವ ಬೇರೆ ಬೇರೆ ಭೂಪಟಗಳಿಗೆ ನೀಡಿರುವ ಶೀರ್ಷಿಕೆಗಳನ್ನು ಗಮನಿಸಿರಿ.

ನಿಮ್ಮ ತರಗತಿ ಕೋಣೆ ಮತ್ತು ಶಾಲೆಯ ಬಾಹ್ಯ ರೇಖಾಚಿತ್ರವನ್ನು (ಸ್ಕೆಚ್) ತಯಾರಿಸಿದಾಗ ದಿಕ್ಕನ್ನು ಸೂಚಿಸುವ ಚಿಹ್ನೆಯನ್ನು ನೀಡಿದ್ದೀರಲ್ಲವೇ? ಕೊಟ್ಟಿರುವ ಭೂಪಟದಲ್ಲಿ ದಿಕ್ಕನ್ನು ತಿಳಿಯುವುದಕ್ಕಾಗಿ ನೀಡಿರುವ ಚಿಹ್ನೆಯನ್ನು ಕಂಡುಕೊಳ್ಳಿರಿ.

B

| ದಿಕ್ಕು |   |
|---|---|



ತ್ರಿಶೂರಿನ ಉತ್ತರ ಭಾಗದಲ್ಲಿ, ಸಮುದ್ರಕ್ಕೆ ತಾಗಿಕೊಂಡಿರುವ ಜಿಲ್ಲೆಗಳು ಮತ್ತು ತ್ರಿಶೂರಿನ ದಕ್ಷಿಣ ಭಾಗದಲ್ಲಿ ಸಮುದ್ರಕ್ಕೆ ತಾಗಿಕೊಂಡಿರುವ ಜಿಲ್ಲೆಗಳನ್ನು ಪಟ್ಟಿ ಮಾಡಿರಿ. ಕೇರಳದ ಪೂರ್ವ ದಿಕ್ಕಿನಲ್ಲಿ ಇರುವ ರಾಜ್ಯ ಯಾವುದು ?

ಭೂಮಿಯ ಮೇಲ್ಮೈಯ ವಿಶೇಷತೆಗಳನ್ನು ತಿಳಿದುಕೊಳ್ಳುವುದಕ್ಕಾಗಿ ಭೂಪಟದಲ್ಲಿ ಸೂಚಕ ಪಟ್ಟಿಯನ್ನು ನೀಡುವರು. ನೀಡಿರುವ ಭೂಪಟದಲ್ಲಿರುವ ಸೂಚಿಕೆಯನ್ನು ತಿಳಿದುಕೊಳ್ಳಿರಿ.

C

| ಸೂಚಿಕೆ | - - - - ರಾಜ್ಯ ಗಡಿರೇಖೆ<br>——— ಜಿಲ್ಲಾ ಗಡಿರೇಖೆ | ☆ ರಾಜಧಾನಿ<br>● ಜಿಲ್ಲಾ ಕೇಂದ್ರ |
|---|---|---|

ನಿಮ್ಮ ಶಾಲೆಯ ಸಮಾಜವಿಜ್ಞಾನ ಲ್ಯಾಬಿನಲ್ಲಿರುವ ಕೇರಳದ ಭೂಪಟದಲ್ಲಿ ನೀಡಿರುವ ಸೂಚಿಕೆಗಳನ್ನು ತಿಳಿದುಕೊಳ್ಳಿರಿ.

**ಸೂಚಿಕೆಗಳು**

| | |
|---|---|
| - - - - - - - ರಾಜ್ಯ ಗಡಿರೇಖೆ | ☆ ರಾಜಧಾನಿ |
| ——— ಜಿಲ್ಲಾ ಗಡಿರೇಖೆ | ● ಜಿಲ್ಲಾ ಕೇಂದ್ರ |
| ನದಿ | ಬಂದರು |
| ರಾಷ್ಟ್ರೀಯ ಹೆದ್ದಾರಿ | ವಿಮಾನ ನಿಲ್ದಾಣ |
| ರೈಲ್ವೆ ಮಾರ್ಗ | ರಾಜ್ಯ ಹೆದ್ದಾರಿಗಳು |

ನೀಡಿರುವ ಕೇರಳದ ಭೂಪಟದಲ್ಲಿ (ಪುಟ ಸಂಖ್ಯೆ 74) ಜಿಲ್ಲೆಗಳನ್ನು ಸುಲಭದಲ್ಲಿ ಗುರುತಿಸುವ ಸಲುವಾಗಿ ವಿಭಿನ್ನ ಬಣ್ಣಗಳನ್ನು ನೀಡಿರುವುದನ್ನು ಕಾಣಬಹುದು. ಇದೇ ರೀತಿಯಲ್ಲಿ ಭೂಪಟದಲ್ಲಿ ಭೂಮಿಯ ಮೇಲ್ಮೈ ವಿಶೇಷತೆಗಳನ್ನು ತಿಳಿಸುವುದಕ್ಕಾಗಿ ವಿವಿಧ ಬಣ್ಣಗಳನ್ನು ಉಪಯೋಗಿಸುವರು.

ಭೂಗೋಳದಲ್ಲಿ ಮತ್ತು ಭೂಪಟಗಳಲ್ಲಿ ಜಲಾಶಯಗಳನ್ನು ಸೂಚಿಸುವುದಕ್ಕೆ ಉಪಯೋಗಿಸುವ ಬಣ್ಣ ಯಾವುದು?

ಕೇರಳದ ಭೂಪಟವೊಂದನ್ನು ಪರಿಶೀಲಿಸಿ ನೀಡಿರುವ ಪಟ್ಟಿಯಲ್ಲಿ ಸೂಕ್ತವಾದ ಸೂಚಿಕೆಗಳಿರುವ ಚಿಹ್ನೆಗಳನ್ನು ಗುರುತಿಸಿರಿ.

| ಭೂಮಿಯ ಮೇಲ್ಮೈ ವಿಶೇಷತೆಗಳು | ಚಿಹ್ನೆಗಳು |
|---|---|
| ರಸ್ತೆ | |
| ರೈಲ್ವೆ ಮಾರ್ಗ | |
| ನದಿ | |
| ಬಂದರು | |

## ಕಾರ್ಟೋಗ್ರಫಿ (Cartography)

ಭೂಪಟಗಳನ್ನು ತಯಾರಿಸುವ ವಿಜ್ಞಾನ ಶಾಖೆಯು ಭೂಪಟಶಾಸ್ತ್ರ ಅಥವಾ ಕಾರ್ಟೋಗ್ರಫಿಯಾಗಿದೆ. ಭೂಪಟಗಳನ್ನು ತಯಾರಿಸುವವರನ್ನು ಕಾರ್ಟೋಗ್ರಾಫರ್ (Cartographer) ಎಂದು ಕರೆಯುತ್ತಾರೆ. ಭಾರತದಲ್ಲಿ ಭೂಪಟ ನಿರ್ಮಾಣ, ಪರಿಶೀಲನೆ ಮತ್ತು ಪ್ರಕಾಶನದ ಜವಾಬ್ದಾರಿಯನ್ನು ಹೊಂದಿರುವ ಕೇಂದ್ರ ಸರಕಾರದ ಏಜೆನ್ಸಿಯು ಸರ್ವೇ ಆಫ್ ಇಂಡಿಯಾ ಆಗಿದೆ. ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಇದರ ಕೇಂದ್ರವಿದೆ.

ನಿಮ್ಮ ವಿದ್ಯಾಲಯದ ಸಮಾಜ ವಿಜ್ಞಾನ ಲ್ಯಾಬ್ ನಲ್ಲಿರುವ ಕೇರಳದ ಭೂಪಟವನ್ನು ನಿರೀಕ್ಷಣೆ ಮಾಡಿ ವರ್ಕ್ ಶೀಟ್ ಭರ್ತಿ ಮಾಡಿರಿ.

| | |
|---|---|
| ಕೇರಳದ ದಕ್ಷಿಣ ತುದಿಯಲ್ಲಿರುವ ಜಿಲ್ಲೆ | |
| ಕೇರಳದ ಉತ್ತರ ತುದಿಯಲ್ಲಿರುವ ಜಿಲ್ಲೆ | |
| ಎರಡು ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಳ್ಳುವ ಜಿಲ್ಲೆ | |
| ಭಾರತ ಹೊಳೆ ಹರಿಯುವ ದಿಕ್ಕು | ಪೂರ್ವ ದಿಂದ ............ |
| ಕಾಸರಗೋಡಿನಿಂದ ತಿರುವನಂತಪುರದವರೆಗಿನ ರೈಲ್ವೆ ಮಾರ್ಗದ ದಿಕ್ಕು | ಉತ್ತರದಿಂದ ............ |
| ಕೇರಳದ ನೆರೆರಾಜ್ಯಗಳು | |

### ಜಿಲ್ಲೆಗಳನ್ನು ಕಂಡುಹಿಡಿಯುವ

ಟೀಚರ ಸಹಾಯದಿಂದ ಕೇರಳದ ರಾಜಕೀಯ ಭೂಪಟದ A3 ಗಾತ್ರದಲ್ಲಿ ಕಾರ್ಡ್ ಪ್ರಿಂಟ್ (ಕಲರ್) ತೆಗೆಯಿರಿ. ಅದರಲ್ಲಿ ಜಿಲ್ಲೆಗಳನ್ನು ಹೆಸರಿಸಬಾರದು. ಈ ಕಾರ್ಡಿನಿಂದ ಪ್ರತಿಯೊಂದು ಜಿಲ್ಲೆಯನ್ನು ಕತ್ತರಿಸಿ ತೆಗೆಯಿರಿ. ಕತ್ತರಿಸಿ ತೆಗೆದ ಜಿಲ್ಲೆಗಳನ್ನು ಪೆಟ್ಟಿಗೆಯೊಂದರಲ್ಲಿ ಹಾಕಿರಿ. ತರಗತಿಯ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿರಿ. ಗುಂಪಿನಿಂದ ಓರ್ವ ವಿದ್ಯಾರ್ಥಿ ಮುಂದೆ ಬಂದು ಪೆಟ್ಟಿಗೆಯಿಂದ ಒಂದು ಕಾಗದವನ್ನು ತೆಗೆಯಬೇಕು. ತಮಗೆ ಲಭಿಸಿದ ಕಾಗದ ಯಾವ ಜಿಲ್ಲೆ ಎಂದು ಕಂಡು ಕೊಂಡು ಗಟ್ಟಿಯಾಗಿ ಹೇಳಬೇಕು.



ಇನ್ನು ಪ್ರತಿಯೊಂದು ಗುಂಪು ತಮಗೆ ಸಿಕ್ಕಿದ ಜಿಲ್ಲೆಯ ಗುರುತಿನ ಚೀಟಿಯನ್ನು ತಯಾರಿಸಿದರೇನು? ಜಿಲ್ಲೆಯ ಗುರುತು ಚೀಟಿಯಲ್ಲಿ ಯಾವೆಲ್ಲಾ ವಿವರಗಳಿರಬೇಕು?

- ಜಿಲ್ಲೆಯ ಹೆಸರು
- ಸ್ಥಾನ
- ನೆರೆ ರಾಜ್ಯ / ಜಿಲ್ಲೆಗಳು
- ವಿಮಾನ ನಿಲ್ದಾಣ, ಬಂದರು, ರೈಲ್ವೆ ಮಾರ್ಗ , ಸಮುದ್ರ ತೀರ
- ಇತರ ವಿಶೇಷತೆಗಳು

ಜಿಲ್ಲೆಗಳ ಗುರುತಿನ ಕಾರ್ಡುಗಳನ್ನು ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸಿರಿ.

**ಜಿಲ್ಲೆಯ ಗುರುತಿನ ಕಾರ್ಡ್**

ಭೂಪಟ ವಾಚನದ ಮೂಲಭೂತ ಘಟಕಗಳನ್ನು ತಿಳಿದುಕೊಂಡಿರಲ್ಲವೇ? ಇನ್ನು ಭಾರತದ ಭೂಪಟವನ್ನು ಪರಿಶೋಧಿಸಿ ಮಾಹಿತಿಗಳನ್ನು ಕಂಡುಕೊಳ್ಳುವ.




ಕೇರಳವು ಭಾರತದ ಒಂದು ರಾಜ್ಯವಾಗಿದೆ. ಭಾರತದಲ್ಲಿ ಎಷ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿವೆ ಎಂದು ತಿಳಿದಿದೆಯೇ?

ಭಾರತದ ರಾಜ್ಯಗಳು, ಅವುಗಳ ರಾಜಧಾನಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯನ್ನು ತಯಾರಿಸಿರಿ.

ಭಾರತದ ಗಡಿರೇಖೆಗಳು, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ನೆರೆದೇಶಗಳು ಮುಂತಾದವುಗಳನ್ನು ಗುರುತಿಸಿದ ಭೂಪಟವನ್ನು ನಿರೀಕ್ಷಣೆ ಮಾಡಿ, ಕೆಳಗೆ ನೀಡಿದ ಪಟ್ಟಿಯನ್ನು ಭರ್ತಿ ಮಾಡಿರಿ.

| ಸೂಚನೆ | |
|---|---|
| ಭಾರತದ ಪೂರ್ವ ಭಾಗದಲ್ಲಿರುವ ಸಮುದ್ರ | ಬಂಗಾಳಕೊಲ್ಲಿ |
| ಭಾರತದ ಪಶ್ಚಿಮ ಭಾಗದಲ್ಲಿರುವ ಸಮುದ್ರ | ಅರಬೀ ಸಮುದ್ರ |
| ಭಾರತದ ರಾಜಧಾನಿ | ...................... |
| ಭಾರತದ ಉತ್ತರ ತುದಿಯಲ್ಲಿರುವ ಕೇಂದ್ರಾಡಳಿತ ಪ್ರದೇಶ | ...................... |
| ಅರುಣಾಚಲ ಪ್ರದೇಶ ಭಾರತದ ಯಾವ ದಿಕ್ಕಿನಲ್ಲಿದೆ? | ...................... |
| ಭಾರತದ ದಕ್ಷಿಣ ಭಾಗದಲ್ಲಿರುವ ನೆರೆದೇಶ | ...................... |
| ಭಾರತದ ದಕ್ಷಿಣ ತುದಿಯಲ್ಲಿರುವ ಕೇಂದ್ರಾಡಳಿತ ಪ್ರದೇಶ | ...................... |
| ಭಾರತದ ನೆರೆ ದೇಶಗಳು | ಪಾಕಿಸ್ತಾನ<br>......................<br>...................... |

ಭಾರತದ ರಾಜ್ಯಗಳ ಹೆಸರುಗಳಿರುವ ಕಾಗದ ತುಂಡು (ಸ್ಟ್ರಿಪ್) ಗಳನ್ನು ಪೆಟ್ಟಿಗೆ ಒಂದರಲ್ಲಿ ಹಾಕಬೇಕು. ತರಗತಿಯ ಮಕ್ಕಳನ್ನು ಮೂರು ಸದಸ್ಯರಿರುವ ಗುಂಪುಗಳನ್ನಾಗಿ ಮಾಡಬೇಕು. ಗುಂಪಿನ ಓರ್ವ ವಿದ್ಯಾರ್ಥಿ ಪೆಟ್ಟಿಗೆಯಿಂದ ಸ್ಟ್ರಿಪ್ ಒಂದನ್ನು ತೆಗೆದು ಅವರಿಗೆ ಸಿಕ್ಕಿದ ರಾಜ್ಯದ ಕುರಿತು ಅಟ್ಲಾಸ್, ಭೂಪಟದ ಸಹಾಯದಿಂದ ಟಿಪ್ಪಣಿ ತಯಾರಿಸಬೇಕು. ಟಿಪ್ಪಣಿಯಲ್ಲಿ ಯಾವೆಲ್ಲ ವಿಷಯಗಳನ್ನು ಸೇರಿಸಬೇಕು?

- ರಾಜ್ಯದ ಹೆಸರು
- ರಾಜಧಾನಿ
- ನೆರೆ ದೇಶಗಳು
- ನೆರೆ ರಾಜ್ಯಗಳು
- ಪ್ರಧಾನ ನಗರಗಳು
- 
- 
- 

ಅಜಿ ತಯಾರಿಸಿದ ಟಿಪ್ಪಣಿಯನ್ನು ನೋಡಿರಿ.

**ಉತ್ತರ ಪ್ರದೇಶ**


*ನನ್ನ ಸ್ಥಾನ ಭಾರತದ ಭೂಪಟದಲ್ಲಿ ಉತ್ತರ ಭಾಗದಲ್ಲಿದೆ. ನನ್ನ ಗಡಿ ಪ್ರದೇಶದಲ್ಲಿ ಒಂದು ದೇಶವಿದೆ. ಅದರ ಹೆಸರು ನೇಪಾಳ. ಅಲ್ಲದೆ ಭಾರತದ 8 ರಾಜ್ಯಗಳೊಂದಿಗೆ ನಾನು ಗಡಿಯನ್ನು ಹಂಚಿಕೊಂಡಿದ್ದೇನೆ. ನಾನು ಅತ್ಯಧಿಕ ಕಬ್ಬನ್ನು ಉತ್ಪಾದಿಸುವುದರಿಂದ ನನ್ನನ್ನು 'ಭಾರತದ ಸಕ್ಕರೆಯ ಬಟ್ಟಲು' ಎಂದು ಕರೆಯುತ್ತಾರೆ. ಕಥಕ್ ನನ್ನ ನಾಡಿನ ನೃತ್ಯ ಕಲೆಯಾಗಿದೆ. ನನ್ನ ಪ್ರಮುಖ ನಗರಗಳ ಹೆಸರುಗಳನ್ನೆಲ್ಲ ನೀವು ತಿಳಿದಿರಬಹುದು. ಕಾನ್ಪುರ, ಲಕ್ನೋ, ವಾರಣಾಸಿ, ಆಗ್ರಾ, ಅಲಹಾಬಾದ್ ಮುಂತಾದವುಗಳು ನನ್ನ ನಗರಗಳಾಗಿವೆ. ಅಶೋಕ ಸ್ತಂಭದ ಮೂಲಕ ಪ್ರಖ್ಯಾತವಾದ ಸಾರಾನಾಥ ಸ್ತೂಪವು ನನ್ನ ಹೆಸರನ್ನು ಜಾಗತಿಕವಾಗಿ ಪ್ರಸಿದ್ಧಗೊಳಿಸಿದೆ.*

ಪೋರ್ಚುಗೀಸ್ ನಾವಿಕನಾದ ವಾಸ್ಕೋಡ ಗಾಮನು ನಡೆಸಿದ ಸಾಗರ ಪರ್ಯಟನೆಯ ಕುರಿತಾದ ಟಿಪ್ಪಣಿಯನ್ನು ಕೆಳಗೆ ನೀಡಲಾಗಿದೆ.



ಪೋರ್ಚುಗಲ್‌ನ ಲಿಸ್ಬನ್ ಬಂದರಿನಿಂದ ನಾಲ್ಕು ಹಾಯಿ ಹಡಗುಗಳಲ್ಲಿ 170 ಮಂದಿಯ ನಾವಿಕ ತಂಡವನ್ನು ಮುನ್ನಡೆಸಿಕೊಂಡು ವಾಸ್ಕೋಡ ಗಾಮನು ಭಾರತವನ್ನು ಅರಸಿಕೊಂಡು ಯಾತ್ರೆಯನ್ನು ಆರಂಭಿಸಿದನು. ಗಾಳಿಯ ಸಹಾಯದಿಂದ ಆಗ್ನೇಯ ಮುಖವಾಗಿ ಯಾತ್ರೆಯನ್ನು ಆರಂಭಿಸಿ ಆಫ್ರಿಕಾದ ದಕ್ಷಿಣ ತುದಿಯನ್ನು ಅವರು ತಲುಪಿದರು. ನಂತರ ಆಫ್ರಿಕಾದ ಪೂರ್ವ ತೀರದ ಮೂಲಕ ಉತ್ತರದ ಕಡೆಗೆ ಸಂಚರಿಸಿ ಮಲಿಂದಿ ಬಂದರನ್ನು ತಲುಪಿದರು. ಅಲ್ಲಿನ ನಾವಿಕರ ಸಲಹೆಗಳನ್ನು ಸ್ವೀಕರಿಸಿದರು. ಮನ್ಸೂನ್ ಮಾರುತಗಳ ಸಹಾಯದಿಂದ 1498 ಮೇ 20 ರಂದು ಭಾರತದ ಪಶ್ಚಿಮ ತೀರದ ಕೋಝಿಕೋಡಿನ ಕಾಪ್ಪಾಡ್ ಬಂದರನ್ನು ತಲುಪಿದರು. ಯುರೋಪಿನಿಂದ ಸಾವಿರಾರು ಕಿಲೋಮೀಟರ್ ದಾಟಿ ವಾಸ್ಕೋಡ ಗಾಮ ಮತ್ತು ತಂಡವು ಅತ್ಯಂತ ಸಾಹಸಿಕವಾಗಿ ನಡೆಸಿದ ಈ ಪರ್ಯಟನೆಯು ಚರಿತ್ರೆಯಲ್ಲಿ ಇಂದಿಗೂ ಮೈಲಿಗಲ್ಲಾಗಿದೆ.

ವಾಸ್ಕೋ ಡ ಗಾಮನ ಸಾಗರ ಸಂಚಾರ ಪಥವನ್ನು ಕೆಳಗೆ ನೀಡಲಾಗಿದೆ.




ವಾಸ್ಕೋ ಡ ಗಾಮನು ಯುರೋಪಿನಿಂದ ಯಾವೆಲ್ಲ ಸಾಗರಗಳ ಮೂಲಕ ಸಂಚರಿಸಿ ಭಾರತವನ್ನು ತಲುಪಿದನು. ಜಾಗತಿಕ ಭೂಪಟವನ್ನು ನಿರೀಕ್ಷಣೆ ಮಾಡಿ ಈ ಸಾಗರಗಳನ್ನು ಕಂಡುಹಿಡಿಯಿರಿ.

- 
- 

ಇತರ ಸಾಗರಗಳು ಯಾವುವು?

- 
- 
- 

ಈ ಸಾಗರಗಳೆಲ್ಲಾ ಪರಸ್ಪರ ಸಂಪರ್ಕಿಸಿ ಇರುವುದೋ ?

ಗ್ಲೋಬಿನ ಸಹಾಯದಿಂದ ಅತಿ ದೊಡ್ಡ ಸಾಗರ ಯಾವುದೆಂದು ಕಂಡುಹಿಡಿಯಿರಿ.


ನೀವು ನಿರೀಕ್ಷಣೆ ಮಾಡಿದ ಜಾಗತಿಕ ಭೂಪಟದಲ್ಲಿ ಸಾಗರಗಳ ಜೊತೆಗೆ ವಿಶಾಲವಾದ ನೆಲಭಾಗವನ್ನು ನೋಡಿದಿರಲ್ಲವೇ? ಈ ರೀತಿಯ ವಿಶಾಲವಾದ ನೆಲಭಾಗಗಳನ್ನು ಭೂಖಂಡಗಳೆನ್ನುವರು.




ಭೂಪಟ ಮತ್ತು ಗ್ಲೋಬನ್ನು ನಿರೀಕ್ಷಣೆ ಮಾಡಿ ಭೂಖಂಡಗಳು ಯಾವುವೆಂದು ಕಂಡುಹಿಡಿಯಿರಿ.



- ಭಾರತವು ಯಾವ ಭೂಖಂಡದ ಭಾಗವಾಗಿದೆ?
- ಬಹುತೇಕ ಭೂಖಂಡಗಳು ಸಾಗರಗಳಿಂದ ಸುತ್ತುವರಿಯಲ್ಪಟ್ಟಿವೆ. ಸಾಗರಗಳಿಂದ ಸುತ್ತುವರಿಯಲ್ಪಟ್ಟ ಭೂಖಂಡಗಳು ಯಾವುವು?



ನೀಡಿರುವ ಚಿತ್ರವನ್ನು ನಿರೀಕ್ಷಣೆ ಮಾಡಿರಿ. ಭೂಖಂಡಗಳಿಗೆ ನೀಡಿರುವ ಬಣ್ಣವನ್ನು ಒಳಗಿನ ಬಾಹ್ಯರೇಖಾಚಿತ್ರದಲ್ಲಿರುವ ಭೂಖಂಡಗಳಿಗೆ ನೀಡಿರಿ. ಬಣ್ಣನೀಡಿದ ನಂತರ ಭೂಖಂಡಗಳನ್ನು ಹೆಸರಿಸಿರಿ.




ST-537-11-SOC. SCI. (K)-5-VOL-1

ಜಾಗತಿಕ ಭೂಪಟ, ಅಟ್ಲಾಸ್‌ನ ಸಹಾಯದಿಂದ ವರ್ಕ್‌ಶೀಟ್ ಭರ್ತಿ ಮಾಡಿರಿ.

| ವರ್ಕ್ ಶೀಟ್ | |
|---|---|
| ವಿಶೇಷತೆಗಳು | ಭೂಖಂಡ |
| ಅಟ್ಲಾಂಟಿಕ್ ಸಾಗರದ ಪಶ್ಚಿಮ ಭಾಗದಲ್ಲಿರುವ ಭೂಖಂಡಗಳು | ..................... , ..................... |
| ಹಿಂದೂ ಮಹಾಸಾಗರದ ಪೂರ್ವದಲ್ಲಿರುವ ಭೂಖಂಡ | ..................... |
| ವಿಸ್ತಾರದಲ್ಲಿ ಅತಿ ದೊಡ್ಡದಾದ ಭೂಖಂಡ | ..................... |
| ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರದ ನಡುವೆ ಇರುವ ಭೂಖಂಡ | ..................... |

ಭೂಖಂಡಗಳನ್ನು ಗುರುತಿಸಿ ಹೆಸರಿಸಿರಿ.









ಭೂಖಂಡಗಳ ಪರಿಚಯ ಮಾಡಿಕೊಂಡಿರಲ್ಲವೇ? ಇನ್ನು ನೀವು ಏಳು ಗುಂಪುಗಳಾಗಿರಿ. ಪ್ರತಿಯೊಂದು ಗುಂಪಿಗೂ ಒಂದೊಂದು ಭೂಖಂಡದ ಹೆಸರನ್ನು ನೀಡಿರಿ. ಅಟ್ಲಾಸ್, ಗ್ಲೋಬಿನ ಸಹಾಯದಿಂದ ಪ್ರತಿಯೊಂದು ಭೂಖಂಡದ ಗುರುತಿನ ಕಾರ್ಡನ್ನು ತಯಾರಿಸಲಿ.

ಭೂಪಟಗಳಿಗೆ ಜನ ಜೀವನದಲ್ಲಿ ಬಹುದೊಡ್ಡ ಮಹತ್ವವಿದೆ. ಭೂಗೋಳಶಾಸ್ತ್ರ ಅಧ್ಯಯನ, ರಕ್ಷಣೆ, ಪ್ರವಾಸ, ಆಡಳಿತ ನಿರ್ವಹಣೆ, ಸಾರಿಗೆ ಮುಂತಾದ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಭೂಪಟಗಳನ್ನು ಉಪಯೋಗಿಸುತ್ತೇವೆ. ನೆರೆ, ಭೂಕುಸಿತ ಮೊದಲಾದ ಪ್ರಾಕೃತಿಕ ದುರಂತಗಳು, ಇತರ ಅಪಾಯಕಾರಿ ಸನ್ನಿವೇಶಗಳು ಉಂಟಾಗುವಾಗ ದುರಂತ ಪ್ರದೇಶಗಳಿಗೆ ಶೀಘ್ರವಾಗಿ ತಲುಪಲು ದುರಂತ ನಿವಾರಣಾ ಚಟುವಟಿಕೆಗಳನ್ನು ನಡೆಸಲು ಭೂಪಟಗಳನ್ನೂ ಮ್ಯಾಪ್‌ಗಳನ್ನೂ ಹೆಚ್ಚಾಗಿ ಉಪಯೋಗಿಸುವರು. ನಿತ್ಯ ಜೀವನದಲ್ಲಿ ಭೂಪಟ ವಾಚನದ ಮೂಲಕ ಹಾದು ಹೋಗಬೇಕಾದ ಹಲವಾರು ಸನ್ನಿವೇಶಗಳು, ಸಂದರ್ಭಗಳು ಉಂಟಾಗುವುದಿದೆ. ಆಧುನಿಕ ಜಗತ್ತಿನಲ್ಲಿ ಜೀವನವನ್ನು ಮುನ್ನಡೆಸುವಲ್ಲಿ ಭೂಪಟ ವಾಚನವು ಅನಿವಾರ್ಯ ಘಟಕವಾಗಿ ಬದಲಾಗುತ್ತಿದೆ.

## ಮುಂದುವರಿದ ಚಟುವಟಿಕೆಗಳು

1. ಟೀಚರ ಸಹಾಯದಿಂದ ನಿಮ್ಮ ಶಾಲೆಯ ಸ್ಕೆಚ್ ಒಂದನ್ನು ತಯಾರಿಸಿರಿ. ತಯಾರಿಸಿದ ನಕ್ಷೆಯನ್ನು ಶಾಲೆಯಲ್ಲಿ ಪ್ರದರ್ಶಿಸುವಿರಲ್ಲವೇ?
2. ಕೇರಳದ ಭೂಪಟವನ್ನು ನಿರೀಕ್ಷಣೆ ಮಾಡಿ ಕೇರಳದ ಪ್ರಮುಖ ಪ್ರವಾಸಿತಾಣಗಳನ್ನು ಪಟ್ಟಿ ಮಾಡಿರಿ. ಇಂಟರ್ನೆಟ್ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ನೀವು ಇರುವ ಜಾಗದಿಂದ ನೀವು ಆಯ್ಕೆ ಮಾಡಿದ ಪ್ರವಾಸಿ ತಾಣಕ್ಕೆ ವೇಗದಲ್ಲಿ ತಲುಪಲು ಸಾಧ್ಯವಾಗುವ ರೂಟ್‌ಮ್ಯಾಪ್ ತಯಾರಿಸಿರಿ ಮತ್ತು ದೂರವನ್ನು ಕಂಡುಹಿಡಿಯಿರಿ.
3. ಭಾರತದ ಸ್ಕೆಚ್‌ನ್ನು ಚಾರ್ಟಿನಲ್ಲಿ ತಯಾರಿಸಿರಿ. ಪ್ರಾಂತ್ಯಗಳು, ರಾಜಧಾನಿಗಳು, ಕೇಂದ್ರಾಡಳಿತ ಪ್ರದೇಶಗಳು, ಇತ್ಯಾದಿಗಳನ್ನುಗುರುತಿಸಿರಿ. ಪ್ರಾಂತ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೂ ಬೇರೆ ಬೇರೆ ಬಣ್ಣಗಳನ್ನು ನೀಡಿರಿ. ತಯಾರಿಸಿದ ಚಾರ್ಟನ್ನು ತರಗತಿಯಲ್ಲಿ ಪ್ರದರ್ಶಿಸಿರಿ.
4. ನವೆಂಬರ್ 1 ಕೇರಳ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಡಿಜಿಟಲ್ ತಂತ್ರಜ್ಞಾನದ ಸಹಾಯದಿಂದ 'ಕೇರಳ - ಭೂಪಟ ವಾಚನ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿರಿ. ರಸಪ್ರಶ್ನೆದಲ್ಲಿ ಯಾವೆಲ್ಲ ವಿಷಯಗಳನ್ನು ಸೇರಿಸಬಹುದು?


### ಕೇರಳ - ಭೂಪಟವಾಚನ - ರಸಪ್ರಶ್ನೆ
### ವಿಷಯಗಳು

- ಪ್ರವಾಸಿತಾಣಗಳು
- ನದಿಗಳು
- ಬಂದರುಗಳು
- ಸರೋವರಗಳು
- ವಿಮಾನ ನಿಲ್ದಾಣಗಳು
- ಚಾರಿತ್ರಿಕ ಸ್ಥಳಗಳು
- ಆಚರಣೆಗಳು
- ..........................................

# 6

# ಜನರು ಜನರಿಂದ

**ಬಿಸಿಯೇರಿದ ಅಭಿವೃದ್ಧಿ ಚರ್ಚೆ: ಹೊಸ ಅನುಭವವನ್ನು ನೀಡಿದ ವಿದ್ಯಾರ್ಥಿ ಸೌಹಾರ್ದ ಪಾರ್ಲಿಮೆಂಟ್**



ಮಂಜಾಡಿಮಲೆ: ಪಂಚಾಯತಿನಿಂದ ಆಯ್ಕೆ ಮಾಡಿದ ವಿದ್ಯಾರ್ಥಿಗಳನ್ನು ಸದಸ್ಯರನ್ನಾಗಿ ಮಾಡಿ ಸಂಘಟಿಸಿದ ವಿದ್ಯಾರ್ಥಿ ಸೌಹಾರ್ದ ಪಾರ್ಲಿಮೆಂಟ್ ಎಲ್ಲರ ಗಮನ ಸೆಳೆಯಿತು. ಕಾಲುದಾರಿಗಳನ್ನು ನಿರ್ಮಿಸಬೇಕು, ತೆರೆದ ಚರಂಡಿಗಳನ್ನು ಮುಚ್ಚಬೇಕು, ಬೀದಿನಾಯಿ ಕಾಟವನ್ನು ನಿವಾರಿಸಬೇಕು, ಬೀದಿ ದೀಪಗಳನ್ನು ಅಳವಡಿಸಬೇಕು, ಮಾಲಿನ್ಯ ನಿರ್ಮೂಲನ ಯೋಜನೆಗಳನ್ನು ರೂಪಿಸಬೇಕು, ಪಾರ್ಕುಗಳನ್ನು ಸ್ಥಾಪಿಸಬೇಕು ಇತ್ಯಾದಿ ಬೇಡಿಕೆಗಳು ವಿದ್ಯಾರ್ಥಿ ಪಾರ್ಲಿಮೆಂಟಿನಲ್ಲಿ ಚರ್ಚೆಯಾದುವು. ಪಂಚಾಯತ್ ಅಧ್ಯಕ್ಷರು ಸಭೆಯನ್ನು ಉದ್ಘಾಟಿಸಿದರು. ಮಕ್ಕಳು ಮುಂದಿಟ್ಟ ಬೇಡಿಕೆಗಳನ್ನು ಮುಂದಿನ ಆಡಳಿತ ಸಮಿತಿ ಸಭೆಯಲ್ಲಿ ಚರ್ಚಿಸುವುದಾಗಿ ಅಧ್ಯಕ್ಷರು ಭರವಸೆಯನ್ನಿತ್ತರು.

ಮೇಲೆ ನೀಡಿರುವ ಪತ್ರಿಕಾ ವರದಿಯನ್ನು ಓದಿದಿರಲ್ಲವೇ?

ಊರಿನ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವೆಲ್ಲ ಬೇಡಿಕೆಗಳನ್ನು ಮಕ್ಕಳು ಸೌಹಾರ್ದ ಪಾರ್ಲಿಮೆಂಟಿನ ಮುಂದಿಟ್ಟರು?

- 
- 
- 



ನಿಮ್ಮ ವಿದ್ಯಾಲಯಕ್ಕೆ ಅಗತ್ಯವಾದ ಅಭಿವೃದ್ಧಿ ಚಟುವಟಿಕೆಗಳು ಯಾವುವು ಎಂದು ಚರ್ಚೆ ನಡೆಸಿರಿ.

ಈ ಅಗತ್ಯಗಳನ್ನು ಟೀಚರ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನಿಸುವಿರಲ್ಲವೇ

ನಿಮ್ಮ ಪ್ರದೇಶಗಳಲ್ಲಿ ಅನೇಕ ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿವೆಯಲ್ಲವೇ? ಹಾಗಾದರೆ ಈ ರೀತಿಯ ಅಭಿವೃದ್ಧಿ ಚಟುವಟಿಕೆಗಳ ಕುರಿತು ಚರ್ಚೆ ನಡೆಸುವುದು ಮತ್ತು ತೀರ್ಮಾನ ತೆಗೆದುಕೊಳ್ಳುವುದು ಯಾರು?

ಪಂಚಾಯತಿನ ಮಧ್ಯಪ್ರವೇಶ : ಕುಡಿಯುವ ನೀರಿನ ಕ್ಷಾಮವು ಪರಿಹಾರಗೊಂಡಿತು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಲ್ಲಾ ದಿನಗಳಲ್ಲಿಯೂ ಡಾಕ್ಟರ್‌ಗಳ ಸೇವೆಯನ್ನು ಖಾತರಿಪಡಿಸಲಾಗುವುದು; ಪಂಚಾಯತ್ ಅಧ್ಯಕ್ಷರು

ವಾರ್ಡು ಸಭೆಯಲ್ಲಿ ನೀಡಿದ ಸಲಹೆಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದೆಂದು ನಗರಸಭಾ ಸದಸ್ಯರು ಭರವಸೆಯನ್ನಿತ್ತರು.

ಸಂಪೂರ್ಣ ವಿದ್ಯುತೀಕರಣ; ಶೀಘ್ರದಲ್ಲೇ ಘೋಷಣೆ

ರಸ್ತೆ ಬದಿಯಲ್ಲಿ ಮಾಲಿನ್ಯ ಸಮಸ್ಯೆ : ಸಿಸಿಟಿವಿ ಕ್ಯಾಮರ ವ್ಯವಸ್ಥೆಯನ್ನು ಕೂಡಲೇ ಸ್ಥಾಪಿಸಬೇಕೆಂದು ಜನರು ಬೇಡಿಕೆಯನ್ನಿಟ್ಟರು.

ಗ್ರಾಮ ಸಭೆ / ವಾರ್ಡ್ ಸಭೆಯೊಂದರಲ್ಲಿ ನಡೆದ ಚರ್ಚೆ ಮತ್ತು ಪ್ರಮುಖ ತೀರ್ಮಾನಗಳನ್ನು ಮೇಲೆ ನೀಡಲಾಗಿದೆ. ಇಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ಮೂಲಕ ಜನರಿಗೆ ಆಡಳಿತ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುವಿಕೆ ಲಭಿಸುವುದು. ಈ ರೀತಿಯಲ್ಲಿ ಜನರು ನೇರವಾಗಿ ಅಥವಾ ತಾವು ಆಯ್ಕೆ ಮಾಡಿದ ಪ್ರತಿನಿಧಿಗಳ ಮೂಲಕ ಆಡಳಿತ ಸಂಬಂಧಿ ವಿಷಯಗಳಲ್ಲಿ ತೀರ್ಮಾನ ತೆಗೆಯುವ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತೇವೆ.

### ಸ್ಥಳೀಯಾಡಳಿತ ಸಂಸ್ಥೆಗಳು

ಗ್ರಾಮ ಪ್ರದೇಶಗಳಲ್ಲಿ ತ್ರಿಸ್ತರ ಪಂಚಾಯತ್ ವ್ಯವಸ್ಥೆಯಾದ ಗ್ರಾಮ ಪಂಚಾಯತ್, ಬ್ಲಾಕ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಲ್ಲದೆ ನಗರ ಪ್ರದೇಶಗಳಲ್ಲಿ ಆಡಳಿತ ಸಂಸ್ಥೆಗಳಾದ ಮುನ್ಸಿಪಾಲಿಟಿಗಳು ಕಾರ್ಪೋರೇಷನ್ ಗಳು ಸ್ಥಳೀಯ ಆಡಳಿತ ಸಂಸ್ಥೆಗಳಾಗಿ ಗುರುತಿಸಲ್ಪಡುತ್ತಿವೆ.

ನೀವಿರುವ ಸ್ಥಳೀಯಾಡಳಿತ ಸಂಸ್ಥೆಗಳ ಹೆಸರು ಸೇರಿಸಿ ಗುರುತಿನ ಕಾರ್ಡನ್ನು ತಯಾರಿಸಿರಿ.

(ಗ್ರಾಮ ಪಂಚಾಯತ್, ಬ್ಲಾಕ್ ಪಂಚಾಯತ್, ಜಿಲ್ಲಾ ಪಂಚಾಯತ್, ಮುನಿಸಿಪಾಲಿಟಿ, ಕಾರ್ಪೋರೇಷನ್)


"ಜನರಿಗಾಗಿ ಜನರಿಂದ ನಡೆಸಲ್ಪಡುವ ಜನರ ಆಡಳಿತವೇ ಪ್ರಜಾಪ್ರಭುತ್ವ."

ಅಬ್ರಹಾಂ ಲಿಂಕನ್




"ಪ್ರಜಾಪ್ರಭುತ್ವದ ಕುರಿತಾದ ನನ್ನ ಸಂಕಲ್ಪವೆಂದರೆ, ಆ ವ್ಯವಸ್ಥೆಯ ಕೆಳಗೆ ಅತ್ಯಂತ ದುರ್ಬಲನು ಮತ್ತು ಅತ್ಯಂತ ಶಕ್ತಿವಂತನು ಸಮಾನವಾದ ಅವಕಾಶವನ್ನು ಪಡೆಯಬೇಕು ಎಂಬುದಾಗಿದೆ".

ಮಹಾತ್ಮ ಗಾಂಧಿ



## ಪ್ರಜಾಪ್ರಭುತ್ವ : ಬೇರುಗಳನ್ನು ಹುಡುಕಿ




ಮೇಲೆ ನೀಡಿರುವ ಯುರೋಪಿನ ಭೂಪಟವನ್ನು ಗಮನಿಸಿದಿರಲ್ಲವೇ? ಯುರೋಪಿನ ಬಾಹ್ಯರೇಖಾ ಚಿತ್ರದಲ್ಲಿ A ಮತ್ತು B ಎಂದು ಗುರುತಿಸಿರುವ ಎರಡು ದೇಶಗಳು ಯಾವುವು ಎಂದು ಬರೆಯಿರಿ.

A ........................................

B ........................................

ಈ ಎರಡು ದೇಶಗಳಿಗೆ ಪ್ರಜಾಪ್ರಭುತ್ವದ ಆರಂಭಕ್ಕೆ ಸಂಬಂಧಿಸಿ ಕೆಲವೊಂದು ವಿಶೇಷತೆಗಳಿವೆ. ಅವು ಏನೆಂದು ಕಂಡುಕೊಳ್ಳುವ.

ಪುರಾತನ ಗ್ರೀಸಿನ ಅಥೆನ್ಸ್‌ನಲ್ಲಿ ಪ್ರಜಾಪ್ರಭುತ್ವದ ಮೂಲ ಆಶಯಗಳು ಉಗಮಗೊಂಡುವು. ಸಾರ್ವಜನಿಕವಾದ ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಎಲ್ಲಾ ವಿಭಾಗದ ಜನರು ಭಾಗವಹಿಸದಿದ್ದರೂ, ಪ್ರಜಾಪ್ರಭುತ್ವ ಎನ್ನುವ ಆಶಯವನ್ನು ಜಗತ್ತಿಗೆ ಪರಿಚಯಿಸುವಲ್ಲಿ ಅಥೆನ್ಸ್ ಪ್ರಮುಖ ಪಾತ್ರವಹಿಸಿತು.

ಇಂದು ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವದ ಆರಂಭ ಯುನೈಟೆಡ್ ಕಿಂಗ್‌ಡಂನ ಭಾಗವಾದ ಇಂಗ್ಲೇಂಡ್ ನಲ್ಲಿ ಆಗಿತ್ತು. ಚುನಾವಣೆ, ಜನಪ್ರತಿನಿಧಿಗಳ ಆಡಳಿತ ಮತ್ತು ಪಾರ್ಲಿಮೆಂಟ್ ಎಂಬೀ ವ್ಯವಸ್ಥೆ ಆರಂಭಗೊಂಡಿರುವುದು ಇಂಗ್ಲೇಂಡಿನಲ್ಲಾಗಿದೆ.

ಗ್ರೀಸ್, ಇಂಗ್ಲೇಂಡ್ ಎಂಬೀ ದೇಶಗಳ ಕುರಿತಾದ ಮತ್ತಷ್ಟು ಮಾಹಿತಿಗಳನ್ನು ಟೀಚರ ಸಹಾಯದಿಂದ ಕಂಡುಕೊಳ್ಳುವಿರಲ್ಲವೇ.



ಪುರಾತನ ಗ್ರೀಕ್ ಚರಿತ್ರೆಕಾರ ಹೆರೋಡೋಟಸ್ ಡೆಮಾಕ್ರಸಿ (ಪ್ರಜಾಪ್ರಭುತ್ವ) ಎಂಬ ಪದವನ್ನು ಮೊದಲ ಬಾರಿಗೆ ಉಪಯೋಗಿಸಿದವನು. 'ಡೆಮೋಸ್' (ಜನರು) 'ಕ್ರೆಟೋಸ್' (ಅಧಿಕಾರ) ಎಂಬೀ ಗ್ರೀಕ್ ಪದಗಳು ಸೇರಿ 'ಡೆಮೊಕ್ರಸಿ' (ಜನರ ಅಧಿಕಾರ/ ಆಡಳಿತ) ಎಂಬ ಪದವು ರೂಪುಗೊಂಡಿದೆ.


## ಪ್ರಜಾಪ್ರಭುತ್ವದಲ್ಲಿ ಎರಡು ವಿಧಗಳಿವೆ

ನೀವು ಗ್ರಾಮ ಸಭೆ / ವಾರ್ಡ್ ಸಭೆಯನ್ನು ಗಮನಿಸಿದ್ದೀರೋ?
ಅಲ್ಲಿ ಯಾವೆಲ್ಲ ವಿಷಯಗಳನ್ನು ಚರ್ಚಿಸುವರು?
ಗ್ರಾಮ ಸಭೆಯಲ್ಲಿ ಭಾಗವಹಿಸುವವರು ಯಾರೆಲ್ಲಾ?

### ಗ್ರಾಮಸಭೆ ಎಂದರೇನು?

ಒಂದು ಪ್ರದೇಶದ ಆಡಳಿತ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಎಲ್ಲಾ ಜನರು ಭಾಗವಹಿಸಲು ತೀರ್ಮಾನ ತೆಗೆಯಲು ಇರುವ ವೇದಿಕೆಯು ಗ್ರಾಮಸಭೆಯಾಗಿದೆ. ಒಂದು ಗ್ರಾಮ ಪಂಚಾಯತಿನ ಪ್ರತಿಯೊಂದು ವಾರ್ಡಿನಲ್ಲಿಯೂ ಮತದಾರ ಪಟ್ಟಿ (ವೋಟರ್ ಲಿಸ್ಟ್) ಯಲ್ಲಿ ಹೆಸರಿರುವ ಎಲ್ಲ ಜನರು ಗ್ರಾಮಸಭೆಯ ಸದಸ್ಯರಾಗಿರುವರು. ನಗರಗಳಲ್ಲಿ ಇವುಗಳನ್ನು ವಾರ್ಡ್ ಸಭೆಗಳೆನ್ನುವರು.

ಗ್ರಾಮ ಸಭೆ ಸೇರುವ ಚಿತ್ರವನ್ನು ನಿರೀಕ್ಷಣೆ ಮಾಡಿರಿ.




ಗ್ರಾಮಸಭೆಯಲ್ಲಿ ಜನರಿಗೆ ನೇರವಾಗಿ ಆಡಳಿತ ಕಾರ್ಯಗಳಲ್ಲಿ ಅಭಿಪ್ರಾಯ ಸೂಚಿಸಲು, ತೀರ್ಮಾನ ತೆಗೆಯಲು ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಂದರ್ಭ ಸಿಗುವುದು.


### ಸಹಭಾಗಿತ್ವ ಅಥವಾ ಪ್ರತ್ಯಕ್ಷ ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವ ವ್ಯವಸ್ಥೆಯೊಂದರ ಆಡಳಿತ ಪ್ರಕ್ರಿಯೆಯಲ್ಲಿ ಜನರಿಗೆ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗುವುದಾದರೆ ಅದನ್ನು ಸಹಭಾಗಿತ್ವ ಅಥವಾ ಪ್ರತ್ಯಕ್ಷ ಪ್ರಜಾಪ್ರಭುತ್ವ ಎನ್ನುವರು. ಜನಸಂಖ್ಯೆ ಮತ್ತು ಭೂಮಿಯ ವಿಸ್ತಾರ ಕಡಿಮೆಯಿರುವ ಪ್ರದೇಶಗಳಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವವಿರುವುದು.

ಗ್ರಾಮಸಭೆಯ ಕುರಿತು ಮತ್ತಷ್ಟು ವಿಷಯಗಳನ್ನು ಸಂಗ್ರಹಿಸಿ ಬರೆಯಿರಿ.

- 
- 

ವಿಧಾನಸಭಾ ಚಿತ್ರವನ್ನು ಗಮನಿಸಿರಿ.




ಕೇರಳ ವಿಧಾನಸಭೆ

ವಿಧಾನಸಭೆಯಲ್ಲಿ ನಮಗೆ ನೇರವಾಗಿ ಭಾಗವಹಿಸಬಹುದೇ?
ವಿಧಾನಸಭೆಯಲ್ಲಿ ನಮ್ಮ ಪರವಾಗಿ ಮಾತನಾಡುವವರು ಯಾರು?

ನಿಮ್ಮ ವಿಧಾನಸಭಾ ಕ್ಷೇತ್ರ ಯಾವುದು?

..................................................................................................

ನಿಮ್ಮ ವಿಧಾನಸಭಾ ಸದಸ್ಯರು (ಎಂ.ಎಲ್.ಎ) ಯಾರು?

..................................................................................................

### ಕೇರಳ ವಿಧಾನಸಭೆ



ಕೇರಳ ರಾಜ್ಯದ ಕಾನೂನು ರೂಪೀಕರಣ ಸಭೆಯು ಕೇರಳ ವಿಧಾನಸಭೆಯಾಗಿದೆ. ಇದು ತಿರುವನಂತಪುರದಲ್ಲಿದೆ. 1888ರಲ್ಲಿ ಸ್ಥಾಪಿಸಿದ ತಿರುವಾಂಕೂರು ಲೆಜಿಸ್ಲೇಟಿವ್ ಕೌನ್ಸಿಲ್, 1904ರಲ್ಲಿ ಸ್ಥಾಪಿತವಾದ ಶ್ರೀ ಮೂಲಂ ಪ್ರಜಾಸಭಾ ಮತ್ತು 1949ರ ತಿರುಕೊಚ್ಚಿ ನಿಯಮ ನಿರ್ಮಾಣ ಸಭೆ ಎಂಬಿವುಗಳು ಕೇರಳ ವಿಧಾನಸಭೆಯ ಆರಂಭಕ್ಕೆ ಕಾರಣವಾದ ವಿವಿಧ ಸಭೆಗಳು. ಕೇರಳ ವಿಧಾನಸಭೆಯ ಮೊದಲ ಅಧಿವೇಶನವು 1957 ಏಪ್ರಿಲ್ 27ರಂದು ನಡೆಯಿತು. ಪ್ರತಿ ವರ್ಷ ಏಪ್ರಿಲ್ 27ನ್ನು ಕೇರಳ ವಿಧಾನಸಭಾ ದಿನವಾಗಿ ಆಚರಿಸಲಾಗುವುದು.

ಗ್ರಾಮ ಸಭೆಯಲ್ಲಿ ಜನರು ನೇರವಾಗಿ ಭಾಗವಹಿಸುವಾಗ ವಿಧಾನಸಭೆಯಲ್ಲಿ ನಮ್ಮ ಪ್ರತಿನಿಧಿಗಳು ನಮ್ಮ ಪರವಾಗಿ ಭಾಗವಹಿಸಿ ಮಾತನಾಡುವರು.

## ಪರೋಕ್ಷ ಅಥವಾ ಪ್ರಾತಿನಿಧ್ಯ ಪ್ರಜಾಪ್ರಭುತ್ವ

ಜನರು ಆಯ್ಕೆ ಮಾಡುವ ಪ್ರತಿನಿಧಿಗಳು ಜನರಿಗೆ ಬೇಕಾಗಿ ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರಜಾಪ್ರಭುತ್ವ ವಿಧಾನವು ಪರೋಕ್ಷ ಪ್ರಜಾಪ್ರಭುತ್ವ ಅಥವಾ ಪ್ರಾತಿನಿಧ್ಯ ಪ್ರಜಾಪ್ರಭುತ್ವವಾಗಿದೆ. ಭಾರತದಂತಹ ಜನಸಂಖ್ಯೆ ಹೆಚ್ಚಳವಿರುವ ಹಾಗೂ ವಿಶಾಲವೂ ಆದ ದೇಶಗಳಲ್ಲಿ ಪರೋಕ್ಷ ಪ್ರಜಾಪ್ರಭುತ್ವ ಮಾತ್ರ ಪ್ರಾಯೋಗಿಕವಾಗಿದೆ.

ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪರೋಕ್ಷ ಪ್ರಜಾಪ್ರಭುತ್ವ ಪರಸ್ಪರ ಹೋಲಿಸಿ ಪಟ್ಟಿಯನ್ನು ಭರ್ತಿ ಮಾಡಿರಿ.

| ಪ್ರತ್ಯಕ್ಷ ಪ್ರಜಾಪ್ರಭುತ್ವ | ಪರೋಕ್ಷ ಪ್ರಜಾಪ್ರಭುತ್ವ |
|---|---|
| • ಜನಸಂಖ್ಯೆ ಕಡಿಮೆ ಇರುವ ದೇಶಗಳಲ್ಲಿ ಪ್ರಾಯೋಗಿಕವಾಗಿದೆ. | • ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಇರುವುದು. |
| • | • |
| • | • |
| • | • |

**ಮತ್ತಷ್ಟು ದೇಶಗಳನ್ನು ಕಂಡುಹಿಡಿಯುವ**

ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ.

ಸೌದಿ ಅರೇಬಿಯಾದಲ್ಲಿ ಹೊಸ ರಾಜರು ಅಧಿಕಾರ ವಹಿಸಿಕೊಂಡರು.

ಆಫ್ಘಾನಿಸ್ತಾನದಲ್ಲಿ ಪ್ರಜಾಪ್ರಭುತ್ವ ಆಡಳಿತ ಕೊನೆಗೊಂಡಿತು.

ಸ್ವಿಜರ್ ಲ್ಯಾಂಡ್‌ನಲ್ಲಿ ಈಗಲೂ ಸಹಭಾಗಿತ್ವ ಪ್ರಜಾಪ್ರಭುತ್ವ

ಮೇಲೆ ನೀಡಿರುವ ಶೀರ್ಷಿಕೆಗಳನ್ನು ಗಮನಿಸಿದಿರಲ್ಲವೇ? ಇದರಿಂದ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ಇರುವ ದೇಶಗಳು ಯಾವುವೆಂದು ಕಂಡುಹಿಡಿಯಿರಿ. ಮತ್ತಷ್ಟು ಪ್ರಜಾಪ್ರಭುತ್ವ ದೇಶಗಳನ್ನು ಕಂಡುಹಿಡಿಯಿರಿ.

- 
- 
- 
- 

**ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶೇಷತೆಗಳು**

- ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಪರಮಾಧಿಕಾರ
- ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ತಿಳಿಸುವ ಕಾನೂನಿನ ಆಡಳಿತ
- ಸ್ವತಂತ್ರ ಮತ್ತು ನೀತಿಯುಕ್ತವಾದ ಚುನಾವಣೆ
- ಜನರು ಮತ್ತು ಆಡಳಿತ ಒಕ್ಕೂಟದವರನ್ನು ಪರಸ್ಪರ ಜೊತೆ ಸೇರಿಸಲು ಸಹಾಯಕವಾದ ವಾರ್ತಾ ಮಾಧ್ಯಮಗಳು
- ವಿಮರ್ಶೆಗಳಿಂದ ಸರಕಾರದ ಆಡಳಿತ ಉತ್ತಮಗೊಳ್ಳಲು ಸಹಾಯಕವಾದ ವಿರೋಧಪಕ್ಷ
- ಸ್ವತಂತ್ರ ಮತ್ತು ನಿಷ್ಪಕ್ಷವಾದ ಕಾನೂನಿನ ವ್ಯವಸ್ಥೆ

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ವಿಶೇಷತೆಗಳ ಕುರಿತು ತರಗತಿಯಲ್ಲಿ ಚರ್ಚೆಯೊಂದನ್ನು ನಡೆಸಿರಿ.

## ಚುನಾವಣೆಯ ಮೂಲಕ










ಚುನಾವಣೆಗೆ ಸಂಬಂಧಿಸಿದ ಚಿತ್ರಗಳನ್ನು ಗಮನಿಸಿರಿ.

ನಿಮಗೆ ಚುನಾವಣೆಯಲ್ಲಿ ಭಾಗವಹಿಸಿ ಮತದಾನ ಮಾಡುವ ಅವಕಾಶ ಸಿಕ್ಕಿದೆಯೇ?

ಶಾಲಾ ಪಾರ್ಲಿಮೆಂಟ್ ಚುನಾವಣೆಯಲ್ಲಿ ಮತದಾನ ಮಾಡಿದ್ದು ಹೇಗೆ?

ನಿಮ್ಮ ರಕ್ಷಕರು ಸಾರ್ವಜನಿಕ ಚುನಾವಣೆಯಲ್ಲಿ ಮತದಾನ ಮಾಡುವರಲ್ಲವೇ?

ಸಾರ್ವಜನಿಕ ಚುನಾವಣೆಯಲ್ಲಿ ನಿಮಗೆ ಮತದಾನ ಮಾಡುವ ಹಕ್ಕು ಲಭಿಸದಿರಲು ಕಾರಣವೇನು?

### ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು

ಯಾವುದೇ ಭೇದಭಾವವಿಲ್ಲದೆ ನಿಶ್ಚಿತ ಪ್ರಾಯ ಪೂರ್ತಿಯಾದ ಪ್ರತಿಯೊಬ್ಬರೂ ಚುನಾವಣೆಯಲ್ಲಿ ಮತದಾನ ಮಾಡುವ ಅವಕಾಶವನ್ನು ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ಎಂದು ಕರೆಯುವರು. 1989 ರವರೆಗೆ ಭಾರತದಲ್ಲಿ ಮತದಾನ ಮಾಡುವ ಅರ್ಹತಾ ಪ್ರಾಯ 21 ಆಗಿತ್ತು. ಈಗ ಅದು 18 ಆಗಿದೆ.

18 ವರ್ಷವಾಗಿದೆ ಎನ್ನುವ ಕಾರಣಕ್ಕೆ ಓರ್ವ ವ್ಯಕ್ತಿಗೆ ಮತದಾನದ ಹಕ್ಕು ಲಭಿಸುವುದೇ?

## ಚುನಾವಣೆಯ ವಿವಿಧ ಹಂತಗಳು


**ಶಾಲಾ ಪಾರ್ಲಿಮೆಂಟ್ ಚುನಾವಣಾ ವಿಜ್ಞಾಪನೆ**

| | | |
|---|---|---|
| ನಾಮಪತ್ರವನ್ನು ಸಲ್ಲಿಕೆಯ ಕೊನೆಯ ದಿನಾಂಕ | ಜುಲೈ 31 | 04 pm ವರೆಗೆ |
| ನಾಮಪತ್ರದ ಸೂಕ್ಷ್ಮ ಪರಿಶೀಲನೆ ಮಾಡುವುದು. | ಆಗಸ್ಟ್ 3 | 12 pm |
| ನಾಮಪತ್ರ ಹಿಂತೆಗೆಯುವ ದಿನಾಂಕ | ಆಗಸ್ಟ್ 4 | 04 pm ವರೆಗೆ |
| ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ | ಆಗಸ್ಟ್ 7 | 10 am |
| ಮತದಾನದ ದಿನಾಂಕ | ಆಗಸ್ಟ್ 9 | 11 am−01 pm ವರೆಗೆ |
| ಮತ ಎಣಿಕೆ ಮತ್ತು ಫಲಿತಾಂಶ ಘೋಷಣೆ | ಆಗಸ್ಟ್ 9 | 02 pm |
| ಶಾಲಾ ಪಾರ್ಲಿಮೆಂಟಿನ ಮೊದಲ ಸಭೆ | ಆಗಸ್ಟ್ 10 | 02 pm |

ಶಾಲಾ ಪಾರ್ಲಿಮೆಂಟ್ ಚುನಾವಣೆಗೆ ಸಂಬಂಧಿಸಿದ ಯಾವೆಲ್ಲ ವಿಷಯಗಳನ್ನು ನೋಟಿಸ್ ಬೋರ್ಡಿನಲ್ಲಿ ಹಾಕಲಾಗಿದೆ? ಪಟ್ಟಿ ಮಾಡಿರಿ.

- ಮತದಾನದ ವಿಜ್ಞಾಪನೆ
-
-
-
-
-


ನಮ್ಮ ದೇಶದ ಚುನಾವಣೆಯು ಇದರಂತೆ ವಿವಿಧ ಹಂತಗಳ ಮೂಲಕ ಹಾದು ಹೋಗುವುದು. ಅವುಗಳು ಯಾವುವೆಂದು ತಿಳಿದುಕೊಳ್ಳುವ?




ಚುನಾವಣೆಯ ವಿವಿಧ ಹಂತಗಳನ್ನು ಅನುಸರಿಸಿ, ತರಗತಿಯಲ್ಲಿ ಒಂದು ಅಣಕು ಚುನಾವಣೆಯನ್ನು ಸಂಘಟಿಸಿರಿ.

## ಚುನಾವಣೆಗಳು ಯಾಕಾಗಿ?

ಚುನಾವಣೆಯು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಅಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಾಗಿದೆ. ಅದಲ್ಲದೆ ಇತರ ಕೆಲವೊಂದು ಕಾರ್ಯಗಳು ಚುನಾವಣೆಯ ಮೂಲಕ ನಿರ್ವಹಿಸಲ್ಪಡುವುವು.




ಚುನಾವಣೆಯ ವಿವಿಧ ಕಾರ್ಯಗಳನ್ನು ಬರೆದ ಚೀಟಿಗಳನ್ನು ತಯಾರಿಸಿ ಪೆಟ್ಟಿಗೆಯಲ್ಲಿ ಹಾಕಿರಿ. ತರಗತಿಯನ್ನು ವಿವಿಧ ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿನಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಪ್ರತಿ ಗುಂಪಿನ ಪ್ರತಿನಿಧಿಯು ಪೆಟ್ಟಿಗೆಯಿಂದ ಚೀಟಿಯನ್ನು ತೆಗೆಯಬೇಕು. ಸಿಕ್ಕಿದ ಚೀಟಿಯಲ್ಲಿರುವ ಚುನಾವಣೆಯ ಕಾರ್ಯವನ್ನು ಗುಂಪಿನಲ್ಲಿ ಚರ್ಚಿಸಬೇಕು. ಚರ್ಚಾ ಟಿಪ್ಪಣಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಬೇಕು.


### ಕೇಂದ್ರ ಚುನಾವಣಾ ಆಯೋಗ




ರಾಷ್ಟ್ರಪತಿ, ಉಪರಾಷ್ಟ್ರಪತಿ ಪದವಿಗಳಿಗೆ ಹಾಗೂ ಪಾರ್ಲಿಮೆಂಟ್‌ನ ಮತ್ತು ಪ್ರಾಂತ್ಯ ವಿಧಾನಸಭೆಗಳ ಚುನಾವಣೆಗಳನ್ನು ಸ್ವತಂತ್ರವೂ ನೀತಿಯುಕ್ತವಾಗಿ ನಡೆಸುವುದು ಚುನಾವಣಾ ಆಯೋಗದ ಜವಾಬ್ದಾರಿಯಾಗಿದೆ. ಚುನಾವಣಾ ಆಯೋಗದಲ್ಲಿ ಮುಖ್ಯ ಚುನಾವಣಾ ಅಧಿಕಾರಿ ಸಹಿತ ಮೂರು ಸದಸ್ಯರನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆ.

## ಪ್ರಜಾಪ್ರಭುತ್ವ ಒಂದು ಜೀವನ ಕ್ರಮ








ಚಿತ್ರವನ್ನು ಗಮನಿಸಿರಿ. ಇಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವವರು ಯಾರು?

ಎಲ್ಲರ ಅಭಿಪ್ರಾಯಗಳನ್ನು ಪರಿಗಣಿಸಿಕೊಂಡು ತೀರ್ಮಾನ ತೆಗೆದಾಗ ಮಾತ್ರವೇ ಆ ಕುಟುಂಬದಲ್ಲಿ ಪ್ರಜಾಪ್ರಭುತ್ವ ರೀತಿಯ ಜೀವನ ಕ್ರಮ ಇರಲು ಸಾಧ್ಯ.

## ವಿದ್ಯಾಲಯದಲ್ಲಿ ಪ್ರಜಾಪ್ರಭುತ್ವ








ಮೇಲೆ ನೀಡಿರುವ ಚಿತ್ರಗಳನ್ನು ಗಮನಿಸಿರಿ. ಇವು ಪ್ರಜಾಪ್ರಭುತ್ವವನ್ನು ಖಾತರಿಪಡಿಸುವಲ್ಲಿ ಯಾವ ಪಾತ್ರ ವಹಿಸುವುದು? ಚರ್ಚೆ ನಡೆಸಿರಿ.

ಮಕ್ಕಳ ಅಭಿಪ್ರಾಯ ಮತ್ತು ಆಸಕ್ತಿಯನ್ನು ಪರಿಗಣಿಸುವುದರೊಂದಿಗೆ ಅವರಿಗೆ ಅವಕಾಶ ಮತ್ತು ಸಮಾನತೆಯನ್ನು ಖಾತರಿಪಡಿಸಿದಾಗ ವಿದ್ಯಾಲಯದಲ್ಲಿ ಪ್ರಜಾಪ್ರಭುತ್ವದ ಆಶಯವು ಪ್ರಾಯೋಗಿಕವಾಗುವುದು.

## ಸಾರ್ವಜನಿಕ ಸ್ಥಳಗಳಲ್ಲಿ ಪ್ರಜಾಪ್ರಭುತ್ವ

ಕೆಳಗಿನ ಯಾವೆಲ್ಲ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದ ಆಶಯವನ್ನು ಪಾಲಿಸುತ್ತಾರೆ?









ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿ ಸಂರಕ್ಷಿಸುವುದು, ಇತರರ ಆಸಕ್ತಿಯನ್ನು ಗೌರವಿಸುವುದು, ಸಾರ್ವಜನಿಕ ನಿಯಮಗಳನ್ನು ಪಾಲಿಸುವುದು ಇತ್ಯಾದಿಗಳು ಪ್ರಜಾಪ್ರಭುತ್ವ ಜೀವನ ಕ್ರಮಕ್ಕೆ ಅನಿವಾರ್ಯವಾಗಿರುವುದು.

### ಪ್ರಜಾಪ್ರಭುತ್ವ ಎಲ್ಲಿಯವರೆಗೆ

ಕೆಳಗೆ ನೀಡಿರುವ ಚೆಕ್ ಲಿಸ್ಟನ್ನು ಭರ್ತಿ ಮಾಡಿರಿ. ಪ್ರಜಾಪ್ರಭುತ್ವವನ್ನು ಜೀವನ ಕ್ರಮವಾಗಿ ನಾವೆಷ್ಟು ಸ್ವೀಕರಿಸಿದ್ದೇವೆ ಎಂದು ಪರಿಶೋಧಿಸೋಣ.

| | |
|---|---|
| ಮನೆಯಲ್ಲಿ ಪ್ರಮುಖ ತೀರ್ಮಾನ ತೆಗೆಯುವ ಸಂದರ್ಭಗಳಲ್ಲಿ ನನ್ನ ಅಭಿಪ್ರಾಯವನ್ನು ಪರಿಗಣಿಸುವರು. | ಹೌದು/ ಇಲ್ಲ |
| ಸಾರ್ವಜನಿಕ ಸ್ಥಳ ಮತ್ತು ಸಾರ್ವಜನಿಕ ವಾಹನಗಳನ್ನು ಶುಚಿಯಾಗಿರಿಸಲು ಕಾಳಜಿ ವಹಿಸುತ್ತೇವೆ. | ಹೌದು/ ಇಲ್ಲ |
| ಶಾಲೆಯಿಂದ ಶೈಕ್ಷಣಿಕ ಪ್ರವಾಸ ಹೋಗುವ ಸ್ಥಳಗಳನ್ನು ತೀರ್ಮಾನಿಸುವಾಗ ಅಭಿಪ್ರಾಯಗಳನ್ನು ಹೇಳುವೆವು. | ಹೌದು/ ಇಲ್ಲ |
| ಪ್ರಯಾಣದಲ್ಲಿ ಸಹಪ್ರಯಾಣಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸುವುದಿಲ್ಲ. | ಹೌದು/ ಇಲ್ಲ |
| ರಸ್ತೆ ನಿಯಮಗಳನ್ನು ಪಾಲಿಸುವೆವು. | ಹೌದು/ ಇಲ್ಲ |
| ಇಷ್ಟವಿರುವ ವಿಷಯವನ್ನು ಕಲಿಯುವ ಸ್ವಾತಂತ್ರ್ಯ ಇದೆ. | ಹೌದು/ ಇಲ್ಲ |
| ಸಾರ್ವಜನಿಕ ಸ್ಥಳಗಳಲ್ಲಿ ಮಾಲಿನ್ಯ ಎಸೆಯುವುದಿಲ್ಲ. | ಹೌದು/ ಇಲ್ಲ |

ಆಡಳಿತಾಧಿಕಾರಿಗಳನ್ನು ಆಯ್ಕೆ ಮಾಡುವುದು ಮಾತ್ರವಲ್ಲದೆ ಜೀವನದ ಎಲ್ಲಾ ಹಂತಗಳಲ್ಲಿ ಪ್ರಜಾಪ್ರಭುತ್ವ ಆಶಯವನ್ನು ಅನುಸರಿಸಬೇಕಾಗಿದೆ. ಆಹಾರ, ಉಡುಪು, ಉದ್ಯೋಗ ಇತ್ಯಾದಿಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ, ಸ್ವತಂತ್ರವಾಗಿ ಅಭಿಪ್ರಾಯಗಳನ್ನು ತಿಳಿಸುವ ಸಂದರ್ಭಗಳು ಪ್ರಜಾಪ್ರಭುತ್ವ ಸಮಾಜದ ವಿಶೇಷತೆಗಳಾಗಿದೆ. ಅಲ್ಲದೆ ಸಮಾನ ಪದವಿ, ಸಮಾನ ಅವಕಾಶ, ಸಂಪತ್ತಿನ ಮೇಲಿನ ಸಮಾನ ಅವಕಾಶ ಇತ್ಯಾದಿ ಸನ್ನಿವೇಶಗಳನ್ನು ಕೂಡ ಅನುಭವಿಸುವಾಗ ಪ್ರಜಾಪ್ರಭುತ್ವ ಆಶಯ ಸಾರ್ಥಕವಾಗುವುದು.

## ಮುಂದುವರಿದ ಚಟುವಟಿಕೆಗಳು

1. ಚುನಾವಣೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.
2. ಗ್ರಾಮ ಸಭೆ /ವಾರ್ಡ್ ಸಭೆ, ವಿಧಾನಸಭೆ ಇತ್ಯಾದಿಗಳ ಕುರಿತು ಮತ್ತಷ್ಟು ಮಾಹಿತಿಗಾಗಿ ವಾರ್ಡ್ ಮೆಂಬರ್ /ಕೌನ್ಸಿಲರ್, ಎಂ.ಎಲ್.ಎ ಜೊತೆಗೆ ಸಂದರ್ಶನ ನಡೆಸುವುದಕ್ಕಿರುವ ಪ್ರಶ್ನಾವಳಿಯನ್ನು ಟೀಚರ ಸಹಾಯದಿಂದ ತಯಾರಿಸಿರಿ. ಅಲ್ಲದೆ ಗ್ರಾಮ ಸಭೆ / ವಾರ್ಡ್ ಸಭೆ, ವಿಧಾನ ಸಭೆ ಮುಂತಾದವುಗಳನ್ನು ಸಂದರ್ಶಿಸಿರಿ.
3. ಪ್ರಜಾಪ್ರಭುತ್ವದ ವಿಶೇಷತೆಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ ಸೆಮಿನಾರ್ ನಡೆಸಿರಿ.
4. ಎಲ್ಲಾ ದೇಶಗಳಲ್ಲಿಯೂ ವಯಸ್ಕ ಮತದಾನದ ಅರ್ಹತಾ ಪ್ರಾಯ 18 ಆಗಿದೆಯೇ? ವಿವಿಧ ದೇಶಗಳ ಮತದಾನದ ಅರ್ಹತಾ ಪ್ರಾಯವನ್ನು ಕಂಡುಕೊಂಡು ಪಟ್ಟಿ ತಯಾರಿಸಿರಿ.
5. ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್ (EVM ) ಮಾದರಿಯನ್ನು ತಯಾರಿಸಿ ಸಮಾಜ ವಿಜ್ಞಾನ ಲ್ಯಾಬ್‌ನಲ್ಲಿ ಪ್ರದರ್ಶಿಸಿರಿ.

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು

# ಭಾರತದ ಸಂವಿಧಾನ

## ಭಾಗ IV ಕ
## ಮೂಲಭೂತ ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ:**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ. ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು. ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಯನ್ನು ಬಿಟ್ಟುಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು. ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾದ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣಾ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನುಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ :*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀಗಣೇಶ್', ಟಿ.ಸಿ. 14/2036, ವಾನ್ ರೋಡ್ ಜಂಕ್ಷನ್,
ಕೇರಳ ಯುನಿವರ್ಸಿಟಿ, ಪಿ.ಒ ತಿರುವನಂತಪುರ – 34
ಫೋನ್ 0471 – 2326603
ಈ ಮೈಲ್ childrights.cpcr@kerala.gov.in, rte.cpcr@kerala.gov.in
ವೆಬ್ ಸೈಟ್ : www.kescpcr.kerala.gov.in

ಮಕ್ಕಳ ಸಹಾಯವಾಣಿ - 1098, ಅಪರಾಧ ನಿಯಂತ್ರಣ - 1090, ನಿರ್ಭಯ – 1800 425 1400
ಕೇರಳ ಪೋಲೀಸ್ ಸಹಾಯವಾಣಿ - 0471 – 3243000/44000/45000


*online* ***R.T.E Monitoring : www.nireekshana.org.in***